ಸಂಪುಟ: 05 ಸಂಚಿಕೆ: 70 ಪುಟಗಳು: 08 ಶನಿವಾರ 24 ಮೇ 2025

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಧ್ಯಾನಕ್ಕೆ ವಿಶಿಷ್ಟ ಶಕ್ತಿಯಿದೆ. ದಾನ ಮಾಡಿದಷ್ಟು ವ್ಯಕ್ತಿಯ ಆತ್ಮವು ಶುದ್ಧವಾಗುತ್ತದೆ.

## ಮಾರಾಟ ಕ್ರಯಪತ್ರ ನಂತರ ಭೂಮಾಲೀಕರಿಗೆ ಜಾಗದ ಹಕ್ಕಿಲ್ಲ

**ಕರ್ನಾಟಕ ಹೈಕೋರ್ಟ್ ಆದೇಶ**

• ಉದಯವಾಹಿನಿ, ಬೆಂಗಳೂರು

ವಸತಿ ಸಂಕೀರ್ಣ ನಿರ್ಮಾಣ ಉದ್ದೇಶಕ್ಕೆ ಒಮ್ಮೆ ಇಡೀ ಪ್ರದೇಶದ ಮಾರಾಟದ ಕುರಿತು ಕ್ರಯಪತ್ರ ಮಾಡಿಕೊಂಡ ಮೇಲೆ ಭೂ ಮಾಲೀಕರು ಅದರಲ್ಲಿ ಅಲ್ಪ ಭಾಗವನ್ನು ಉಳಿಸಿಕೊಳ್ಳಲಾಗದು ಎಂದು ಕರ್ನಾಟಕ ಹೈಕೋರ್ಟ್ ಆದೇಶ ನೀಡಿದೆ.

ಕೀರ್ತಿ ಹಾರ್ಮೋನಿ ಅಪಾರ್ಟ್‌ಮೆಂಟ್ ಓನರ್ಸ್ ಅಸೋಸಿಯೇಷನ್ ಸಲ್ಲಿಸಿದ್ದ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಾಲಯ, ಬಿಬಿಎಂಪಿಯು ವಸತಿ ಸಂಕೀರ್ಣ ನಿರ್ಮಾಣಕ್ಕೆ ಹನುಮಂತರೆಡ್ಡಿ ಎಂಬುವರಿಗೆ ಲೈಸೆನ್ಸ್ ಮಂಜೂರು ಮಾಡಿದ್ದನ್ನು ರದ್ದುಗೊಳಿಸಿದೆ. ವಾದ – ಪ್ರತಿವಾದ ಆಲಿಸಿದ ಬಳಿಕ ನ್ಯಾಯಪೀಠ, ಕರ್ನಾಟಕ ಓನರ್‌ಶಿಪ್ ಫ್ಲಾಟ್ಸ್ (ನಿರ್ಮಾಣ, ಮಾರಾಟ, ನಿರ್ವಹಣೆ ಮತ್ತು ಹಸ್ತಾಂತರ ನಿಯಂತ್ರಣ) ಕಾಯಿದೆ– 1972ರಡಿ ವಸತಿ ಸಂಕೀರ್ಣದಲ್ಲಿ ಫ್ಲ್ಯಾಟ್ ಖರೀದಿಗೆ ಒಪ್ಪಿರುವ ವ್ಯಕ್ತಿಗಳ ಒಪ್ಪಿಗೆ ಇಲ್ಲದೆ ನಿರ್ಮಾಣ ಕಾರ್ಯದಲ್ಲಿ ಯಾವುದೇ ಬದಲಾವಣೆ ಮಾಡಲಾಗದು. 2007ರ ಮಾ.29ರಂದು ಬಿಡಿಎ ಅನುಮೋದನೆ ನೀಡಿರುವ ಯೋಜನೆಯಂತೆ ರಸ್ತೆಗೆ ಹೊಂದಿಕೊಂಡ ಜಾಗದಲ್ಲಿ ಮಳೆ ನೀರು ಕೊಯ್ಲು ಹಾಗೂ ಎಸ್‌ಟಿಪಿ ನಿರ್ಮಾಣ ಮಾಡಬೇಕು. ಆದರೆ, ಬಿಲ್ಡರ್ ಅದನ್ನು ಬದಲಾವಣೆ ಮಾಡಲಾಗದು ಎಂದು ಆದೇಶ ನೀಡಿದೆ. ಒಂದು ವೇಳೆ ಯೋಜನಾ ಪ್ರಾಧಿಕಾರ ಮಳೆ ನೀರು ಕೊಯ್ಲು ಮತ್ತು ಎಸ್‌ಟಿಪಿ ಜಾಗ ಬದಲಾವಣೆಗೆ ಒಪ್ಪಿಕೊಂಡರೂ ವಸತಿ ಸಂಕೀರ್ಣದಲ್ಲಿ ಫ್ಲ್ಯಾಟ್‌ಗಳನ್ನು ಖರೀದಿ ಮಾಡಲು ಒಪ್ಪಿಕೊಂಡಿರುವವರ ಒಪ್ಪಿಗೆ ಪಡೆಯಬೇಕು ಎಂದು ಆದೇಶಿಸಿದೆ. ಕರ್ನಾಟಕ ಅಪಾರ್ಟ್ ಮೆಂಟ್ ಓನರ್‌ಶಿಪ್ ಕಾಯಿದೆ – 1972 ಉಲ್ಲೇಖಿಸಿರುವ ನ್ಯಾಯಪೀಠ, 'ಡೀಡ್ ಆಫ್ ಡಿಕ್ಲರೇಷನ್ ಅನ್ನು ಅಪಾರ್ಟ್‌




ಮೆಂಟ್ ಮಾಲೀಕರು ಜಾರಿಗೊಳಿಸಿದ್ದಾರೆ. ಕಾಮನ್ ಏರಿಯಾ ಮೇಲೆ ಎಲ್ಲಾರ ಹಕ್ಕಿದೆ. ಇಡೀ ಕಟ್ಟಡದ ಪ್ರದೇಶವು ಕಾಮನ್ ಏರಿಯಾ ಆಗುತ್ತದೆ ಎಂದು ಹೇಳಿದೆ. ಅರ್ಜಿ ಮಾನ್ಯ ಮಾಡಿರುವ ನ್ಯಾಯಾಲಯ, ಹಿಂದಿನ ಭೂ ಮಾಲೀಕರು ಒಟ್ಟು ಕ್ರಯಪತ್ರ ಮಾಡಿಕೊಂಡ ಜಾಗದಲ್ಲಿ 1104.40 ಚದರಡಿ ಜಾಗವನ್ನು ತಮ್ಮಲ್ಲೇ ಉಳಿಸಿಕೊಳ್ಳುವುದಾಗಿ ತಿಳಿಸಿದ್ದ ಮನವಿಯನ್ನು ಬಿಬಿಎಂಪಿ ಪುರಸ್ಕರಿಸಿ ನಕ್ಷೆ ಅನುಮೋದನೆ ನೀಡಬಾರದಿತ್ತು ಎಂದು ಆದೇಶ ನೀಡಿದೆ.

2005ರ ಜನವರಿ 28 ರಂದು ಮೆಸರ್ಸ್ ಕೀರ್ತಿ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್ ಭೂಮಾಲೀಕರೊಂದಿಗೆ ಜಂಟಿ ಅಭಿವೃದ್ಧಿ ಒಪ್ಪಂದ (ಜೆಡಿಎ) ಮಾಡಿಕೊಂಡಿತ್ತು. ಅದರಂತೆ ಭೂ ಮಾಲೀಕರಿಗೆ ಸೇರಿದ 5 ಎಕರೆ 16 ಗುಂಟೆ ಪ್ರದೇಶದಲ್ಲಿ ಅಂದರೆ 2,35,224 ಚದರಡಿ ಜಾಗದಲ್ಲಿ ವಸತಿ ಸಂಕೀರ್ಣ ಅಭಿವೃದ್ಧಿಪಡಿಸಿ, ಜೆಡಿಎ ಒಪ್ಪಂದದಂತೆ ಅಭಿವೃದ್ಧಿಪಡಿಸಿದ ಭಾಗವನ್ನು ಭೂಮಾಲೀಕರೊಂದಿಗೆ ಹಂಚಿಕೊಳ್ಳಬೇಕಾಗಿತ್ತು. ಆನಂತರ ಬಿಡಿಎ ಬಿಲ್ಡರ್ ಸಲ್ಲಿಸಿದ್ದ ಪ್ಲ್ಯಾನ್‌ಗೆ ಅನುಮೋದನೆ ನೀಡಿತ್ತು. ಅದರಲ್ಲಿ ಎರಡು ರಸ್ತೆಗಳಿಗೆ ಜಾಗ ಮೀಸಲಿಡಲಾಗಿತ್ತು. ಇಡೀ ಭೂ ಪ್ರದೇಶವನ್ನು ಎರಡು ಭಾಗಗಳಾಗಿ ವಿಂಗಡಿಸಿ, ಪ್ರಮುಖ ಜಾಗದಲ್ಲಿ ವಸತಿ ಸಂಕೀರ್ಣ ನಿರ್ಮಿಸಲು ಉದ್ದೇಶಿಸಲಾಗಿತ್ತು. ಜತೆಗೆ, 1104.40 ಚದರ ಮೀಟರ್ ಜಾಗದಲ್ಲಿ ಮಳೆ ನೀರು ಕೊಯ್ಲು ಮತ್ತು ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಮಾಡಬೇಕಿತ್ತು. ಅದರಂತೆ ಕ್ರಯಪತ್ರ ಮಾಡಿಕೊಳ್ಳಲಾಗಿತ್ತು. ಆದರೆ, 2018ರ ಏ.3ರಂದು ಭೂ ಮಾಲೀಕರು ಬಿಬಿಎಂಪಿಗೆ ವಸತಿ ಸಂಕೀರ್ಣ ನಿರ್ಮಾಣಕ್ಕೆ ಅರ್ಜಿ ಸಲ್ಲಿಸಿದ್ದರು. ಭೂ ಮಾಲೀಕರು ಕ್ರಯಪತ್ರ ಮಾಡಿಕೊಂಡಿದ್ದ ಭೂಮಿಯಲ್ಲಿ ಸ್ವಲ್ಪ ಭಾಗವನ್ನು ಅಂದರೆ 1104.04 ಚದರಡಿ ಜಾಗವನ್ನು ತಾವೇ ಇರಿಸಿಕೊಂಡಿದ್ದರು. ಅದರ ನಡುವೆಯೇ ಬಿಬಿಎಂಪಿ ವಸತಿ ಸಂಕೀರ್ಣ ನಿರ್ಮಾಣ ಯೋಜನೆಗೆ ಅನುಮೋದನೆ ನೀಡಿತ್ತು. ಹಾಗಾಗಿ, ಜೆಡಿಎ ಮಾಡಿಕೊಂಡಿದ್ದ ಬಿಲ್ಡರ್ ನ್ಯಾಯಾಲಯದ ಮೊರೆ ಹೋಗಿದ್ದರು.

## ಬೆಂಗಳೂರಿನ ಜ್ಞಾನಭಾರತಿ ಕ್ಯಾಂಪಸ್ಸಿಗೆ ಪಾರಂಪರಿಕ ತಾಣ ಪಟ್ಟ

• ಉದಯವಾಹಿನಿ, ಬೆಂಗಳೂರು



ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣವನ್ನು ಪಾರಂಪರಿಕ ತಾಣ ಎಂದು ಘೋಷಿಸುವ ನಿಟ್ಟಿನಲ್ಲಿ ಸಾಧ್ಯಾಸಾಧ್ಯತೆಗಳನ್ನು ಪರಿಶೀಲಿಸಲು ಅರಣ್ಯ ಇಲಾಖೆ ಸಿದ್ಧತೆ ನಡೆಸಿದೆ. ಆಮ್ಲಜನಕದ ಕಣಜದಂತಿರುವ ಮತ್ತು ನಗರದ ಕಿರು ಅರಣ್ಯವಾಗಿರುವ ಜ್ಞಾನಭಾರತಿ ಆವರಣದಲ್ಲಿ ಉನ್ನತ ಶಿಕ್ಷಣ ಇಲಾಖೆ ಮತ್ತು ಬಿಬಿಎಂಪಿ ವಿವಿಧ ನಿರ್ಮಾಣ ಕಾಮಗಾರಿಗಳನ್ನು ಹಮ್ಮಿಕೊಳ್ಳಲು ನಿರ್ಧರಿಸಿವೆ. ಇದಕ್ಕಾಗಿ, ಈಗಾಗಲೇ ಅಗತ್ಯವಿರುವ ಜಾಗದ ಬೇಡಿಕೆ ಮುಂದಿಟ್ಟಿವೆ. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯ (ಯುವಿಸಿಇ) ಸ್ಥಾಪಿಸಲು ಆವರಣದ ಬಯೋ ಪಾರ್ಕ್ ಭಾಗ–8ರ 50 ಎಕರೆ ಜಾಗ ಗುರುತಿಸಲಾಗಿತ್ತು. ಇದನ್ನು ವಿರೋಧಿಸಿ, ಜ್ಞಾನಭಾರತಿ ವಾಯುವಿಹಾರಿಗಳ ಸಂಘವು ರಾಜ್ಯಪಾಲರಿಗೆ ದೂರು ನೀಡಿತ್ತು. ಈ ಹಿನ್ನೆಲೆಯಲ್ಲಿ ಈ ಜಾಗಕ್ಕೆ ಸಂಬಂಧಿಸಿದಂತೆ ವೈಜ್ಞಾನಿಕ ವರದಿ ನೀಡುವಂತೆ ರಾಜ್ಯಪಾಲರು ಕೇಳಿದ್ದರು.

ಕಾಲೇಜು ನಿರ್ಮಾಣ ಪ್ರಸ್ತಾವನೆಯನ್ನು ಪರಿಶೀಲಿಸಿ, ವರದಿ ತಯಾರಿಸಲು ಬೆಂಗಳೂರು ವಿವಿಯು ಸಮಿತಿಯೊಂದನ್ನು ರಚಿಸಿತ್ತು. ವರದಿ ಸಲ್ಲಿಕೆಯಾಗುವ ಮುನ್ನವೇ, ಉನ್ನತ ಶಿಕ್ಷಣ ಇಲಾಖೆ ಸಚಿವ ಡಾ.ಎಂ.ಸಿ.ಸುಧಾಕರ್, ಯುವಿಸಿಇ ನಿರ್ಮಾಣಕ್ಕೆ 50 ಎಕರೆ ಜಾಗ ಗುರುತಿಸಿರುವುದು ಸಾಕಾಗುವುದಿಲ್ಲ. ಹಾಗಾಗಿ, 200ರಿಂದ 300 ಎಕರೆ ಭೂಮಿ ಬೇಕಾಗಿದ್ದು, ಇದಕ್ಕೆ ಸಂಬಂಧಿಸಿದಂತೆ ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ಕಳೆದ ಅಕ್ಟೋಬರ್ 7ರಂದು ವಿವಿ ಕುಲಪತಿಗೆ ಪತ್ರ ಬರೆದಿದ್ದರು.

## ರಾಮನಗರಕ್ಕೆ ಬೆಂಗಳೂರು ಹೆಸರು ಸೇರಿದ್ದೇ ಲ್ಯಾಂಡ್ ಮಾಫಿಯಾಕ್ಕಾಗಿ

• ಉದಯವಾಹಿನಿ, ಮಂಗಳೂರು

ಬೆಂಗಳೂರು ಎನ್ನುವ ಪದದಲ್ಲೇ ಲ್ಯಾಂಡ್ ಮಾಫಿಯಾ ಇದೆ. ರಾಮನಗರದ ಹೆಸರು ಬದಲಿಗೆ ಬೆಂಗಳೂರು ಸೇರಿಸಿದ್ದೇ ಲ್ಯಾಂಡ್ ಮಾಫಿಯಾಕ್ಕಾಗಿ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಕಿಡಿಕಾರಿದ್ದಾರೆ. ಸುಳ್ಯದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಬೆಂಗಳೂರು ಸುತ್ತ ಯಾರು ಲ್ಯಾಂಡ್ ಮಾಫಿಯಾ ಮಾಡುತ್ತಿದ್ದಾರೋ ಅವರಿಗೆ ರಾಮನಗರ ಹೆಸರು ಬೇಕಾಗಿಲ್ಲ. ಅವರಿಗೆ ಬೆಂಗಳೂರು ಹೆಸರು ಬೇಕು. ಯಾಕೆಂದರೆ ಅವರ ಜಮೀನಿಗೆ ವ್ಯಾಲ್ಯೂ ಬರಬೇಕು. ಈ ಕಾರಣಕ್ಕಾಗಿ ರಾಮನಗರ ಹೆಸರು ತೆಗೆದು ಲ್ಯಾಂಡ್ ಮಾಫಿಯಾ ಶಕ್ತಿಗಳು, ದೊಡ್ಡ ದೊಡ್ಡ ಕುಳಗಳು ಬೆಂಗಳೂರು ದಕ್ಷಿಣ ಎಂದು ಮಾಡಿದ್ದಾರೆ ಎಂದು ಆಕ್ರೋಶ ಹೊರಹಾಕಿದ್ದಾರೆ. ರೈತರ ಜಮೀನು ಕಿತ್ಕೊಂಡು, ಬೇರೆಯವರಿಗೆ ಕೊಡುವ ದೊಡ್ಡ ಷಡ್ಯಂತ್ರ ಇದರ ಹಿಂದೆ ಅಡಗಿದೆ ರಾಮನಗರ ಜಿಲ್ಲೆಯ ಹೆಸರು ಉಳಿಸಲು ಅಲ್ಲಿನ ಜನರು ಆಗ್ರಹ ಮಾಡಬೇಕು ಎಂದಿದ್ದಾರೆ.

## ಒತ್ತುವರಿದಾರರಿಗೆ ಬಿಗ್ ಶಾಕ್, ಫೀಲ್ಡ್‌ಗಿಳಿದ ಅಧಿಕಾರಿಗಳು

• ಉದಯವಾಹಿನಿ, ಬೆಂಗಳೂರು

ಬೆಂಗಳೂರಿನಲ್ಲಿ ಸುರಿದ ಭಾರಿ ಮಳೆಗೆ ದೊಡ್ಡ ಅವಾಂತರವೇ ಸೃಷ್ಠಿಯಾಗಿತ್ತು. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿಕೆ ಶಿವಕುಮಾರ್ ಖುದ್ದು ಫೀಲ್ಡ್‌ಗಿಳಿದು ಸಮಸ್ಯೆಯನ್ನು ಆಲಿಸಿದರು. ಮಳೆ ನೀರು ರಸ್ತೆಯ ಮೇಲೆ ಹೆಚ್ಚಾಗಿ ಹರಿಯಲು ಕಾರಣಗಳು ಹಾಗೂ ಕೆಲವೆಡೆ ನೀರು ನಿಂತಲ್ಲೇ ನಿಲ್ಲಲು ಕಾರಣಗಳೇನು ಎಂಬುವುದರ ಬಗ್ಗೆ ಸ್ಥಳದಲ್ಲೇ ಅಧಿಕಾರಿಗಳಿಂದ ಮಾಹಿತಿ ಪಡೆದರು. ಕೆಲವರು ಅತಿಕ್ರಮವಾಗಿ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡಿದ್ದಾರೆಂದು ಸಿಎಂ ಸಿದ್ದರಾಮಯ್ಯಗೆ ಅಧಿಕಾರಿಗಳು ತಿಳಿಸಿದರು. ಕೂಡಲೇ ಅದನ್ನು ಪರಿಶೀಲಿಸಿ ಮುಲಾಜಿಲ್ಲದೇ ಒತ್ತುವರಿ ತೆರವುಗೊಳಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸದ್ಯ ಈದೀಗ ಬಿಬಿಎಂಪಿ ರಾಜಕಾಲುವೆ ಒತ್ತುವರಿ ಗುರುತಿಸಲು ಮುಂದಾಗಿದ್ದು, ಕಂದಾಯ ಇಲಾಖೆ ಜೊತೆ ಸಭೆಯನ್ನು ಮಾಡಿ ಕೂಡಲೇ ತೆರವಿಗೆ ಇಲಾಖೆ ಸಿದ್ಧವಾಗುತ್ತಿದೆ. ಒಟ್ಟಿನಲ್ಲಿ ಹಲವು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ರಾಜಕಾಲುವೆ ಒತ್ತುವರಿ ಕಾಮಗಾರಿಗೆ ಮತ್ತಷ್ಟು ವೇಗ ಸಿಗೋ ಲಕ್ಷಣಗಳು ಎದ್ದು ಕಾಣುತ್ತಿದೆ. ಮಳೆಗೆ ಹಾನಿಯಾಗಿದ್ದ ಸ್ಥಳಗಳಿಗೆ ಮುಕ್ತಿ ಸಿಗುತ್ತಾ ಅನ್ನೋದನ್ನ ಕಾದುನೋಡಬೇಕಿದೆ.



## ಹಠ ಸಾಧಿಸಿ ಗೆದ್ದ ಡಿಕೆಶಿ

# ಎಚ್‌ಡಿಕೆ ಕೆಂಡ



● ಹೆಸರು ಬದಲಿಸಿದವರ ಭೂಮಿಗೆ ಬೆಲೆ ಏರಬಹುದು; ಅದಕ್ಕೆ ಹೆಸರು ಬದಲಿಸಿದ್ದಾರೆ ● ಇವರೇನು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತಾರಾ ● ಮುಂದೆ ಎಲ್ಲವೂ ಬದಲಾಗುತ್ತೆ ಹೆಸರೂ ಬದಲಾಗುತ್ತದೆ ಎಂದ ಎಚ್‌ಡಿ ಕುಮಾರಸ್ವಾಮಿ.

**ಎಚ್‌ಡಿಕೆಗೆ ಡಿಕೆಶಿ ಡಿಚ್ಚಿ**

ಕುಮಾರಸ್ವಾಮಿ ರಾಜಕೀಯ ಮಾಡಲು ರಾಮನಗರಕ್ಕೆ ಏಕೆ ಬಂದರು ಹಾಸನದಲ್ಲಿಯೇ ಏಕೆ ರಾಜಕೀಯ ಮಾಡಲಿಲ್ಲ. ಮೊದಲು ಎಚ್.ಡಿ.ಕುಮಾರಸ್ವಾಮಿ ಎನ್ನುವ ಹೆಸರಿನಲ್ಲಿರುವ ಅವರ ಊರಿನ ಹೆಸರು ಹಾಗೂ ತಂದೆಯ ಹೆಸರನ್ನು ಏಕೆ ಇನ್ನು ಇಟ್ಟುಕೊಂಡಿದ್ದಾರೆ. ಮೊದಲು ಅದನ್ನು ಬದಲಾವಣೆ ಮಾಡಿಕೊಳ್ಳಲಿ ಎಂದು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ತಿರುಗೇಟು ನೀಡಿದರು. ನಾವು ಬೆಂಗಳೂರು ಜಿಲ್ಲೆಯವರು. ಒಂದೊಂದು ಊರಿನ ಹೆಸರಿಗೆ ತನ್ನದೇ ಆದ ಇತಿಹಾಸವಿರುತ್ತದೆ. ಮದ್ರಾಸ್ ಅನ್ನು ಮತ್ತೆ ಏಕೆ ಚೆನ್ನೈ ಎಂದು ಕರೆದರು. ಗುಲ್ಬರ್ಗಾವನ್ನು ಕಲಬುರ್ಗಿ ಎಂದು ಮರುನಾಮಕರಣ ಮಾಡಲಾಗಿದೆ. ನಮಗೂ ನಮ್ಮದೇ ಆದಂತಹ ಆಸೆ ಇರುತ್ತದೆ. ಅವರಿಗೆ ಏನು ತೊಂದರೆಯಾಗಿದೆ ಎಂದು ಪ್ರಶ್ನಿಸಿದರು. ಹೌದು, ನಮ್ಮ ಹಳ್ಳಿಯ ಜನ ಉದ್ಧಾರವಾಗಬೇಕು. ಎಲ್ಲಾರಿಗೂ ಉದ್ಯೋಗ ಸಿಗಬೇಕು. ನಮ್ಮ ಜನರ ಆಸ್ತಿ ಮೌಲ್ಯ ಜಾಸ್ತಿಯಾಗಬೇಕು. ಪ್ರತಿಯೊಬ್ಬ ರೈತನಿಗೂ ಒಳ್ಳೆಯದಾಗಬೇಕು. ಹೊರಗಡೆ ದೇಶದಿಂದ ಜನರು ಬಂದು ಬಂಡವಾಳ ಹೂಡಿಕೆ ಮಾಡಬೇಕು. ಅಭಿವೃದ್ಧಿ ಆಗಬೇಕು ಎಂಬುದು ನಮ್ಮ ಆಸೆ ಎಂದರು. ಸಂಸತ್ ಕ್ಷೇತ್ರವನ್ನು ಮೊದಲು ಕನಕಪುರ ಎಂದು ಕರೆಯಲಾಗುತ್ತಿತ್ತು. ಅದನ್ನು ಬೆಂಗಳೂರು ಗ್ರಾಮಾಂತರ ಎಂದು ಅನಂತರ ಏಕೆ ಮಾಡಿದರು ರಾಮನಗರದ ಹೆಸರು ಬದಲಾವಣೆ ಮಾಡುತ್ತಿಲ್ಲ. ಜತೆಗೆ ರಾಮನಗರವೇ ಜಿಲ್ಲಾ ಕೇಂದ್ರವಾಗಿರುತ್ತದೆ. ನಾವು ಕೇವಲ ಜಿಲ್ಲೆಯ ಹೆಸರನ್ನು ಬದಲಾವಣೆ ಮಾಡುತ್ತಿದ್ದೇವೆ ಎಂದು ತಿಳಿಸಿದರು.

**ಬದಲಾದ ರಾಮನಗರದ ಹೆಸರು**

• ಉದಯವಾಹಿನಿ, ಬೆಂಗಳೂರು

ಐತಿಹಾಸಿಕ ಮಹತ್ವ ಹೊಂದಿರುವ ರಾಮನಗರ ಹೆಸರನ್ನು ಕಿತ್ತುಹಾಕಿ ಬೆಂಗಳೂರು ದಕ್ಷಿಣ ಎಂದು ಮರುನಾಮಕರಣ ಮಾಡಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರು ತೀವ್ರ ವಾಗ್ದಾಳಿ ನಡೆಸಿದ್ದಾರೆ.

ಮುಂದುವರೆದು ಮುಂದೆ ಎಲ್ಲಾವೂ ಬದಲಾಗುತ್ತೆ, ಹೆಸರೂ ಬದಲಾಗುತ್ತದೆ ಎಂದು ಸಚಿವರು ಹೇಳಿದ್ದಾರೆ. ಈ ಮೂಲಕ ರಾಜ್ಯ ಸರ್ಕಾರ ಬದಲಾವಣೆಯಾದರೆ, ಮತ್ತೆ ಹೆಸರು ಬದಲಾವಣೆ ಮಾಡುತ್ತೇವೆ ಎಂದು ಸುಳಿವು ನೀಡಿದ್ದಾರೆ.

ಇವರೇನು ಶಾಶ್ವತವಾಗಿ ಅಧಿಕಾರದಲ್ಲಿ ಇರುತ್ತಾರೆಯೇ ಎಂದು ಕಿಡಿಕಾರಿದರು. ಮುಂದೆ ಪರಿಸ್ಥಿತಿ ಬದಲಾಗಲಿದೆ, ಆಗ ಇವರು ರಾಮನಗರಕ್ಕೆ ಇಟ್ಟಿರುವ ಹೆಸರೂ ಬದಲಾಗಲಿದೆ ಎಂದು ಹೇಳಿದರು.

**ರಾಮನಗರಕ್ಕೆ ಕೆಂಗಲ್ ಹನುಮಂತಯ್ಯ ಹೆಸರಿಡಬಹುದಿತ್ತು**

2007ರಲ್ಲಿ ನಾನು ತೀರ್ಮಾನ ಮಾಡುವಾಗ ಆಗ ವಿರೋಧ ಮಾಡಬಹುದಾಗಿತ್ತು ಆಗ ಮಾಡಲಿಲ್ಲ. ಈ ರಾಜ್ಯಕ್ಕೆ ಮೂವರು ಮುಖ್ಯಮಂತ್ರಿಗಳನ್ನು ರಾಮನಗರ ಕೊಟ್ಟಿದೆ. ಇಡೀ ಜಗತ್ತೇ ನಿಬ್ಬೆರಗಾಗುವ ವಿಧಾನಸೌಧವನ್ನು ಕೆಂಗಲ್ ಹನುಮಂತಯ್ಯ ಅವರು ಕಟ್ಟಿಸಿದ್ದರು. ನೆಹರು ಅವರಿಗೆ ಸಡ್ಡು ಹೊಡೆದು ರಾಜಕೀಯ ಮಾಡಿದ್ದರು. ಅಂತಹ ಮಹನೀಯರ ಹೆಸರನ್ನಾದರೂ ಜಿಲ್ಲೆಗೆ ಇಡಬಹುದಿತ್ತು. ಅವರ ಹೆಸರು ಇಟ್ಟಿದ್ದಿದ್ದರೆ ನಾನು ಅಭಿನಂದಿಸುತ್ತಿದ್ದೆ. ಕೆಂಗಲ್ ಅವರ ಹೆಸರಿಟ್ಟರೆ ಇವರ ಭೂಮಿಗಳಿಗೆ ಬೆಲೆ ಬರುವುದಿಲ್ಲವಲ್ಲ ಎಂದು ಕುಮಾರಸ್ವಾಮಿ ಅವರು ಕಟುವಾಗಿ ಟೀಕಿಸಿದರು.

**ಭೂಮಿಗಳ ಬೆಲೆಯನ್ನು ಏರಿಸುವ ಷಡ್ಯಂತ್ರದ ಭಾಗ:** ರಾಮನಗರ ಹೆಸರನ್ನು ತೆಗೆದುಹಾಕಿ ಬೆಂಗಳೂರು ದಕ್ಷಿಣ ಎಂದು ಹೆಸರು ಇಟ್ಟುಕೊಂಡಿರುವುದು ಡಿಸಿಎಂ ಡಿಕೆ ಶಿವಕುಮಾರ್ ಅವರು ತಮ್ಮ ಭೂಮಿಗಳ ಬೆಲೆಯನ್ನು ಏರಿಸುವ ಷಡ್ಯಂತ್ರದ ಭಾಗವಾಗಿದೆ ಎಂದು ಅವರು ಟೀಕಾ ಪ್ರಹಾರ ನಡೆಸಿದರು. ಅವರು ಏತಕ್ಕಾಗಿ ಜಿಲ್ಲೆಯ ಹೆಸರು ಬದಲಿಸಿದ್ದಾರೆ ಅದರ ಹಿಂದಿನ ದುರುದ್ದೇಶ ಏನಿದೆ ಎಂಬುದು ಗೊತ್ತಿದೆ. ಇದರ ಬಗ್ಗೆ ನಾನು ತಲೆಕೆಡಿಸಿಕೊಳ್ಳುವುದಿಲ್ಲ. ಯಾವಾಗ ಅದಕ್ಕೆ ತಿರುಗಿಸಿ ಉತ್ತರ ಕೊಡಬೇಕೋ ಆಗ ಕೊಡುತ್ತೇನೆ ಎಂದು ಕೇಂದ್ರ ಸಚಿವರು ತಿರುಗೇಟು ಕೊಟ್ಟರು. ಇಂತಹ ರಾಜಕಾರಣಕ್ಕೆ ನಾನು ಸೊಪ್ಪು ಹಾಕುವುದಿಲ್ಲ. ಇವರು ಕೇಂದ್ರ ಗೃಹ ಸಚಿವರಿಗೆ ಹೆಸರು ಬದಲಾವಣೆ ರಾಜ್ಯ ಸರ್ಕಾರ ಪ್ರಸ್ತಾಪ ಕಳಿಸಿದ್ದು, ಅದು ತಿರಸ್ಕೃತವಾಗಿದ್ದು ನನಗೆ ಗೊತ್ತಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.

ಹೇಳಿ ಕೇಳಿ ಈ ವ್ಯಕ್ತಿ ರಿಯಲ್ ಎಸ್ಟೇಟ್ ವ್ಯಾಪಾರಿ. ಏನೆಲ್ಲಾ ತಂತ್ರಗಾರಿಕೆ ಹೂಡಿದರೆ ತಮ್ಮ ಜಮೀನುಗಳಿಗೆ ಬೆಲೆ ಬರುತ್ತಿದೆ ಎನ್ನವುದು ಅವರಿಗೆ ಗೊತ್ತಿದೆ. ರಾಮನಗರ ಜಿಲ್ಲೆಯಾದಾಗಲೇ ರೈತರ ಭೂಮಿಗೆ ಬೆಲೆ ಬಂದಿರಲಿಲ್ಲವೇ ಎಂದು ಕುಮಾರಸ್ವಾಮಿ ಅವರು ಖಾರವಾಗಿ ಪ್ರಶ್ನಿಸಿದರು.

**ದಲಿತರ ಭೂಮಿ ಕಬಳಿಸಿದವರನ್ನು ಸಿದ್ದರಾಮಯ್ಯ ಜತೆಯಲ್ಲಿ ಇಟ್ಟುಕೊಂಡಿದ್ದಾರೆ**

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದ್ವಂದ್ವ ನೀತಿ ಬಗ್ಗೆ ಕಿಡಿಕಾರಿದ ಕೇಂದ್ರ ಸಚಿವ ಕುಮಾರಸ್ವಾಮಿ ಅವರು, ಸಿದ್ದಾರಾಮಯ್ಯ ಅವರು ತಾವು ಅಹಿಂದ ನಾಯಕ ಎಂದು ಹೇಳಿಕೊಳ್ಳುತ್ತಾರೆ. ದುರಂತವೆಂದರೆ, ದಲಿತರ ಭೂಮಿ ಕಬಳಿಸಿದವರನ್ನೇ ತಮ್ಮ ಜತೆಯಲ್ಲಿ ಇಟ್ಟುಕೊಂಡಿದ್ದಾರೆ. ಈಗ ನೋಡಿದರೆ ಅವರು ಮುಖ್ಯಮಂತ್ರಿ ಆಗಬೇಕು ಎಂದು ಹೊರಟಿದ್ದಾರೆ. ಇದು ಈ ಸರ್ಕಾರದಲ್ಲಿ ನಡೆಯುತ್ತಿರುವ ದಲಿತ ವಿರೋಧಿ ನೀತಿ ಎಂದು ಕುಮಾರಸ್ವಾಮಿ ಅವರು ವಾಗ್ದಾಳಿ ನಡೆಸಿದರು.

**ಸರ್ಕಾರಕ್ಕೆ ಅಧಿಕಾರವಿದೆ**



ರಾಮನಗರಕ್ಕೆ ಬೆಂಗಳೂರು ದಕ್ಷಿಣ ಜಿಲ್ಲೆ ಎಂದು ಮರುನಾಮಕರಣ ಮಾಡಲು ರಾಜ್ಯ ಸರ್ಕಾರಕ್ಕೆ ಅಧಿಕಾರವಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಅಲ್ಲಿನ ಜನರ ಜನಾಭಿಪ್ರಾಯವನ್ನು ಪಡೆದೇ ಈ ನಿರ್ಣಯವನ್ನು ಕೈಗೊಳ್ಳಲಾಗಿದೆ. ಕುಮಾರಸ್ವಾಮಿಯವರು ರಾಮನಗರ ಜಿಲ್ಲೆ ಸೃಜಿಸುವಾಗ, ಅಲ್ಲಿನ ಇತಿಹಾಸದ ಬಗ್ಗೆ ಯೋಚಿಸಿರಲಿಲ್ಲವೇ ಆಗ ಏನು ಇತಿಹಾಸ ಇತ್ತು ಎಂದು ಕೇಳಿದರು.



**ನನ್ನ ಜಮೀನು ಕಿತ್ತುಕೊಳ್ಳಲು ಕುತಂತ್ರ ಮಾಡಿದ್ದಾರೆ**

ನನ್ನ ಜಮೀನಿಗೆ ಬೆಲೆ ಬರುತ್ತದೆ ಎಂದು ಅವರು ಹೇಳಿದ್ದಾರೆ. ಆ ಜಮೀನನ್ನು ಕೂಡ ಕಿತ್ತುಕೊಳ್ಳಲು ಕುತಂತ್ರ ಮಾಡಿದ್ದಾರೆ ಇವರು. 40 ವರ್ಷಗಳ ಹಿಂದೆ ಖರೀದಿ ಮಾಡಿದ ಜಮೀನಿಗೆ ಎಸ್‌ಐಟಿ ಅಂತ ರಚನೆ ಮಾಡಿಕೊಂಡು ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ನನಗೆ ಕಿರುಕುಳ ಕೊಡುತ್ತಿದ್ದಾರೆ. ಇದರ ವಿರುದ್ಧ ನಾನೂ ಕಾನೂನು ಹೋರಾಟ ಮಾಡುತ್ತಿದ್ದೇನೆ ಎಂದು ಕೇಂದ್ರ ಸಚಿವರು ಹೇಳಿದರು. ಇವರು ನನ್ನ ವಿರುದ್ಧ ಕಿರುಕುಳ, ಕುತಂತ್ರ ಮಾಡುತ್ತಿದ್ದಾರೆ. ಹೀಗೆಯೇ ಅವರು ಮಾಡುತ್ತಿರಲಿ, ಇವರು ಲೂಟಿ ಹೊಡೆದಿರುವ ಶೇ.50ರಷ್ಟು ಸರ್ಕಾರಿ ಭೂಮಿಗಳಿವೆ. ಇವರು ಏನೆಲ್ಲಾ ಅನ್ಯಾಯ, ಅಕ್ರಮ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿದೆ. ಶಾಂತಿನಗರದ ದಲಿತರ ಜಾಗ ನುಂಗಿದ್ದು ಯಾರು ರಾಮಕೃಷ್ಣ ಹೆಗಡೆ ಅವರ ಸರ್ಕಾರದಲ್ಲಿ ನೀಡಲಾದ ಜಾಗ ನುಂಗಿದ್ದು ಯಾರು ಎಂದು ಕುಮಾರಸ್ವಾಮಿ ಅವರು ತೀಕ್ಷ್ಣವಾಗಿ ಪ್ರಶ್ನಿಸಿದರು.

ರಾಮನಗರ ಜಿಲ್ಲೆ ಹೆಸರು ಬದಲಾವಣೆ ಮಾಡುವಲ್ಲಿ ಕೊನೆಗೂ ಕನಕಪುರ ಬಂಡೆ ಡಿಕೆ ಶಿವಕುಮಾರ್ ಗೆದ್ದು ಬೀಗಿದ್ದಾರೆ. ಈ ಮೂಲಕ ಎಚ್‌ಡಿ ಕುಮಾರಸ್ವಾಮಿಗೆ ಬಿಗ್ ಶಾಕ್ ನೀಡಿದ್ದಾರೆ. ಜೆಡಿಎಸ್ ಭದ್ರಕೋಟೆಗೆ ಕೈ ಹಾಕಿರುವ ಡಿಕೆಶಿ ಅದನ್ನ ಸಂಪೂರ್ಣ ತಮ್ಮ ಕೈವಶ ಮಾಡಿಕೊಳ್ಳುವಲ್ಲಿ ಯಶಸ್ಸು ಸಾಧಿಸಿದ್ದಾರೆ. ರಾಮನಗರ ಹೆಸರು ಬದಲಾವಣೆ ವಿಚಾರದಲ್ಲಿ ಕುಮಾರಸ್ವಾಮಿ ಹಾಗೂ ಡಿಕೆ ಶಿವಕುಮಾರ್ ನಡುವೆ ಯುದ್ಧವೇ ಶುರುವಾಗಿತ್ತು, ಇಬ್ಬರಿಗೂ ಇದು ಪ್ರತಿಷ್ಠೆಯ ಕಣವಾಗಿತ್ತು, ರಾಮನಗರ ಹೆಸರನ್ನು ಅದೇಗೇ ಬದಲಾವಣೆ ಮಾಡ್ತೀರಿ ನಾನೂ ನೋಡ್ತಿನಿ ಎಂದು ಕುಮಾರಸ್ವಾಮಿ ಸವಾಲ್ ಹಾಕಿದ್ದರು.. ಅದೆಲ್ಲವನ್ನು ಮೆಟ್ಟಿ ನಿಂತು ಡಿಕೆ ಶಿವಕುಮಾರ್ ರಾಮನಗರ ಜಿಲ್ಲೆಯ ಹೆಸರು ಬದಲಾವಣೆ ಮಾಡಿ ಬೆಂಗಳೂರು ದಕ್ಷಿಣ ಜಿಲ್ಲೆ ಅಂತ ಮರುನಾಮಕರಣ ಮಾಡಿದ್ದಾರೆ. ಇಡೀ ರಾಮನಗರವನ್ನು ಕಂಟ್ರೋಲ್ ತೆಗೆದುಕೊಂಡಿದ್ದ ಕುಮಾರಸ್ವಾಮಿಗೆ ಶಾಕ್ ನೀಡಿದ್ದಾರೆ.

## ಪ್ರಿಯಾಂಕ್ ಖರ್ಗೆ ಮುಂದೆ ಸಿಎಂ ಆಗ್ತಾರೆ, ಅದಕ್ಕೆ ಬಿಜೆಪಿಗೆ ಭಯ

● ಬಿಜೆಪಿಯವರು ಖರ್ಗೆಯವರ ಬೆಳವಣಿಗೆಯನ್ನು ಸಹಿಸದೇ ಛಲವಾದಿ ನಾರಾಯಣಸ್ವಾಮಿಯವರನ್ನು ಬಳಸಿಕೊಳ್ಳುತ್ತಿದ್ದಾರೆ

• ಉದಯವಾಹಿನಿ, ಹೊಸದಿಲ್ಲಿ

ಸಚಿವ ಪ್ರಿಯಾಂಕ್ ಖರ್ಗೆ ಕಾಂಗ್ರೆಸ್ ಪಕ್ಷದ ಫೈರ್ ಬ್ರಾಂಡ್. ಮುಂದಿನ ದಿನಗಳಲ್ಲಿ ಅವರು ರಾಜ್ಯದ ಸಿಎಂ ಆಗುತ್ತಾರೆ. ಅದಕ್ಕಾಗಿ ಅವರನ್ನು ಕಂಡರೆ ಬಿಜೆಪಿಗೆ ಭಯ ಎಂದು ಕಾಂಗ್ರೆಸ್ ಶಾಸಕ ಪ್ರದೀಪ್ ಈಶ್ವರ್ ಹೇಳಿದ್ದಾರೆ.

ಬೆಂಗಳೂರಿನಲ್ಲಿ ಶುಕ್ರವಾರ ಮಾತನಾಡಿದ ಅವರು, ಪ್ರಿಯಾಂಕ್ ಪರವಾಗಿ ಭರ್ಜರಿ ಬ್ಯಾಟಿಂಗ್ ಮಾಡಿದರು. ಪ್ರಿಯಾಂಕ್ ಖರ್ಗೆ ಅವರು ಯಾವುದಕ್ಕೂ ಹೆದರುವವರಲ್ಲ. ಅವರು ಮುಂದೆ ಮುಖ್ಯಮಂತ್ರಿಯಾಗುವವರು. ಆ ಕಾರಣಕ್ಕೆ ಅವರನ್ನು ಟಾರ್ಗೆಟ್ ಮಾಡ್ತಾರೆ ಎಂದು ಪ್ರದೀಪ್ ಈಶ್ವರ್ ಆಕ್ರೋಶ ವ್ಯಕ್ತಪಡಿಸಿದರು.

**ಪ್ರದೀಪ್ ಈಶ್ವರ್ ಭರ್ಜರಿ ಬ್ಯಾಟಿಂಗ್!**

ಅವರ ತಂದೆ, ಮಲ್ಲಿಕಾರ್ಜುನ ಖರ್ಗೆ ಎಐಸಿಸಿ ಅಧ್ಯಕ್ಷರಾಗಿದ್ದಕ್ಕೆ ಬಿಜೆಪಿಯವರು ಸಹಿಸಿಕೊಳ್ಳುತ್ತಿಲ್ಲ. ಅಷ್ಟೇ ಅಲ್ಲದೆ ಪ್ರಿಯಾಂಕ್ ಖರ್ಗೆಯವರು ಬೆಳೆಯುತ್ತಿರುವುದನ್ನು ಬಿಜೆಪಿಯವರು ಸಹಿಸುತ್ತಿಲ್ಲ. ಅದಕ್ಕೆ ಛಲವಾದಿ ನಾರಾಯಣಸ್ವಾಮಿ ಅವರನ್ನು ಮುಂದೆ ಬಿಟ್ಟಿದ್ದಾರೆ. ಛಲವಾದಿ ನಾರಾಯಣಸ್ವಾಮಿ ನಾಯಿ ಅಲ್ಲ. ಅವರ ಕುರ್ಚಿ ಭದ್ರ ಮಾಡಿಕೊಳ್ಳಲು ಖರ್ಗೆಯವರನ್ನ ಬೈಯಬೇಕು, ಎಂದು ತಿರುಗೇಟು ನೀಡಿದರು.

ಛಲವಾದಿ ನಾರಾಯಣಸ್ವಾಮಿ ಬಕೆಟ್ ಹಿಡಿದವರು. 40 ವರ್ಷ ಬಕೆಟ್ ಹಿಡಿದು ಈ ಸ್ಥಾನಕ್ಕೆ ಹೋದವರು. ಅವರು ಖರ್ಗೆಯವರ ಬಗ್ಗೆ ಮಾತನಾಡ್ತಾರೆ. ಅವರು ಹೇಳಿದ ಪದ ನಾನು ಬಳಸಲ್ಲ. ನಾರಾಯಣಸ್ವಾಮಿ ಅವರನ್ನು ನಾನು ನಾಯಿ ಅಂತ ಕರೆಯಲ್ಲ. ನಿಮ್ಮ ಮೇಲೆ ನಮಗೆ ಗೌರವವಿದೆ. ನಮಗೆ ಸಂಸ್ಕೃತಿ ಅನ್ನೋದು ಇದೆ ಎಂದರು.



**ಧಮ್ ಇದ್ರೆ ನಮ್ಮ ಮೇಲೆ ದಾಳಿ ಮಾಡಿಸಿ**

ಬಿಜೆಪಿಯವರಿಗೆ ಧಮ್ ಇದ್ದರೆ ನಮ್ಮ ಮೇಲೆ ದಾಳಿ ಮಾಡಿಸಿ. ನಾವೇನು ನಿಮ್ಮದಾಳಿಗೆ ಹೆದರಿ ಬಿಡುತ್ತೇವಾ ಇ.ಡಿಯವರಿಗೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿಲ್ವೇ ನಾವೇನು ಸುಮ್ಮನೆ ಕೂರ್ತೀವಾ ಕಾನೂನಿದೆ ಹೋರಾಟ ಮಾಡ್ತೇವೆ. ನಾವೇನು ನಿಮ್ಮ ದಾಳಿಗೆಲ್ಲ ಹೆದರೋರಲ್ಲ ಎಂದು ಬಿಜೆಪಿ ವಿರುದ್ಧ ಪ್ರದೀಪ್ ಈಶ್ವರ್ ಆಕ್ರೋಶ ವ್ಯಕ್ತಪಡಿಸಿದರು.

ಸಚಿವ ಡಾ.ಜಿ. ಪರಮೇಶ್ವರ್ ಮೇಲಿನ ಇ.ಡಿ ದಾಳಿ ವಿಚಾರವಾಗಿ ಇದೇ ಸಂದರ್ಭದಲ್ಲಿ ಮಾತನಾಡಿ, ದಲಿತರ ಮೇಲೆಯೇ ಯಾಕೆ ಇ.ಡಿ ದಾಳಿಯಾಗುತ್ತೆ. ಪರಮೇಶ್ವರ್ ಒಬ್ಬ ದಲಿತ ನಾಯಕರು. ಪ್ರಾಮಾಣಿಕ ರಾಜಕಾರಣಿ. ದಲಿತ ರಾಜಕಾರಣಿಗಳ ಮೇಲೆಯೇ ದಾಳಿ ಏಕೆ, ಎಂದು ಪ್ರಶ್ನಿಸಿದರು.

ಬಿಜೆಪಿಯವರಿಗೆ ಗಾನ ಬಜಾನಾ ಮಾಡೋರೇ ಬೇಕಾ ಯಾಕೆ ಬಿಜೆಪಿಯಲ್ಲಿ ಯಾರು ಹಣ ಮಾಡಿಲ್ವೇ ಆರ್ ಅಶೋಕ್ ಏನು ಸತ್ಯಹರಿಶ್ಚಂದ್ರರೇ ವಿಜಯೇಂದ್ರ ಏನೂ ಹಣ ವರ್ಗಾಯಿಸಿಲ್ವೇ ಯಾಕೆ ದಲಿತರ ಮೇಲೆಯೇ ನಡೆಯುತ್ತೆ ಬಿಜೆಪಿಯವರಿಗೆ ದಲಿತರನ್ನು ಕಂಡರೆ ಆಗಲ್ವಾ ಎಂದು ಪ್ರಶ್ನಿಸಿದರು.

**ಈ ದಿನದ ದರ** ಪೆಟ್ರೋಲ್: 103.50 ₹/L ಡೀಸೆಲ್ : 90.03 ₹/L ಬಂಗಾರ: ₹9,753/Gram24ct ₹8,940/Gram22ct ಬೆಳ್ಳಿ: ₹100.00/Gram

# ಡಿಜಿಟಲ್ ಸಹಿ ದುರುಪಯೋಗಪಡಿಸಿಕೊಂಡು 3 ಕೋಟಿ ರೂ. ಗಳಿಗೆ ಅಕ್ರಮ ಅನುಮೋದನೆ

• ಉದಯವಾಹಿನಿ, ಬೆಂಗಳೂರು

ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರ ಡಿಜಿಟಲ್ ಸಿಗ್ನೇಚರ್ ಪ್ರಮಾಣಪತ್ರ (ಡಿಎಸ್‌ಸಿ) ದುರುಪಯೋಗಪಡಿಸಿಕೊಂಡು, ರಾಜೀವ್ ಗಾಂಧಿ ವಸತಿ ನಿಗಮ ಲಿಮಿಟೆಡ್ ಮೂಲಕ ನೇಕಾರರ ವಸತಿ ಯೋಜನೆಯಡಿ 159 ಫಲಾನುಭವಿಗಳಿಗೆ 3 ಕೋಟಿ ರೂ. ಮೌಲ್ಯದ ಹಣವನ್ನು ದುಷ್ಕರ್ಮಿಗಳು

ಆರೋಪಿಗಳಲ್ಲಿ ಒಬ್ಬರಾದ ಕಲಬುರಗಿಯ ಸುಭಾಷ್ಚಂದ್ರ ಇತ್ತೀಚೆಗೆ ನಿರೀಕ್ಷಣಾ ಜಾಮೀನು ಪಡೆದಿದ್ದಾರೆ. ಅರ್ಜಿಯೊಂದಿಗೆ ಸಲ್ಲಿಸಲಾದ 1 ಮತ್ತು 2, ಡಿಎಸ್‌ಸಿ ಕೀ ದುರುಪಯೋಗಕ್ಕೆ ಭರತ್ ಮತ್ತು ಅಭಿಷೇಕ್ ಎಂಬುವರು ಕಾರಣ ಎಂದು ಹೇಳಲಾಗಿದೆ.

ಅರ್ಜಿದಾರರು ತಲೆಮರೆಸಿಕೊಂಡಿದ್ದಾರೆ ಎಂಬುದನ್ನು ಹೊರತುಪಡಿಸಿದರೆ, ಅರ್ಜಿದಾರರ ವಿರುದ್ಧ ರಿಮಾಂಡ್ ಅರ್ಜಿಗಳಲ್ಲಿ ಏನನ್ನೂ ಹೇಳಲಾಗಿಲ್ಲ ಎಂದು 66 ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಜಯಪ್ರಕಾಶ್ ಎ ಹೇಳಿದ್ದಾರೆ. ಸದಾಶಿವನಗರ ಪೊಲೀಸರಿಗೆ ಸಲ್ಲಿಸಲಾದ ದೂರಿನಲ್ಲಿ ನೇಕಾರರ ವಸತಿ ಯೋಜನೆಯನ್ನು ನಿರ್ವಹಿಸಲು ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರಿಗೆ ಸೂಚಿಸಲಾಗಿದೆ ಎಂದು ಹೇಳಲಾಗಿದೆ.

ಕೈಮಗ್ಗ ಮತ್ತು ಜವಳಿ ಇಲಾಖೆಯ ಉಪ ನಿರ್ದೇಶಕರ ಡಿಎಸ್‌ಸಿ ಕೀಯನ್ನು ನಕ್ಷೆ ಮಾಡಲು, ಸೆಪ್ಟೆಂಬರ್ 26, 2024 ರಂದು ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್‌ಗೆ ವಿನಂತಿಯನ್ನು ಕಳುಹಿಸಲಾಗಿದೆ. ಅವರು ಕಳುಹಿಸಿದ ಟೋಕನ್



ಅವಧಿ ಮುಗಿದಿರುವುದರಿಂದ ಹೊಸ ಟೋಕನ್ ಪಡೆಯಬೇಕು ಎಂದು ನಿಗಮದ ಸಹಾಯಕ ಮುಖ್ಯ ವ್ಯವಸ್ಥಾಪಕರು ತಿಳಿಸಿದರು.

ತಮ್ಮ ಗುರುತಿನ ಚೀಟಿ ಮತ್ತು ಪ್ಯಾನ್ ಕಾರ್ಡ್ ಅನ್ನು ಗ್ರೂಪ್ ಡಿ ಉದ್ಯೋಗಿ ಅಭಿ ಎಂಬುವವರಿಗೆ ವಾಟ್ಸಾಪ್ ಮೂಲಕ ಕಳುಹಿಸಿದರು. ಅಭಿ ಅವರಿಗೆ ಟೋಕನ್ ಸಿದ್ಧವಾಗಿದೆ ಎಂದು ಹೇಳಿದರು ಮತ್ತು ಅದಕ್ಕಾಗಿ 3,540 ರೂ.ಗಳನ್ನು ಪಾವತಿಸಲು ಸೂಚಿಸಿದ್ದಾರೆ. ಇದನ್ನು ಇನ್‌ವಾಯ್ಸ್ ಕಳುಹಿಸಿದರು.

ಫೀನಿಕ್ಸ್ ಹೋಲ್ಡಿಂಗ್ಸ್‌ನ ಟೋಕನ್ ಅನ್ನು ತನ್ನ ಮೊಬೈಲ್ ಫೋನ್‌ಗೆ ಕಳುಹಿಸಿದೆ ಎಂದಿದ್ದಾರೆ. ನವೆಂಬರ್ 5, 2024 ರಂದು, ಅವರು ಜವಳಿ ನಿರ್ದೇಶಕರಿಗೆ ಹಣ ಮಂಜೂರು ಮಾಡುವಂತೆ ಕೋರಿದರು, ಆದರೆ ಮೊತ್ತವನ್ನು ಪಾವತಿಸದ ಕಾರಣ, ಅವರಿಗೆ ಹೊಸ ಡಿಎಸ್‌ಸಿ ಟೋಕನ್ ಬಂದಿಲ್ಲ. ನಂತರ ಅವರು ಜನವರಿ 26, 2024 ರಂದು, ದುಷ್ಕರ್ಮಿಗಳು ತಮ್ಮ ಟೋಕನ್, ವ್ಯವಸ್ಥೆಯ ಇಲಾಖೆಯ ಐಡಿ ಮತ್ತು ಪಾಸ್‌ವರ್ಡ್ ಅನ್ನು ಬಳಸಿ ಕಂಪ್ಯೂಟರ್ ವ್ಯವಸ್ಥೆಗೆ ಲಾಗಿನ್ ಆಗಿರುವುದನ್ನು ಗಮನಿಸಿದ್ದಾರೆ. ರಾಜೀವ್ ಗಾಂಧಿ ಹೌಸಿಂಗ್ ಕಾರ್ಪೊರೇಷನ್ ಲಿಮಿಟೆಡ್ ಪೋರ್ಟಲ್ ಅಡಿಯಲ್ಲಿ, ಅವರು 159 ಫಲಾನುಭವಿಗಳಿಗೆ ಅನುಮೋದನೆ ನೀಡಿದ್ದರು.

ಅವರಲ್ಲಿ 83 ಮಂದಿ ಕಲಬುರಗಿ ಜಿಲ್ಲೆಯವರು, 75 ಮಂದಿ ಯಾದಗಿರಿ ಜಿಲ್ಲೆಯವರು ಮತ್ತು ಒಬ್ಬರು ಬೆಳಗಾವಿ ಜಿಲ್ಲೆಯವರು. ಅನುಮೋದನೆಯ ಒಟ್ಟು ವೆಚ್ಚ 3 ಕೋಟಿ ರೂ. ನಂತರ ಅವರು ಮಾರ್ಚ್ 17 ರಂದು ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದರು.

## 51 ಸಾವಿರ ಅತಿಥಿ ಶಿಕ್ಷಕರ ನೇಮಕಕ್ಕೆ ಸರ್ಕಾರ ಆದೇಶ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಿಗೆ ತಾತ್ಕಾಲಿಕವಾಗಿ ಅತಿಥಿ ಶಿಕ್ಷಕರ ನೇಮಕಕ್ಕೆ ಸರ್ಕಾರ ಆದೇಶ ಹೊರಡಿಸಿದೆ. ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ 40,000 ಹಾಗೂ ಸರ್ಕಾರಿ ಪ್ರೌಢಶಾಲೆಗಳಿಗೆ 11,000 ಶಿಕ್ಷಕರ ನೇಮಕ ಮಾಡಿಕೊಳ್ಳಲು ಸರ್ಕಾರ ಮಂಜೂರಾತಿ ನೀಡಿ ಆದೇಶಿಸಿದೆ. 2025–26ನೇ ಸಾಲಿನಲ್ಲಿ ಪೂರ್ವ ನಿಗದಿಯಂತೆ ಶಾಲಾ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಿ ನಿರ್ವಹಣೆ ಮಾಡಬೇಕಾಗಿದೆ. ಶಾಲಾ ಪ್ರಾರಂಭದ ದಿನವೇ ಶಾಲೆಗಳಲ್ಲಿ ಖಾಲಿ ಇರುವ ಬೋಧಕ ಹುದ್ದೆಗಳಿಗೆ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಖಾಯಂ ಶಿಕ್ಷಕರ ನೇಮಕವಾಗುವವರೆಗೆ ಅಥವಾ ಶೈಕ್ಷಣಿಕ ಅಂತ್ಯದ ವರೆಗೆ ತಾತ್ಕಾಲಿಕವಾಗಿ ಅತಿಥಿ ಶಿಕ್ಷಣಕರನ್ನು ನೇಮಕ ಮಾಡಿಕೊಳ್ಳಲಾಗುವುದು ಎಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ. ನೇಮಕಾತಿ ಮಾಡಿಕೊಳ್ಳುವ ಒಟ್ಟು 51 ಸಾವಿರ ಅತಿಥಿ ಶಿಕ್ಷಕರ ಗೌರವಧನ ಪಾವತಿಗಾಗಿ ಅವಶ್ಯವಿರುವ ಅನುದಾನದ ವಿವರ ಹಾಗೂ ಅತಿಥಿ ಶಿಕ್ಷಕರ ಜಿಲ್ಲಾ, ತಾಲ್ಲೂಕುವಾರು ವಿವರಗಳೊಂದಿಗೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಸೂಚಿಸಲಾಗಿದೆ.

## ವೈಟ್‌ಫೀಲ್ಡ್ ನಿಲ್ದಾಣದಲ್ಲಿ ತಾಂತ್ರಿಕ ಸಮಸ್ಯೆ ಮೆಟ್ರೋ ಸಂಚಾರ ಸ್ಥಗಿತ

• ಉದಯವಾಹಿನಿ, ಬೆಂಗಳೂರು

ನೇರಳೆ ಮಾರ್ಗದ ವೈಟ್‌ಫೀಲ್ಡ್ ಮೆಟ್ರೋ ನಿಲ್ದಾಣದಲ್ಲಿ ತಾಂತ್ರಿಕ ಸಮಸ್ಯೆಯಿಂದಾಗಿ ಮೆಟ್ರೋ ಸಂಚಾರ ಸ್ಥಗಿತವಾಗಿದೆ. ವೈಟ್‌ಫೀಲ್ಡ್ ಮೆಟ್ರೋ ನಿಲ್ದಾಣದಲ್ಲಿ ಮಾತ್ರ ಮೆಟ್ರೋ ಸೇವೆ ಸ್ಥಗಿತಗೊಂಡಿದೆ. ಬೆಳಗ್ಗೆ 5 ಗಂಟೆಯಿಂದಲೇ ಮೆಟ್ರೋ ಸೇವೆಯಲ್ಲಿ ವ್ಯತ್ಯಯವಾಗಿದೆ. ವೈಟ್‌ಫೀಲ್ಡ್ ಮೆಟ್ರೋ ನಿಲ್ದಾಣದಲ್ಲಿ ಮಾತ್ರ ತಾಂತ್ರಿಕ ಸಮಸ್ಯೆ ಎದುರಾಗಿದ್ದು ಉಳಿದ ಮೆಟ್ರೋ ನಿಲ್ದಾಣಗಳಿಂದ ಎಂದಿನಂತೆ ರೈಲುಗಳು ಸಂಚಾರ ಮಾಡುತ್ತಿದೆ.

ನೇರಳೆ ಮಾರ್ಗದ ವೈಟ್‌ಫೀಲ್ಡ್ ಕಾಡುಗೋಡಿ ಮೆಟ್ರೋ ಸ್ಟೇಷನ್‌ನಲ್ಲಿ ತಾಂತ್ರಿಕ ದೋಷ ಕಂಡುಬಂದಿದ್ದು, ಈ ನಿಲ್ದಾಣದಿಂದ ರೈಲುಗಳ ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತಗೊಂಡಿವೆ. ನೇರಳೆ ಮಾರ್ಗದ ಹೋಪ್‌ಫಾರ್ಮ್ ಚನ್ನಸಂದ್ರ ನಿಲ್ದಾಣ, ಚಲ್ಲಘಟ್ಟ ನಿಲ್ದಾಣಗಳ ನಡುವೆ ಮಾತ್ರ ರೈಲುಗಳು ಕಾರ್ಯನಿರ್ವಹಿಸಲಿವೆ. ಹಸಿರು ಮಾರ್ಗದಲ್ಲಿ ಸಾಮಾನ್ಯ ಸೇವೆಗಳು ಮುಂದುವರಿಯುತ್ತವೆ. ಪ್ರಯಾಣಿಕರಿಗೆ ಇದರಿಂದಾಗುವ ಅನಾನುಕೂಲತೆಗೆ ವಿಷಾದಿಸುತ್ತೇವೆ ಎಂದು ಬಿಎಂಆರ್‌ಸಿಎಲ್ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದೆ.

## ನಾಲ್ಕು ತಿಂಗಳಲ್ಲಿ 65 ಕೊಲೆ

• ಉದಯವಾಹಿನಿ, ಬೆಂಗಳೂರು

ಭೂ ವ್ಯಾಜ್ಯ, ದ್ವೇಷ, ಹಣಕಾಸು, ಪ್ರೀತಿ, ಹಠಾತ್ ಜಗಳದ ವಿಚಾರಕ್ಕೆ ಸಂಬಂಧಿಸಿ ದಂತೆ ನಗರದಲ್ಲಿ ನಾಲ್ಕು ತಿಂಗಳಲ್ಲಿ 65 ಕೊಲೆ ಪ್ರಕರಣಗಳು ನಡೆದಿವೆ. 2023ಕ್ಕೆ ಹೋಲಿಸಿದರೆ 2024ರಲ್ಲಿ ಕೊಲೆ ಪ್ರಕರಣಗಳ ಶೇಕಡ 16ರಷ್ಟು ಕಡಿಮೆಯಾಗಿದೆ. 2023ರಲ್ಲಿ ಕೊಲೆ ಯತ್ನಕ್ಕೆ ಸಂಬಂಧಿಸಿದಂತೆ ದಾಖಲಾದ 537 ಪ್ರಕರಣಗಳ ಪೈಕಿ, 526 ಪ್ರಕರಣಗಳಲ್ಲಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಕಳ್ಳತನ, ಹಲ್ಲೆ, ದರೋಡೆ ಪ್ರಕರಣಗಳ ಜತೆಗೆ ಹಣಕಾಸು, ಪ್ರೀತಿ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆಗಳಲ್ಲಿ ಕೊಲೆ ಪ್ರಕರಣಗಳು ವರದಿಯಾಗುತ್ತಿವೆ. ಭೂ ವ್ಯಾಜ್ಯ, ಹಣಕಾಸು, ಪ್ರೀತಿಯ ವಿಚಾರಕ್ಕೆ ನಡೆಯುವ ಜಗಳಗಳು ಕೊಲೆಯಲ್ಲಿ ಅಂತ್ಯಗೊಳುತ್ತಿವೆ. ಇಂತಹ ಪ್ರಕರಣಗಳನ್ನು ತಡೆಗಟ್ಟುವುದು ಕಷ್ಟಸಾಧ್ಯವಾಗಿದೆ.

ಅಲ್ಲದೇ, ದ್ವೇಷದ ಕಾರಣಕ್ಕೆ ವ್ಯಕ್ತಿಯ ವಿರುದ್ಧ ಸಂಚು ರೂಪಿಸಿ ಕೊಲೆ ಮಾಡಿರುವ ಘಟನೆಗಳೂ ನಡೆದಿವೆ. ಪ್ರೀತಿಯ ವಿಚಾರ, ಮಹಿಳೆಯೊಬ್ಬರೊಂದಿಗೆ ಸಲುಗೆ, ಮಹಿಳೆ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿರುವ ಪ್ರಕರಣಗಳೂ ದಾಖಲಾಗಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

## ಸಿಎಂ, ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆಯಲಿ; ಕೆ.ಎಸ್ ನವೀನ್



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ವಿರುದ್ಧ ಚಿತ್ತಾಪುರದಲ್ಲಿ ಸಚಿವ ಪ್ರಿಯಾಂಕ್ ಖರ್ಗೆ ಬೆಂಬಲಿಗರು ಹಲ್ಲೆಗೆ ಮುಂದಾಗಿರೋ ಪ್ರಕರಣದಲ್ಲಿ ಕೂಡಲೇ ಸಿಎಂ ಸಿದ್ದರಾಮಯ್ಯ ಅವರು ಸಚಿವ ಪ್ರಿಯಾಂಕ್ ಖರ್ಗೆ ರಾಜೀನಾಮೆ ಪಡೆಯಬೇಕು. ತನಿಖೆ ನಡೆಸಬೇಕು ಎಂದು ಬಿಜೆಪಿ ವಿಧಾನ ಪರಿಷತ್ ಸದಸ್ಯರು ಆಗ್ರಹಿಸಿದ್ದಾರೆ. ವಿಧಾನಸೌಧದಲ್ಲಿ ಸುದ್ದಿಗೋಷ್ಠಿ ನಡೆಸಿದ ಎಂಎಲ್‌ಸಿಗಳು ಕೂಡಲೇ ಪ್ರಿಯಾಂಕ್ ಖರ್ಗೆ ಮತ್ತು ಗೂಂಡಾ ವರ್ತನೆ ಮಾಡಿದ ಬೆಂಬಲಿಗರ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದರು. ಈ ವೇಳೆ ಬಿಜೆಪಿ ಎಂಎಲ್‌ಸಿ ನವೀನ್ ಮಾತಾಡಿ, ಚಿತ್ತಾಪುರದಲ್ಲಿ ಛಲವಾದಿ ನಾರಾಯಣಸ್ವಾಮಿ ಮೇಲೆ ನಡೆದ ಹಲ್ಲೆ ಸಂಬಂಧ ಸಭಾಪತಿಗಳಿಗೆ ದೂರು ನೀಡುತ್ತೇವೆ. ಸರ್ಕಾರ, ಸಿಎಂ, ಡಿಸಿಎಂ, ಗೃಹ ಸಚಿವರು ಮತ್ತು ಪ್ರಿಯಾಂಕ್ ಖರ್ಗೆ ಮೇಲೆ ಹಕ್ಕುಚ್ಯುತಿ ಮತ್ತು ಅಟ್ರಾಸಿಟಿ ಕೇಸ್ ದಾಖಲು ಮಾಡಬೇಕು ಎಂದು ಕಿಡಿಕಾರಿದರು. ಈ ಸರ್ಕಾರದಲ್ಲಿ ವಿಪಕ್ಷ ನಾಯಕರು, ಶಾಸಕರಿಗೆ ರಕ್ಷಣೆ ಇಲ್ಲ. ಗೂಂಡಾ ರಾಜ್ಯವನ್ನು ಈ ಸರ್ಕಾರ ಮಾಡ್ತಿದೆ. ಛಲವಾದಿ ನಾರಾಯಣಸ್ವಾಮಿ ನಾನ್ನುಡಿಯ ಮಾತು ಹೇಳಿದ್ದಾರೆ. ಅದಕ್ಕೆ ವಿಷಾದ ವ್ಯಕ್ತಪಡಿಸಿದ್ದಾರೆ. ಇಷ್ಟಾದರೂ

ಪ್ರಿಯಾಂಕ್ ಬೆಂಬಲಿಗರು ನಾರಾಯಣಸ್ವಾಮಿ ಅವರ ಮೇಲೆ ಹಲ್ಲೆಗೆ ಮುಂದಾಗಿದ್ದು ಸರಿಯಲ್ಲ. ಪೊಲೀಸರೇ ಈ ಗೂಂಡಾಗಳಿಗೆ ಸಪೋರ್ಟ್ ಮಾಡಿದ್ದಾರೆ ಎಂದು ಆರೋಪಿಸಿದರು. ಮಲ್ಲಿಕಾರ್ಜುನ ಖರ್ಗೆ ಹಿಂದೆ ನಾಯಿ ಅನ್ನೋ ಪದ ಬಳಕೆ ಮಾಡಿದ್ರು. ಪ್ರಧಾನಿಗಳನ್ನ ವಿಷ ಸರ್ಪ ಎಂದು ಕರೆದಿದ್ದರು. ಆಗ ಯಾರು ನಮ್ಮ ಕಾರ್ಯಕರ್ತರು ಹೀಗೆ ನಡೆದುಕೊಂಡಿರಲಿಲ್ಲ. ಕರ್ನಾಟಕದಲ್ಲಿ ಪ್ರಜಾಪ್ರಭುತ್ವ ಕಗ್ಗೊಲೆ ಆಗ್ತಿದೆ. ಸಂವಿಧಾನದ ಪುಸ್ತಕ ಹಿಡಿಯೋ ರಾಹುಲ್ ಗಾಂಧಿ ಇದಕ್ಕೆ ಉತ್ತರ ಕೊಡಬೇಕು. ತನಿಖೆ ಆಗಿ ಕ್ರಮ ಆಗೋವರೆಗೂ ಸಿಎಂ ಸಿದ್ದರಾಮಯ್ಯ ಅವರು ಪ್ರಿಯಾಂಕ್ ಖರ್ಗೆ ಅವರನ್ನ ಸಂಪುಟದಿಂದ ತೆಗೆದು ಹಾಕಬೇಕು ಎಂದು ಒತ್ತಾಯಿಸಿದರು.

# ಕೋವಿಡ್ ಪಾಸಿಟಿವ್ ದೃಢ, ಲಕ್ಷಣಗಳೇನು ಶಾಲೆ ಆರಂಭ

## ನಗರದಾದ್ಯಂತ ಶಾಲೆಗಳು ಪುನಃ ತೆರೆಯುವುದರಿಂದ ಪ್ರಕರಣಗಳು ಹೆಚ್ಚಾಗಬಹುದು ಎಂದು ತಜ್ಞರು ಹೇಳಿದ್ದಾರೆ

• ಉದಯವಾಹಿನಿ, ಬೆಂಗಳೂರು

ಬೆಂಗಳೂರಲ್ಲಿ ಮತ್ತೆ ಕೋವಿಡ್ ರೋಗಲಕ್ಷಣಗಳು ಕಾಣಿಸಿಕೊಂಡಿವೆ. ಸಾರ್ವಜನಿಕರಿಗೆ ಆರೋಗ್ಯ ಅಧಿಕಾರಿಗಳು ಎಚ್ಚರಿಕೆ ವಹಿಸಲು ತಿಳಿಸಿದ್ದಾರೆ. ಮೇ 7 ರಿಂದ ಮೇ 14 ರ ನಡುವೆ 19 ಕಡಿಮೆ ತೀವ್ರತೆಯ ಸೌಮ್ಯ ಪ್ರಕರಣಗಳು ವರದಿಯಾಗಿವೆ.

**ಹೊಸ ತಳಿಯ ಲಕ್ಷಣಗಳೇನು:** ರೋಗಿಗಳಲ್ಲಿ ಸುಸ್ತು, ಮೈ ಕೈ ನೋವು ಕಾಣಿಸಿಕೊಂಡಿದೆ. ಸದ್ಯಕ್ಕೆ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೇ 29 ರಿಂದ ನಗರದಾದ್ಯಂತ ಶಾಲೆಗಳು ಪುನಃ ತೆರೆಯುವುದರಿಂದ ಪ್ರಕರಣಗಳು ಹೆಚ್ಚಾಗಬಹುದು ಎಂದು ತಜ್ಞರು ಹೇಳಿದ್ದಾರೆ. ಶಾಲಾ ಬೇಸಿಗೆ ರಜೆ ಮುಗಿಯುವುದರಿಂದ ಸೌಮ್ಯ ರೋಗಲಕ್ಷಣಗಳಿರುವ ಪ್ರಕರಣಗಳು ಹೆಚ್ಚಾಗಬಹುದು. ಆದರೆ, ಕೆಲವೇ ದಿನಗಳಲ್ಲಿ ಇದು ಕಡಿಮೆಯಾಗುವ ನಿರೀಕ್ಷೆಯಿದೆ ಎಂದು ಹೇಳಲಾಗ್ತಿದೆ. ಇದು ಪೋಷಕರಲ್ಲಿ ಹೊಸ ತಲೆನೋವು ಶುರುಮಾಡಿದ್ದು, ಗೊಂದಲಕ್ಕೀಡಾಗುವಂತೆ ಮಾಡಿದೆ.

**ಎಲ್ಲೆಲ್ಲಿ ಕೇಸ್ ದೃಢ:** ಮೇ 7 ರಿಂದ ಮೇ 14 ರ ನಡುವೆ ಬೆಂಗಳೂರಿನಲ್ಲಿ 19 ಜನರಿಗೆ ಕೊರೋನಾ ಸೋಂಕು ತಗುಲಿದೆ. ಯಲಹಂಕ ಮತ್ತು ಮಹದೇವಪುರ ವಲಯಗಳಲ್ಲಿ ತಲಾ 5



ಉದಯವಾಹಿನಿ ಚಿತ್ರ

> **ನಗರದ ಖಾಸಗಿ ಆಸ್ಪತ್ರೆಯೊಂದು 58 ವರ್ಷದ ಕೋವಿಡ್ ಪಾಸಿಟಿವ್ ರೋಗಿಯನ್ನು ದಾಖಲಿಸಿಕೊಂಡಿದೆ. ರೋಗಿಯ ರಕ್ತದಲ್ಲಿನ ಆಮ್ಲಜನಕದ ಮಟ್ಟ 90 ಕ್ಕಿಂತ ಕಡಿಮೆಯಿತ್ತು. ಆಸ್ತಮಾ, ಹೃದಯ ಸಮಸ್ಯೆ, ಮಧುಮೇಹ ಮತ್ತು ಅಧಿಕ ರಕ್ತದೊತ್ತಡದಂತಹ ಕಾಯಿಲೆಗಳು ಇದ್ದುದರಿಂದ ಉಸಿರಾಟದ ತೊಂದರೆ ಉಂಟಾಗಿತ್ತು. ಹಾಗಾಗಿ ಅವರನ್ನು ಆಸ್ಪತ್ರೆಗೆ ದಾಖಲಿಸಲಾದೆ ಎಂದು ಆಸ್ಟರ್ ವೈಟ್‌ಫೀಲ್ಡ್ ಆಸ್ಪತ್ರೆಯ ಪ್ರತಿನಿಧಿಯೊಬ್ಬರು ತಿಳಿಸಿದ್ದಾರೆ.**

### ಆರೋಗ್ಯ ತಜ್ಞರ ಅಭಿಪ್ರಾಯ ಏನು

**ಕೊರೋನಾ ಲಸಿಕೆಯ ಪರಿಣಾಮ ಕಡಿಮೆಯಾಗುವುದರಿಂದ ತೀವ್ರವಾದ ರೋಗಲಕ್ಷಣಗಳು ಕಾಣಿಸಿಕೊಳ್ಳಬಹುದು ಎಂಬ ವದಂತಿಯನ್ನು ವೈದ್ಯರು ತಳ್ಳಿಹಾಕಿದ್ದಾರೆ. ಆರೋಗ್ಯ ತಜ್ಞರ ಪ್ರಕಾರ, 50 ವರ್ಷಕ್ಕಿಂತ ಮೇಲ್ಪಟ್ಟವರು ವಾರ್ಷಿಕವಾಗಿ ಫ್ಲೂ ಲಸಿಕೆ ಮತ್ತು ಪ್ರತಿ ಐದು ವರ್ಷಗಳಿಗೊಮ್ಮೆ ನ್ಯುಮೋನಿಯಾ ಲಸಿಕೆಯನ್ನು ತೆಗೆದುಕೊಳ್ಳುವುದು ಒಳ್ಳೆಯದು ಎಂದು ಸಲಹೆ ನೀಡುತ್ತಾರೆ.**

ಪ್ರಕರಣಗಳು ದಾಖಲಾಗಿವೆ. ಬೆಂಗಳೂರು ಪಶ್ಚಿಮದಲ್ಲಿ 3 ಮತ್ತು ಬೆಂಗಳೂರು ಪೂರ್ವದಲ್ಲಿ 2 ಪ್ರಕರಣಗಳು ವರದಿಯಾವೆ. ರೋಗಲಕ್ಷಣಗಳು ಸೌಮ್ಯವಾಗಿವೆ. ಆದ್ದರಿಂದ ಆತಂಕ ಪಡುವ ಅಗತ್ಯವಿಲ್ಲ ಎಂದು ಆರೋಗ್ಯ ತಜ್ಞರು ಹೇಳಿದ್ದಾರೆ. ಮೇ ಮೊದಲ ವಾರದಿಂದ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ.

ಬಿಬಿಎಂಪಿ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ನಗರದಲ್ಲಿ ಪ್ರಕರಣಗಳು ಹೆಚ್ಚುತ್ತಿರುವುದನ್ನು ಖಚಿತಪಡಿಸಿದ್ದಾರೆ. ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದೆ. ಖಾಸಗಿ ಆಸ್ಪತ್ರೆಗಳಿಂದ ರೆಫರಲ್ ಕೇಂದ್ರಗಳಿಗಾಗಿ ಕರೆಗಳು ಬರುತ್ತಿವೆ. ಆದರೆ ಸರ್ಕಾರವು ಇನ್ನೂ ರೆಫರಲ್ ಆಸ್ಪತ್ರೆಗಳನ್ನು ಗೊತ್ತುಪಡಿಸಿಲ್ಲ ಎಂದು ಅವರು ಹೇಳಿದ್ದಾರೆ. ಆದರೆ, ಆರೋಗ್ಯ ಇಲಾಖೆ ಅಧಿಕಾರಿಗಳು ಮತ್ತು ನಗರದ ಆಸ್ಪತ್ರೆಗಳು ವರದಿ ಮಾಡಿದ ಪ್ರಕರಣಗಳಲ್ಲಿ ಸೌಮ್ಯ ರೋಗಲಕ್ಷಣಗಳಿವೆ. ಆದ್ದರಿಂದ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿಲ್ಲ ಎಂದು ಹೇಳಿದ್ದಾರೆ. ಟ್ರಾವೆಲ್ ಹಿಸ್ಟರಿ ಇರುವವರಿಗೆ ಬರುತ್ತಿದೆ ಕೋವಿಡ್ ಆಸ್ಟರ್ ವೈಟ್‌ಫೀಲ್ಡ್ ಆಸ್ಪತ್ರೆಯ ಸಲಹೆಗಾರರಾದ ಡಾ. ಬಸವರಾಜ್ ಎಸ್ ಕುಂಬಾರ್ ಮಾತನಾಡಿ, ಹೆಚ್ಚಾಗಿ ರೋಗಿಗಳು ಮೈ ಕೈ ನೋವು, ಸುಸ್ತು ಮತ್ತು ಇತರ ಸೌಮ್ಯ ರೋಗಲಕ್ಷಣಗಳೊಂದಿಗೆ ಬರುತ್ತಾರೆ. ಇವು ಐದರಿಂದ ಏಳು ದಿನಗಳಲ್ಲಿ ಕಡಿಮೆಯಾಗುತ್ತವೆ. ಇವರಲ್ಲಿ ಹೆಚ್ಚಿನವರು ಪ್ರಯಾಣದ ಹಿನ್ನೆಲೆಯನ್ನು ಹೊಂದಿದ್ದಾರೆ. ಎಲ್ಲರೂ ಸಾಮಾನ್ಯ ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ. ಮನೆಯಲ್ಲಿಯೇ ಪ್ರತ್ಯೇಕವಾಗಿರುವಂತೆ ಮತ್ತು ಚಿಕಿತ್ಸೆ ಪಡೆಯುವಂತೆ ಸೂಚಿಸುತ್ತಿದ್ದೇವೆ ಎಂದು ಹೇಳಿದ್ದಾರೆ.

## ರಾಮನಗರ ಹೆಸರು ಬದಲಾವಣೆ ರಿಯಲ್ ಎಸ್ಟೇಟ್‌ನ ಕರಪತ್ರದಂತೆ

• ಉದಯವಾಹಿನಿ, ಬೆಂಗಳೂರು

ರಾಮನಗರ ಜಿಲ್ಲೆಯ ಹೆಸರನ್ನು ಬೆಂಗಳೂರು ದಕ್ಷಿಣ ಅಂತ ಮರು ನಾಮಕರಣ ಮಾಡಿರೋ ಸರ್ಕಾರದ ನಡೆಗೆ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಕಿಡಿಕಾರಿದ್ದಾರೆ. ಎಕ್ಸ್‌ನಲ್ಲಿ ಪೋಸ್ಟ್ ಮಾಡುವ ಮೂಲಕ ಸರ್ಕಾರದ ನಿರ್ಧಾರವನ್ನು ಖಂಡಿಸಿ, ರಿಯಲ್ ಎಸ್ಟೇಟ್ ಯೋಜನೆಯ ಕರಪತ್ರದಂತೆ ಮರು ನಾಮಕರಣ ಮಾಡಲಾಗುತ್ತಿದೆ ಎಂದು ಗುಡುಗಿದ್ದಾರೆ.

ಕಳೆದ 2 ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ರಾಮನಗರದಲ್ಲಿ ಒಂದೇ ಒಂದು ಅಭಿವೃದ್ಧಿ ಯೋಜನೆಯೂ ಆರಂಭಗೊಂಡಿಲ್ಲ.

ನೀವು ರಾಜಕೀಯ ಹೋರ್ಡಿಂಗ್ಸ್‌ಗಳನ್ನೇ ಮೂಲ ಸೌಕರ್ಯ ಅಂದುಕೊಂಡಂತಿದೆ. ಇದೇ ರೀತಿ ಮುಂದುವರೆದರೆ, ಮಾನ್ಯ ಡಿ.ಕೆ ಶಿವಕುಮಾರ್ ಅವರು ತಮ್ಮನ್ನು ಡಿ.ಕೆ ಸಿಎಂ ಕುಮಾರ್ ಎಂದು ಮರುನಾಮಕರಣ ಮಾಡಬಹುದು. ಏಕೆಂದರೆ ನಾಯಕತ್ವ ಇಲ್ಲದಿದ್ದಾಗ, ಬ್ರಯಾಂಡಿಂಗ್ ಮಾತ್ರ ಪ್ರಣಾಳಿಕೆಯಾಗುತ್ತದೆ ಎಂದು ಟೀಕಿಸಿದ್ದಾರೆ.



### ಎಕ್ಸ್‌ನಲ್ಲಿ ಏನಿದೆ

**ರಾಮನಗರವನ್ನು ಬೆಂಗಳೂರು ದಕ್ಷಿಣ ಎಂದು ಬದಲಾಯಿಸುವುದು ಅಭಿವೃದ್ಧಿಯಲ್ಲ, ಅದು ಒಂದು ಫಲಕ ಬದಲಾವಣೆ ಮಾತ್ರ. ಐತಿಹಾಸಿಕವಾಗಿ ಆಳವಾದ ಬೇರುಗಳು ಮತ್ತು ಇತಿಹಾಸ ಹೊಂದಿರುವ ಜಿಲ್ಲೆಯನ್ನು ರಿಯಲ್ ಎಸ್ಟೇಟ್ ಯೋಜನೆಯ ಕರಪತ್ರದಂತೆ ಮರುನಾಮಕರಣ ಮಾಡಲಾಗುತ್ತಿದೆ ಎಂದು ಕಿಡಿಕಾರಿದ್ದಾರೆ. ಊರ ಹೆಸರು ಮರುನಾಮಕರಣವು ಬೆಳವಣಿಗೆಗೆ ಮಾಂತ್ರಿಕ ದಂಡವಾಗಿದ್ದರೆ, ಕನಕಪುರವನ್ನು ಕೌಲಲಾಂಪುರ್ ಎಂದು ಮರುನಾಮಕರಣ ಮಾಡಿ ಈಗ ಅಂತರರಾಷ್ಟ್ರೀಯ ನಗರವಾಗಿ ಪರಿವರ್ತಿಸ ಬಹುದಿತ್ತು. ಆದರೆ ದುಃಖಕರವೆಂದರೆ, ನಿಮ್ಮ ಹೊಸ ನಾಮಕರಣದಿಂದ ರಸ್ತೆ ಗುಂಡಿಗಳು ಸುಧಾರಣೆ ಕಾಣುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.**

## GAIL ಗ್ಯಾಸ್ ಪೈಪ್ ಲೈನ್ ಹಾನಿಯಾಗಿ ಅನಿಲ ಸೋರಿಕೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಬಿಡಬ್ಲ್ಯುಎಸ್ ಎಸ್ ಬಿ ನಡೆಸುತ್ತಿರುವ ಕಾಮಗಾರಿ ಸಮಯದಲ್ಲಿ GAIL ಅನಿಲ ಪೈಪ್‌ಲೈನ್ ಆಕಸ್ಮಿಕವಾಗಿ ಹಾನಿಗೊಳಗಾಗಿ ಮಲ್ಲೇಶ್ವರಂನಲ್ಲಿ ಭಯದ ವಾತಾವರಣ ನಾಗರಿಕರಲ್ಲಿ ಉಂಟಾಯಿತು. 8ನೇ ಮುಖ್ಯ ರಸ್ತೆಯಲ್ಲಿ ಅಗೆಯುವ ಸಮಯದಲ್ಲಿ ಈ ಘಟನೆ ಸಂಭವಿಸಿದ್ದು, ಇದರಿಂದ ಅನಿಲ ಸೋರಿಕೆಯುಂಟಾಯಿತು. ಸಂಜೆ 5.30 ರಿಂದ 5.45 ರ ನಡುವೆ ಸೋರಿಕೆ ಸಂಭವಿಸಿದೆ, ಆಗ ದೊಡ್ಡ ಶಬ್ದ ಕೇಳಿಸಿತು, ನಂತರ ಆ ಪ್ರದೇಶದಲ್ಲಿ ತೀವ್ರವಾದ ಅನಿಲದ ವಾಸನೆ ಬಂದಿತು.

ಒಂದು ದೊಡ್ಡ ಶಬ್ದ ಕೇಳಿಸಿದಾಗ ಮನೆಯಿಂದ ಹೊರಬಂದು ನೋಡಿದಾಗ ಸಾಕಷ್ಟು ವಾಸನೆ ಬಂತು ಎಂದು GAIL ದೂರು ಸಂಖ್ಯೆಗೆ ಡಯಲ್ ಮಾಡಿದ ನಿವಾಸಿ ಲಕ್ಷ್ಮಿ ಫಡ್ಕೆ ಹೇಳುತ್ತಾರೆ. ಇದು ಬೆಂಕಿ ಅನಾಹುತಕ್ಕೆ ಕಾರಣವಾಗಬಹುದು ಎಂಬ ಭಯ ಉಂಟಾಗಿ ನಾವು ಮನೆಯಲ್ಲಿ ಕರೆಂಟ್ ಆಫ್ ಮಾಡಿದೆವು. ವಾಸನೆ ಅಸಹನೀಯ ಮತ್ತು ಆತಂಕಕಾರಿಯಾಗಿತ್ತು ಎಂದು ಹೇಳುತ್ತಾರೆ.


ಮಲ್ಲೇಶ್ವರಂ ಜನವಸತಿ ಇರುವ ಪ್ರದೇಶ. ವಿವಿಧ ನಾಗರಿಕ ಕಾಮಗಾರಿಗಳಿಗಾಗಿ ಈಗಾಗಲೇ ಹಲವಾರು ರಸ್ತೆಗಳನ್ನು ಅಗೆದು ಹಾಕಲಾಗಿರುವುದರಿಂದ, ನಿವಾಸಿಗಳು ತಮ್ಮ ವಾಹನಗಳನ್ನು ಸ್ಥಳಾಂತರಿಸಲು ಸಾಧ್ಯವಾಗಲಿಲ್ಲ ನಿವಾಸಿಗಳು ವಾಹನ ನಿಲ್ಲಿಸಲು ಕಷ್ಟಪಡುತ್ತಿದ್ದಾರೆ. ಈ ಪ್ರದೇಶದಲ್ಲಿ ಕನಿಷ್ಠ ಒಂದು ಲಕ್ಷ ಹಿರಿಯ ನಾಗರಿಕರಿದ್ದಾರೆ, ಎಲ್ಲೆಡೆ ರಸ್ತೆಗಳು ಅಗೆದು ಹಾಕಲ್ಪಟ್ಟಿರುವುದರಿಂದ, ನಾವು ಸ್ಥಳಾಂತರಿಸಲು ಬಯಸಿದರೆ ನಮ್ಮಲ್ಲಿ ಹೆಚ್ಚಿನವರು ಹೊರಗೆ ಓಡಿಸಲು ಸಹ ಸಾಧ್ಯವಿಲ್ಲ ಎಂದು ಮತ್ತೊಬ್ಬ ನಿವಾಸಿ ವಿಜಯ ಶೆಣೈ ಹೇಳುತ್ತಾರೆ. ಇದು ಅತ್ಯಂತ ಉದ್ವಿಗ್ನ ಪರಿಸ್ಥಿತಿಯಾಗಿತ್ತು, ಕೆಲವು ರಸ್ತೆಗಳು ತುಂಬಾ ಕೆಟ್ಟದಾಗಿ ಅಗೆದು ಹಾಕಲ್ಪಟ್ಟಿವೆ, ಮಳೆ ಮತ್ತು ಮೃದುವಾದ ಮಣ್ಣಿನಿಂದಾಗಿ ಯಾರಾದರೂ ನಡೆಯಲು ಸಹ ಅಪಾಯಕಾರಿಯಾಗಿದೆ ಎನ್ನುತ್ತಾರೆ. ಅನಿಲ ಸೋರಿಕೆಯು ದೇಶೀಯ ಸಿಎನ್‌ಜಿ ಸರಬರಾಜನ್ನು ಅಡ್ಡಿಪಡಿಸಿತು. ಪ್ರದೇಶದ ಅನೇಕ ಮನೆಗಳು ಅಡುಗೆಗಾಗಿ ಎಲ್‌ಪಿಜಿಯಿಂದ ಪೈಪ್ ಸಿಎನ್‌ಜಿಗೆ ಬದಲಾಯಿಸಿವೆ. ಸೋರಿಕೆಯ ನಂತರ, ಹೆಚ್ಚಿನ ಅಪಾಯವನ್ನು ತಡೆಗಟ್ಟಲು ಗೈಲ್ ಅಧಿಕಾರಿಗಳು ಪೂರೈಕೆಯನ್ನು ಸ್ಥಗಿತಗೊಳಿಸಿದ್ದಾರೆ. ಹೀಗಾದರೆ ನಾವು ಮನೆಯಲ್ಲಿ ಅಡುಗೆ ಮಾಡುವುದು ಹೇಗೆ, ನಾವು ನಮ್ಮ ಎಲ್‌ಪಿಜಿ ಸಂಪರ್ಕಗಳನ್ನು ಬಿಟ್ಟುಕೊಟ್ಟಿದ್ದೇವೆ, ಈಗ ಸಿಎನ್‌ಜಿ ಕೂಡ ಕಡಿತಗೊಂಡಿದೆ. ಈಗ ಸಂಪೂರ್ಣವಾಗಿ ಅಸಹಾಯಕರಾಗಿದ್ದೇವೆ ಎಂದು ಮತ್ತೊಬ್ಬ ನಿವಾಸಿ ಹೇಳುತ್ತಾರೆ. ಘಟನೆಯಿಂದ ಯಾವುದೇ ಅನಾಹುತದ ವರದಿಯಾಗಿಲ್ಲ. ಆದರೆ ಮೂಲಸೌಕರ್ಯ ಕಾರ್ಯದ ಸಮಯದಲ್ಲಿ ಉತ್ತಮ ಸಮನ್ವಯ ಖಚಿತಪಡಿಸಿಕೊಳ್ಳಲು ನಾಗರಿಕ ಅಧಿಕಾರಿಗಳು ಮತ್ತು ಗ್ಯಾಸ್ ಪೂರೈಕೆ ಕಂಪನಿಯಿಂದ ತಕ್ಷಣದ ಕ್ರಮಕ್ಕೆ ನಿವಾಸಿಗಳು ಒತ್ತಾಯಿಸಿದ್ದಾರೆ.

## ಕಸ ನಿರ್ವಹಣೆ : 33 ಪ್ಯಾಕೇಜ್‌ಗಳ ಟೆಂಡರ್

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ರಸ್ತೆ ಸ್ವಚ್ಛತೆಯ ಮೂಲಕ ತ್ಯಾಜ್ಯ ಸಂಗ್ರಹಣೆಯ ಪ್ರಾಥಮಿಕ ಸಾಗಣೆ ದ್ವಿತೀಯ ಹಂತದ ಸಾಗಾಣಿಕೆ ಸೇವೆಯನ್ನು ಸಮರ್ಪಕವಾಗಿ ನಿರ್ವಹಿಸುವ ಉದ್ದೇಶದಿಂದ ಮರು ಟೆಂಡರ್ ಆಹ್ವಾನಿಸಲು ಸಚಿವ ಸಂಪುಟ ಸಭೆ ತೀರ್ಮಾನಿಸಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದರು. ಪ್ರಾಥಮಿಕ ಮತ್ತು ದ್ವಿತೀಯ ಹಂತದ ಸಾಗಾಣಿಕೆ ಸೇವೆಯನ್ನು ಸಮರ್ಪಕವಾಗಿ ನಿರ್ವಹಿಸಲು 7 ವರ್ಷದ ಅವಧಿಗೆ ರೂ. 4,791.95 ಕೋಟಿ ಮೊತ್ತದ 33 ಪ್ಯಾಕೇಜುಗಳನ್ನು ವಿಂಗಡಿಸಿ ಟೆಂಡರ್ ಪ್ರಕ್ರಿಯೆ ನಡೆಸುವ ಪ್ರಸ್ತಾವಕ್ಕೆ ಅನುಮೋದನೆ ನೀಡಲಾಗಿದೆ ಎಂದರು. ಮೊದಲನೇ ವರ್ಷದ ವಾರ್ಷಿಕ ನಿರ್ವಹಣಾ ಅಂದಾಜು ವೆಚ್ಚ 588.54 ಕೋಟಿ



ಆಗಿದ್ದು, ಆ ವೆಚ್ಚವನ್ನು ಬಿಬಿಎಂಪಿ ತನ್ನ ಅನುದಾನದಲ್ಲಿ ಭರಿಸಲಿದೆ. ಒಟ್ಟಾರೆ 4.791.95 ಕೋಟಿಗಳನ್ನು ಆಯಾ ವರ್ಷಗಳ ಬಿಎಸ್‌ಡಬ್ಲ್ಯೂಎಂಎಲ್ ಸಂಸ್ಥೆಯ ನಿಧಿಯಿಂದ ಭರಿಸಲು ಅನುಮೋದನೆ ನೀಡಲಾಗಿದೆ ಎಂದರು. ಈ ಕುರಿತು ಪ್ರತಿಕ್ರಿಯಿಸಿದ ಉಪ ಮುಖ್ಯಮಂತ್ರಿ ಡಿಕೆಶಿ ಈ ಹಿಂದೆ ಬಿಜೆಪಿ ಅವಧಿಯಲ್ಲಿ ಕಸ ವಿಲೇವಾರಿಗೆ 98 ಪ್ಯಾಕೇಜ್‌ಗಳ ಟೆಂಡರ್ ಕರೆಯಲಾಗಿತ್ತು. ಈ ವಿಚಾರವಾಗಿ ಕೆಲವರು ನ್ಯಾಯಾಲಯದ ಮೆಟ್ಟಲೇರಿದರು. ನ್ಯಾಯಾಲಯ ಅವರ ಅರ್ಜಿಯನ್ನು ವಜಾಗೊಳಿಸಿದೆ. ಮುಂದಿನ ನಾಲ್ಕು ತಿಂಗಳಲ್ಲಿ ಈ ಟೆಂಡರ್ ಪ್ರಕ್ರಿಯೆ ಕುರಿತು ಅಂತಿಮ ತೀರ್ಮಾನ ಮಾಡುವಂತೆ ತೀರ್ಪು ನೀಡಿದೆ. ನಾವು ಪ್ರತಿ ಕ್ಷೇತ್ರದಲ್ಲೂ ಒಂದೊಂದು ಪ್ಯಾಕೇಜ್ ಮಾಡಲು ಮುಂದಾಗಿದ್ದೇವೆ. ದೊಡ್ಡ ಕ್ಷೇತ್ರಗಳಲ್ಲಿ ಎರಡು ಪ್ಯಾಕೇಜ್ ಸೇರಿ 33 ಪ್ಯಾಕೇಜ್ ಮೂಲಕ ಕಸ ವಿಲೇವಾರಿ ಮಾಡಲಾಗುವುದು' ಎಂದರು.

> **ಬೆಂಗಳೂರು ನಗರದ ಕೆಂಗೇರಿ ಬಂಡೇಮಠ ಬಡಾವಣೆಯಲ್ಲಿ ಬಹುಮಹಡಿ ವಸತಿ ಸಮುಚ್ಚಯ ನಿರ್ಮಾಣ ಮಾಡಲಾಗುವುದು. 6 ಎಕರೆ 8 ಗುಂಟೆ ಜಮೀನಿನಲ್ಲಿ ಕ್ಲಬ್ ಹೌಸ್, ಈಜುಕೊಳ, ಜಿಮ್, ಗ್ರಂಥಾಲಯ, ಒಳಾಂಗಣ ಕ್ರೀಡಾಂಗಣಗಳನ್ನು ಒಳಗೊಂಡ 2 ಬಿಎಚ್‌ಕೆಯ 214 ಫ್ಲ್ಯಾಟ್‌ಗಳನ್ನು, 3 ಬಿಎಚ್ ಕೆಯ 214 ಫ್ಲ್ಯಾಟ್ ಗಳನ್ನು ನಿರ್ಮಿಸಲಾಗುವುದು. ವಸತಿ ಸಮುಚ್ಚಯ ರೂ.180 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿದೆ ಎಂದು ಪಾಟೀಲ ತಿಳಿಸಿದರು.**

# ಸಚಿವ ಸ್ಥಾನದಿಂದ ಪ್ರಿಯಾಂಕ್ ಖರ್ಗೆ ವಜಾಕ್ಕೆ ಆಗ್ರಹ

## ಛಲವಾದಿ ನಾರಾಯಣಸ್ವಾಮಿಗೆ ದಿಗ್ಬಂಧನ: ರಾಜ್ಯಪಾಲರ ಭೇಟಿಯಾದ ಬಿಜೆಪಿ ನಿಯೋಗ

• ಉದಯವಾಹಿನಿ, ಬೆಂಗಳೂರು

ವಿಧಾನಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಮೇಲೆ ಸಚಿವ ಪ್ರಿಯಾಂಕ್ ಖರ್ಗೆ ಬೆಂಬಲಿಗರು ನಡೆಸಿರುವ ದಿಗ್ಬಂಧನ ಹಾಗೂ ಹಲ್ಲೆಯತ್ನಕ್ಕೆ ಬಿಜೆಪಿ ನಾಯಕರು ಭಾರೀ ಆಕ್ರೋಶ ವ್ಯಕ್ತಪಡಿಸಿದ್ದು, ರಾಜ್ಯಪಾಲ ಥಾವರ್ ಚೆಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿ ಸಚಿವ ಸ್ಥಾನದಿಂದ ಪ್ರಿಯಾಂಕ್ ಖರ್ಗೆ ಅವರನ್ನು ವಜಾ ಮಾಡಬೇಕು ಎಂದು ಮನವಿ ಮಾಡಿದ್ದಾರೆ. ರಾಜಭವನದಲ್ಲಿ ರಾಜ್ಯಪಾಲರನ್ನು ಭೇಟಿಯಾದ ಬಿಜೆಪಿ ನಿಯೋಗ, ಘಟನೆ ಸಂಬಂಧ ರಾಜ್ಯಪಾಲರು ತಕ್ಷಣ ಮಧ್ಯಪ್ರವೇಶ ಮಾಡಬೇಕು. ಸಚಿವ ಸ್ಥಾನದಿಂದ ಪ್ರಿಯಾಂಕ್ ಖರ್ಗೆಯನ್ನು ವಜಾ ಮಾಡಬೇಕು. ಅಲ್ಲದೇ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು ಮನವಿ ಪತ್ರ ಸಲ್ಲಿಸಿದರು.

ಈ ವೇಳೆ ವಿಧಾನಸಭೆ ವಿಪಕ್ಷ ನಾಯಕ ಆರ್ ಅಶೋಕ್, ಚಲುವಾದಿ ನಾರಾಯಣಸ್ವಾಮಿ, ರವಿಕುಮಾರ್, ಅಶ್ವತ್ಥ ನಾರಾಯಣ ಸೇರಿದಂತೆ ಇತರರು ಇದ್ದರು. ನಾರಾಯಣಸ್ವಾಮಿ ಅವರನ್ನು ಚಿತ್ತಾಪುರ ಬಂಗಲೆಯಲ್ಲಿಮರಳು ಮಾಫಿಯಾದೊಂದಿಗೆ ಸಂಬಂಧ ಹೊಂದಿರುವವರು ಸೇರಿದಂತೆ ಕೆಲ ವ್ಯಕ್ತಿಗಳು ಕಾನೂನುಬಾಹಿರವಾಗಿ ಐದು ಗಂಟೆಗಳಿಗೂ ಹೆಚ್ಚು ಕಾಲ ಬಂಧನದಲ್ಲಿಟ್ಟುಕೊಂಡಿದ್ದಾರೆ. ದಾಳಿಕೋರರು ಬಲವಂತವಾಗಿ



ಉದಯವಾಹಿನಿ ಚಿತ್ರ

ಆವರಣಕ್ಕೆ ಬೀಗ ಹಾಕಿದರು, ದೈಹಿಕವಾಗಿ ದಾಳಿ ಮಾಡಲು ಪ್ರಯತ್ನಿಸಿದ್ದು, ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಬಿಜೆಪಿಯ ಇತರ ಸದಸ್ಯರ ಮೇಲೆ ಹಲ್ಲೆ ನಡೆಸಿದ್ದಾರೆ.

ಸ್ಥಳದಲ್ಲಿ ಪೊಲೀಸರಿದ್ದರೂ ಮೌನ ಪ್ರೇಕ್ಷಕರಾಗಿದ್ದಾರೆ. ಗಣ್ಯರನ್ನು ರಕ್ಷಿಸಲು ಮಧ್ಯಪ್ರವೇಶಿಸುವಲ್ಲಿ ವಿಫಲರಾಗಿದ್ದಾರೆ ಎಂದು. ಇಡೀ ಜಿಲ್ಲಾ ಪೊಲೀಸ್ ಪಡೆ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರ ಸೂಚನೆಗಳನ್ನು ಪಾಲಿಸುತ್ತಿದೆ ಎಂಬುದು ಇದರಿಂದ ಸ್ಪಷ್ಟವಾಗಿದೆ ಎಂದು ಆರೋಪಿಸಿದೆ.

ನಾರಾಯಣಸ್ವಾಮಿ ಅವರ ಜೀವಕ್ಕೆ ಬೆದರಿಕೆ ಇದೆ. ಅವರಿಗೆ ಏನಾದರೂ ಆದರೆ ಅದಕ್ಕೆ ರಾಜ್ಯ ಸರ್ಕಾರ ಮತ್ತು ಪ್ರಿಯಾಂಕ್ ಅವರ ಪ್ರಚೋದನೆಯೇ ಕಾರಣ. ಅವರ ಭದ್ರತೆಯನ್ನು ಹೆಚ್ಚಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು.

ಬಿಜೆಪಿ ನಾಯಕ ಎನ್. ರವಿ ಕುಮಾರ್ ಅವರು ಮಾತನಾಡಿ, ಕಲಬುರಗಿಯಲ್ಲಿ ಪ್ರಿಯಾಂಕ್ ಖರ್ಗೆ ಅವರ ಸರ್ವಾಧಿಕಾರದಲ್ಲಿದೆ. ಕಾಂಗ್ರೆಸ್ ಕಾರ್ಯಕರ್ತರು ತಾವು ಮಾಡಿದ್ದೇ ಕಾನೂನು ಎಂದುಕೊಂಡಿದ್ದಾರೆ.

ಪೊಲೀಸರು ಅಸಹಾಯಕರಾಗಿದ್ದಾರೆಂದು ಕಿಡಿಕಾರಿದರು. ಇದೇ ವೇಳೆ ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾದ ಪೊಲೀಸ್ ಅಧಿಕಾರಿಗಳನ್ನು ಅಮಾನತುಗೊಳಿಸಿ. ಅವರ ವಿರುದ್ಧ ಕಠಿಣ ಶಿಸ್ತು ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದರು. ಇದೇ ವೇಳೆ ಮಾತನಾಡಿದ ಛಲವಾದಿ ನಾರಾಯಣಸ್ವಾಮಿಯವರು, ನೂರಕ್ಕೂ ಹೆಚ್ಚು ಗೂಂಡಾಗಳು ಸೇರಿ ನನಗೆ ಮಾರಣಾಂತಿಕ ಹಲ್ಲೆ ಮಾಡಲು ಮುಂದಾಗಿದ್ದರು. ನಮ್ಮ ಮಾಜಿ ಜಿಲ್ಲಾಧ್ಯಕ್ಷರ ಮೇಲೆ ಹಲ್ಲೆ ಮಾಡಿ 3 ಗಂಟೆ ವರೆಗೆ ಕೂಡಿ ಹಾಕಿದ್ದಾರೆ. ನಾನು ಅಮಿತ್ ಶಾ ಅವರಿಗೂ ಪತ್ರ ಬರೆಯುತ್ತೇನೆ. ತಕ್ಷಣ ಪ್ರಿಯಾಂಕ್ ಖರ್ಗೆಯವರನ್ನು ಸಿಎಂ ಸಂಪುಟದಿಂದ ಹೊರಗೆ ಹಾಕಬೇಕು. ನನಗೆ ಪ್ರಿಯಾಂಕ್ ಖರ್ಗೆಯಿಂದ ಪ್ರಾಣ ಬೆದರಿಕೆ ಇದೆ. ನನ್ನ ಪ್ರಾಣಕ್ಕೆ ಏನಾದರೂ ಆದ್ರೆ ಪ್ರಿಯಾಂಕ್ ಕಾರಣ. ನನ್ನನ್ನು ಮುಗಿಸುವ ಸಂಚು ಮಾಡಿದ್ದಾರೆ. ಅವರ ಸೈಟ್ ಪ್ರಕರಣ ಬಯಲಿಗೆ ತಂದ ನನ್ನ ವಿರುದ್ಧ ಪಿತೂರಿ ಮಾಡಿದ್ದಾರೆ. ಸಿದ್ದರಾಮಯ್ಯ ಕಾರಿಗೆ ಕೊಡಗಿನಲ್ಲಿ ಮೊಟ್ಟೆ ಬಿಸಾಕಿದಾಗ ಅವರು ಎಷ್ಟು ಮಾತಾಡಲಿಲ್ಲ ಈಗ ಸಿದ್ದರಾಮಯ್ಯ ಯಾಕೆ ಸುಮ್ಮನಿದ್ದಾರೆ ಎಂದು ಪ್ರಶ್ನಿಸಿದರು

> **ರಾಜ್ಯಪಾಲರಿಗೆ ಮನವಿ ಪತ್ರ ಸಲ್ಲಿಸಿದ ಬಳಿಕ ಮಾಧ್ಯಮಗಳಿಗೆ ಪ್ರತಕಿಕ್ರಿಯಿಸಿದ ಅಶೋಕ್ ಅವರು,ನಾರಾಯಣಸ್ವಾಮಿ ಮೇಲಿನ ದಾಳಿಗೆ ಪ್ರಿಯಾಂಕ್ ಖರ್ಗೆ ಕಾರಣ ಎಂದು ರಾಜ್ಯಪಾಲರಿಗೆ ತಿಳಿಸಿರುವುದಾಗಿ ಹೇಳಿದರು. ಕಾಂಗ್ರೆಸ್ ಕಾರ್ಯಕರ್ತರಿಗೆ ಕಾನೂನು ಕೈಗೆತ್ತಿಕೊಳ್ಳುವ ಅಧಿಕಾರ ಕೊಟ್ಟವರು ಯಾರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಗೂಂಡಾಗಿರಿಯಲ್ಲಿ ತೊಡಗಿದೆ. ನಾರಾಯಣಸ್ವಾಮಿಗೆ ಸೂಕ್ತ ರಕ್ಷಣೆ ನೀಡುವಂತೆ ಹಾಗೂ ಪೊಲೀಸರು ಮತ್ತು ಗೂಂಡಾಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ರಾಜ್ಯಪಾಲರಿಗೆ ಮನವಿ ಮಾಡಲಾಗಿದೆ ಎಂದು ಹೇಳಿದರು.**

ಅಂತರಾಳದಿಂದ.. EDITORIAL

# ಸ್ಥಳಗಳ ಹೆಸರು ಬದಲಾವಣೆ: ಚೀನಾದ ಪ್ರಚೋದನಕಾರಿ ಕ್ರಮ



ಅರುಣಾಚಲ ಪ್ರದೇಶದಲ್ಲಿನ ಕೆಲವು ಸ್ಥಳಗಳ ಹೆಸರು ಬದಲಾಯಿಸುವ ಮೂಲಕ ಚೀನಾ ದೇಶವು ಮತ್ತೊಂದು ಸುತ್ತಿನ ಪ್ರಚೋದನಕಾರಿ ನಡೆಯನ್ನು ಇರಿಸಿದೆ. ಚೀನಾ ಸತತ ಮೂರನೆಯ ವರ್ಷವೂ ಇಂತಹ ಕೆಲಸ ಮಾಡುತ್ತಿದೆ. ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿ, ನಂತರದ ಸಿಂಧೂರ ಕಾರ್ಯಾಚರಣೆಯ ಕಾರಣಕ್ಕೆ ಭಾರತ ಮತ್ತು ಪಾಕಿಸ್ತಾನದ ನಡುವೆ ಸಂಘರ್ಷ ಉಂಟಾಗಿದ್ದ ಸಂದರ್ಭದಲ್ಲಿ ಚೀನಾ ಈ ಕೆಲಸ ಮಾಡಿದೆ. ಭಾರತದ ಅವಿಭಾಜ್ಯ ಅಂಗವಾಗಿರುವ ಈ ರಾಜ್ಯದ ಮೇಲೆ ಚೀನಾ ತನ್ನ ಹಕ್ಕು ಪ್ರತಿಪಾದಿಸುವ ಮಾರ್ಗ ಇದು. ಚೀನಾವು ಈ ಪ್ರದೇಶವನ್ನು ಜಂಗ್ನಾನ್ ಎಂದು ಕರೆಯುತ್ತದೆ. ಅರುಣಾಚಲ ಪ್ರದೇಶವು ತನ್ನದು ಎಂದು ಚೀನಾ ಹೇಳಿಕೊಳ್ಳುವುದನ್ನು ಭಾರತವು ಹಿಂದೆಯೂ ಬಹಳ ಸ್ಪಷ್ಟವಾಗಿ ಖಂಡಿಸಿದೆ. ಭಾರತದ ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರು ಕಳೆದ ವರ್ಷ ನಿಮ್ಮ ಮನೆಯ ಹೆಸರನ್ನು ನಾನು ಇಂದು ಬದಲಾಯಿಸಿದರೆ, ಅದು ನನ್ನದಾಗುತ್ತದೆಯೇ' ಎಂದು ಪ್ರಶ್ನಿಸಿದ್ದರುಸ್ಥಳಗಳ ಹೆಸರುಗಳನ್ನು ಬದಲಾಯಿಸುವುದರಿಂದ ವಾಸ್ತವದಲ್ಲಿ ಯಾವುದೇ ಪರಿಣಾಮ ಆಗುವುದಿಲ್ಲ. ಈ ಸ್ಥಳಗಳ ಮೇಲೆ ತನಗೆ ಹಕ್ಕು ಇದೆ ಎಂಬ ಭಾವನೆಯಲ್ಲಿರುವ ಚೀನಾ. ಸಾಂಕೇತಿಕವಾದ ಈ ಒಂದು ಕೃತ್ಯದ ಮೂಲಕ ಒಂದಿಷ್ಟು ತೃಪ್ತಿಪಟ್ಟುಕೊಳ್ಳಬಹುದು. ಭಾರತ ದಾಖಲಿಸಿರುವ ಆಕ್ಷೇಪಗಳನ್ನು ಅಲಕ್ಷಿಸಿರುವ ಚೀನಾ, ಸ್ಥಳಗಳಿಗೆ ಹೊಸ ಹೆಸರು ನೀಡುವುದು ಭೌಗೋಳಿಕ ಪ್ರದೇಶಗಳ ಹೆಸರುಗಳನ್ನು ಶಿಷ್ಟಗೊಳಿಸುವ ಪ್ರಕ್ರಿಯೆಯ ಒಂದು ಭಾಗ ಎಂದು ಹೇಳಿದೆ.

> ಚೀನಾದ ನಡೆಯು ಪ್ರಯೋಜನಕ್ಕೆ ಬರುವಂಥದ್ದಲ್ಲ. ಇದು ತರ್ಕರಹಿತ ಕ್ರಮ ಎಂದು ಭಾರತ ಪ್ರತಿಕ್ರಿಯಿಸಿದೆ. ಈ ಮೂಲಕ ಚೀನಾದ ನಡೆಯು ತಪ್ಪು ಎಂದು ಭಾರತ ಹೇಳಿದೆ. ಅರುಣಾಚಲ ಪ್ರದೇಶವು ಭಾರತದ ಅವಿಭಾಜ್ಯ ಅಂಗವಾಗಿ ಇರಲಿದೆ ಎಂಬುದನ್ನು ಸ್ಪಷ್ಟಪಡಿಸಿದೆ.

ಆದರೆ ತನ್ನ ಭೂಪ್ರದೇಶದ ಆಚೆಗಿರುವ ಸ್ಥಳಗಳ ಹೆಸರನ್ನು ಶಿಷ್ಟಗೊಳಿಸುವ ಕೆಲಸವನ್ನು ಅದು ಮಾಡಬಾರದು. ಚೀನಾ ದೇಶವು ಇತರ ಮಾರ್ಗಗಳ ಮೂಲಕ ತನ್ನ ಹಕ್ಕು ಸಾಧಿಸುವ ಪ್ರಯತ್ನ ಮಾಡಿದೆ. ಭಾರತದ ಪ್ರಮುಖ ನಾಯಕರು ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿದಾಗಲೆಲ್ಲ ಚೀನಾ ಪ್ರತಿಭಟನೆ ದಾಖಲಿಸಿದೆ.

ಅಲ್ಲದೆ, ಕ್ರೀಡಾಪಟುಗಳು ಈ ರಾಜ್ಯವನ್ನು ಅಂತರ ರಾಷ್ಟ್ರೀಯ ವೇದಿಕೆಗಳಲ್ಲಿ ಪ್ರತಿನಿಧಿಸಿದಾಗಲೂ ಚೀನಾ ಅದನ್ನು ವಿರೋಧಿಸಿದೆ. ಏಕೆಂದರೆ, ಆ ದೇಶವು ಅರುಣಾಚಲ ಪ್ರದೇಶದ ಜನರನ್ನು ತನ್ನ ಪ್ರಜೆಗಳು ಎಂದು ಭಾವಿಸುತ್ತದೆ. ಆದರೆ ಇಂತಹ ನಡೆಗಳನ್ನು ಭಾರತವು ಯಾವಾಗಲೂ ವಿರೋಧಿಸಿದೆ. ಚೀನಾ ದೇಶದ ನಂಬಿಕಸ್ಥ ಗೆಳೆಯ ಆಗಿರುವ ಪಾಕಿಸ್ತಾನದ ಜೊತೆ ಭಾರತ ಸಂಘರ್ಷದಲ್ಲಿ ಇದ್ದ ಸಂದರ್ಭದಲ್ಲಿಯೇ ಹೆಸರು ಬದಲಾಯಿಸುವ ಕೆಲಸಕ್ಕೆ ಚೀನಾ ಮುಂದಾಗಿದ್ದುದು ಕಾಕತಾಳೀಯವೋ ಆಕಸ್ಮಿಕವೋ ಆಗಿರಲಾರದು. ಭಾರತದ ಜೊತೆಗಿನ ಸಂಘರ್ಷದ ಸಂದರ್ಭದಲ್ಲಿ ಪಾಕಿಸ್ತಾನಕ್ಕೆ ಚೀನಾದ ಬೆಂಬಲ ಇತ್ತು, ಸಂಘರ್ಷದ ವೇಳೆ ಅದು ಚೀನಾದಿಂದ ಪೂರೈಕೆಯಾದ ಶಸ್ತ್ರಾಸ್ತ್ರಗಳನ್ನು ಬಳಕೆ ಮಾಡಿತ್ತು. ಹೀಗಾಗಿ, ಹೆಸರು ಬದಲಾಯಿಸುವ ಚೀನಾದ ನಡೆಯು ಒಂದು ಸಂದೇಶ ರವಾನಿಸುವ ಉದ್ದೇಶವನ್ನೂ ಹೊಂದಿರಬಹುದು. ಕ್ಸಿನ್‌ಜಿಯಾಂಗ್ ಉಯ್ಗರ್ ಸ್ವಾಯತ್ತ ಪ್ರದೇಶದಲ್ಲಿ ಬರುವ ಹೊಟನ್ ಪರ್ಫೆಕ್ಚರ್‌ನಲ್ಲಿ ಎರಡು ಹೊಸ ಕೌಂಟಿಗಳನ್ನು ರಚಿಸುವ ತೀರ್ಮಾನವನ್ನು ಚೀನಾ ಈಚೆಗೆ ಪ್ರಕಟಿಸಿದೆ. ಈ ಕೌಂಟಿಗಳ ಕೆಲವು ಪ್ರದೇಶಗಳ ಗಡಿಯನ್ನು ಭಾರತದ ಕೇಂದ್ರಾಡಳಿತ ಪ್ರದೇಶವಾದ ಲಡಾಖ್‌ನ ಒಳಗೂ ಇರುವಂತೆ ಗುರುತಿಸಲಾಗಿದೆ. ಭಾರತ ಮತ್ತು ಚೀನಾದ ವಿಶೇಷ ಪ್ರತಿನಿಧಿಗಳು ಗಡಿ ತಕರಾರು ಮತ್ತು ಇತರ ವಿಷಯಗಳ ಕುರಿತು ನಡೆಸುತ್ತಿರುವ ಮಾತುಕತೆಯು ಪೂರ್ಣಗೊಂಡಿಲ್ಲ. ಕೆಲವು ವರ್ಷಗಳ ಕಾಲ ಸ್ಥಗಿತಗೊಂಡಿದ್ದ ಈ ಮಾತುಕತೆಗಳು ಈಗ ಮತ್ತೆ ಶುರುವಾಗಿವೆ. ದ್ವಿಪಕ್ಷೀಯ ಸಂಬಂಧದ ಮೇಲೆ ಕೆಟ್ಟ ಪರಿಣಾಮ ಉಂಟುಮಾಡುವಂತಹ ಏಕಪಕ್ಷೀಯ ಕ್ರಮಗಳನ್ನು ಎರಡೂ ದೇಶಗಳು ತೆಗೆದುಕೊಳ್ಳಬಾರದು ಎಂಬುದು ಕೂಡ ಈ ಮಾತುಕತೆಗಳ ಒಂದು ಉದ್ದೇಶ. ಹೀಗಿದ್ದರೂ ಚೀನಾ ದೇಶವು ಇಂತಹ ಆಕ್ರಮಣಕಾರಿ ಧೋರಣೆಯ ಕ್ರಮಗಳನ್ನು ತೆಗೆದುಕೊಳ್ಳುತ್ತಿರುತ್ತದೆ. ಪ್ರಚೋದನಕಾರಿ ಕ್ರಿಯೆಗಳ ರೂಪದಲ್ಲಿ ಕಾಣಿಸಿಕೊಳ್ಳುವ ಚೀನಾದ ವಿಸ್ತರಣಾವಾದಿ ನೀತಿಗಳ ಪರಿಣಾಮವನ್ನು ಅದರ ಇತರ ನೆರೆಯ ದೇಶಗಳು ಕೂಡ ಅನುಭವಿಸಿವೆ.

---




• ಹಿಂದಿನ ಸಂಚಿಕೆಯಿಂದ 78ನೆಯ ಅಧ್ಯಾಯ

ಇಲ್ಲದಿದ್ದರೆ ಆ ಮುನೀಶ್ವರನು ಕಾಡುಗಿಚ್ಚು ಉರಿಯುವಂತೆ ಕೋಪಾಗ್ನಿಯಿಂದ ನಿನ್ನನ್ನು ದಹಿಸಿಬಿಟ್ಟಾನು. ಈ ದಾರಿಯಲ್ಲೇ ಹೋದರೆ ನನ್ನ ತಂದೆಯ ಆಶ್ರಮವು ಸಮೀಪದಲ್ಲಿದೆ. ಆತನನ್ನು ಒಳ್ಳೆಯ ಮಾತುಗಳಿಂದ ಸಂತವಿಟ್ಟರೆ ನಿನ್ನನ್ನು ಕೋಪದಿಂದ ಶಪಿಸನು. ನನ್ನ ಮರ್ಮ ಸ್ಥಾನದಲ್ಲಿ ನೆಟ್ಟಿರುವ ಅಂಬನ್ನು ಕೀಳು. ಆ ಬಾಣವು ನದೀಪ್ರವಾಹವು ತೀರವನ್ನು ಕೊರೆಯುವಂತೆ ನನ್ನ ಶರೀರವನ್ನು ನೋಯಿಸುತ್ತ ಪ್ರಾಣಗಳನ್ನು ಹೋಗಲೀಸದೆ ತಡೆದುಕೊಂಡಿದೆ. ನನ್ನ ಶರೀರದಲ್ಲಿ ನೆಟ್ಟಿರುವ ಅಂಬನ್ನು ತೆಗೆ' ಎಂದು ನುಡಿದನು.

ಕೌಸಲ್ಯಾದೇವಿ, ನಾನು ಆ ಮುನಿಕುಮಾರನ ಶರೀರದಿಂದ ಅಂಬನ್ನು ತೆಗೆದರೆ ಆ ಕ್ಷಣದಲ್ಲೇ ಆತನು ಪ್ರಾಣಗಳನ್ನು ಬಿಡುವನೆಂದು ಆ ಅಂಬನ್ನು ತೆಗೆಯದೆ ಚಿಂತಾಕ್ರಾಂತನಾಗಿ ಶೋಕದಿಂದಿದ್ದೆನು. ಆತನು ವ್ಯಥೆಯನ್ನು ಧೈರ್ಯದಿಂದ ತಾಳಿಕೊಂಡು ಸ್ಥಿರಚಿತ್ರನಾಗಿ ಪ್ರಯಾಸದಿಂದ ಮೆಲ್ಲಗೆ ನನ್ನನ್ನು ಕುರಿತು ರಾಜ, ನಿನ್ನ ಮನಸ್ಸಿನಲ್ಲಿ ಬ್ರಹ್ಮಹತ್ಯಾಪಾಪವು ಬರುವುದೆಂದು ಚಿಂತೆಯನ್ನು ಬಿಟ್ಟು ಸ್ಥಿರಚಿತ್ತನಾಗು. ನಾನು ಬ್ರಾಹ್ಮಣಜನ್ಮದಲ್ಲಿ ಬಂದವನಲ್ಲ. ಶೂದ್ರಯಲ್ಲಿ ವೈಶ್ಯ ನಿಂದ ಜನಿಸಿದೆನು. ಆದ್ದರಿಂದ ಬ್ರಹ್ಮಹಾಪಾಪವು ಸಂಭವಿಸುವುದಿಲ್ಲ. ನಿನ್ನ ಮನಸ್ಸಿಗೆ ವ್ಯಥೆ ಬೇಡ ಎಂದು ನುಡಿದು ಧಾತುಗುಂದಿ ಕೈಕಾಲುಗಳನ್ನು ಕದಲಿಸದೆ ಹೊರಳುತ್ತ ನಡುಗುತ್ತಿದ್ದನು. ನಾನು ಆತನ ಶರೀರದಿಂದ ಅಂಬನ್ನು ತೆಗೆಯಲು ಆ ಮುನಿಕುಮಾರನು ನನ್ನನ್ನು ದೃಷ್ಟಿಸಿ ನೋಡಿ ತನ್ನ ಪ್ರಾಣಗಳನ್ನು ಬಿಟ್ಟನು. ಹೀಗೆ ಗಾಯಕ್ಕೀಡಾಗಿ ಸರಯೂನದಿ ತೀರದಲ್ಲಿ ಬಿದ್ದಿದ್ದ ಆ ಮುನಿಕುಮಾರನನ್ನು ಕಂಡು ನಾನು ಕಂಗೆಟ್ಟೆನು

**ದಶರಥನಿಗೆ ಶಾಪ ಬಂದ ವೃತ್ತಾಂತ**

ಕೌಸ, ನಾನು ಆಜ್ಞಾನದಿಂದ ಮಹತ್ತಾದ ಪಾಪವನ್ನು ಮಾಡಿ ಆ ಪಾವವು ಹೇಗೆ ಹೋಗುವುದೆಂದು ಚಿಂತಿಸಿದನು. ಆ ಋಷಿಪುತ್ರನು ಸರಯನದಿಯ ದಡದಲ್ಲಿ ಬಿಟ್ಟ ನೀರು ತುಂಬಿದ್ದ ಕೊಡವನ್ನು ತೆಗೆದುಕೊಂಡು ಆ ಮುನಿಕುಮಾರನು ಹೇಳಿದ ಮಾರ್ಗದಿಂದ ಆತನ ಆಶ್ರಮಕ್ಕೆ ಹೋದೆನು. ಆ ಆಶ್ರಮದಲ್ಲಿ ವೃದ್ಧರಾಗಿ ಅಂಧರಾಗಿ ಯಾರೂ ದಿಕ್ಕಿಲ್ಲದೆ ದುರ್ಬಲರಾದ ಆ ಮುನಿಯನ್ನೂ ಮುನಿಪತ್ನಿಯನ್ನೂ ಕಂಡೆನು. ಅವರು ಗರಿಗಳಿಲ್ಲದ ಪಕ್ಷಿಗಳಂತೆ ತಮ್ಮ ಕುಮಾರನು ಉದಕವನ್ನು ತರುವನೆಂಬ ಆಶೆಯಿಂದ ಕುಳಿತುಕೊಂಡು ಇಷ್ಟಾಲಾಪಗಳನ್ನು ಹೇಳಿಕೊಳ್ಳುತ್ತ ಅನಾಥರಾಗಿದ್ದರು. ನಾನು ಅಂಥ ಅನಾಥರ ಮಗನನ್ನು ಕೊಂದ ಮನೋವ್ಯಥೆಯಿಂದ ಭಯಪಟ್ಟು ಆ ಆಶ್ರಮದ ಬಳಿಗೆ ಹೋಗಲು ಆ ಸದ್ದನ್ನು ಕೇಳಿ ಆ ದಂಪತಿಗಳು ತಮ್ಮ ಮಗನು ಬಂದನೆಂದೆಣಿಸಿದರು. ಎಲೈ ಮಗನೆ, ಇಷ್ಟು ಹೊತ್ತು ಏಕೆ ತಡಮಾಡಿದೆ ಉದಕವನ್ನು ಬೇಗ ತೆಗೆದುಕೊಂಡು ಬಾ. ನೀನು ನಮಗೆ ಶೀಘ್ರದಲ್ಲಿ ಉದಕವನ್ನು ತಂದುಕೊಡದೆ ನದೀತೀರದಲ್ಲಿ ಆಡುತ್ತಿದ್ದೆ. ನೀನು ಯಾವಾಗ ಉದಕವನ್ನು ತಂದುಕೊಡುವೆಯೋ ಎಂದು ತೃಪೆಯಿಂದ ಕಂಗೆಟ್ಟಿದ್ದೇವೆ. ಶೀಘ್ರದಲ್ಲಿ ಉದಕವನ್ನು ಕೊಡು. ಏಕೆ ಪ್ರತ್ಯುತ್ತರವನ್ನು ನುಡಿಯದಿದ್ದೀಯೆ ನಾವು ನಿನ್ನನ್ನು ನಿಷ್ಠುರವಾಗಿ ನುಡಿದೆವೆ ನುಡಿದರೂ ಸಹಿಸಿಕೊ, ನೀನೇ ನಮಗೆ ಗತಿ, ನೀನೇ ನಮ್ಮ ಕಣ್ಣು, ನಮ್ಮ ಪ್ರಾಣಗಳು ನಿನ್ನ ಅಧೀನ ಎಂದು ನುಡಿದರು.

**ಮುಂದುವರಿಯುವುದು...**

---


# ವೇದ ಕಾಲದ ಸ್ವಾತಂತ್ರ್ಯ ಯುಗದ ಮಹಿಳೆಯರು



☛ ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಗಂಡಸಿಗೆ ಮಿಗಿಲಾದ ಬೆಲೆಯುಳ್ಳ ವೇದ ಕಾಲದ ಸಮಾಜದಲ್ಲಿಯೂ ಹೆಂಗಸಿಗೆ ಯಾವ ತೆರನಾಗಿಯೂ ಕೀಳವಾದ ಸ್ಥಾನವಿರಲಿಲ್ಲ. ಅವರಿಗೆ ಉಚಿತವಾದ ವಿಚಾರ ಸ್ವಾತಂತ್ರ್ಯವು, ಆಚಾರ ಸ್ವಾತಂತ್ರ್ಯವು, ಸಂಚಾರ ಸ್ವಾತಂತ್ರ್ಯವು ಇದ್ದಿತು. ತರುಣ ತರುಣಿಯರು ಸಂಕೋಚವಿಲ್ಲದೆ ಒಬ್ಬರನ್ನೊಬ್ಬರು ನೋಡುತಿದ್ದರು, ಕೂಡುತ್ತಿದ್ದರು. ಉತ್ಸವ ಪ್ರಸಂಗಗಳಲ್ಲಿ ಸ್ತ್ರೀ ಪುರುಷರು ಒಂದೆಡೆಗೆ ನೆರೆಯುತ್ತಿದ್ದರು.

ಹೆಂಗಸರು ಸಾರ್ವಜನಿಕವಾಗಿ ಭಾಷಣ ಮಾಡುತಿದ್ದರು. ಕೆಲವೆಡೆಗೆ ಗಂಡು ಹೆಣ್ಣು ಹುಡುಗರು ಸಹಶಿಕ್ಷಣವನ್ನು ಪಡೆಯುತ್ತಿದ್ದರು. ಪ್ರೇಮ ವಿವಾಹಗಳು ನಡೆಯುತಿದ್ದವು. ಕುಮಾರಿಯು ತನ್ನ ಜೀವನದ ಸಹಚರನನ್ನು ಆರಿಸಿಕೊಳ್ಳ ಬಹುದಾಗಿತ್ತು. ಈ ರೀತಿಯೆ ಮುಂದೆ ಒಂದು ವಿಶಿಷ್ಟ ವರ್ಗದಲ್ಲಿ ಸ್ವಯಂವರ ಪದ್ಧತಿಯಾಗಿ ಪರಿಣಮಿಸಿತು.



ಮದುವೆಯ ಸಮಯದಲ್ಲಿ ಕನ್ನೆಯರು ಪ್ರೌಢರಾಗಿ ರುತ್ತಿದ್ದರು. ಈ ಕಾಲದ ಬಾಲೆಯರು ನೃತ್ಯ ಗೀತಾದಿ ಕಲೆಗಳನ್ನು ಆಸಕ್ತಿಯಿಂದ ಅಭ್ಯಾಸ ಮಾಡುತಿದ್ದರು. ಕಲಿತ ಹೆಂಗಸರ ಸಂಖ್ಯೆಯು ಹೆಚ್ಚಾಗಿತ್ತು. ಬಾಲಕರಂತೆ ಬಾಲಿಕೆಯರು ಉಪನಯನ ಸಂಸ್ಕಾರ ಹೊಂದಿ ವಿಧಿಪೂರ್ವಕ ವೇದಾಧ್ಯಯನ ಮಾಡುತಿದ್ದರು. ಅನೇಕ ವಿದ್ಯೆಗಳ ವ್ಯಾಸಂಗಮಾಡಿ ಪಾರಂಗತರಾಗುತಿದ್ದರು. ಹೀಗೆ ಕಲಿತು ಪ್ರಶಸ್ತಿಯನ್ನು ಪಡೆದ ಕೆಲವರು ಶಿಕ್ಷಣ ವ್ಯವಸಾಯವನ್ನು ಕೈಕೊಂಡು ಆಚಾರ್ಯ ಉಪಾಧ್ಯಾಯೆ ಎಂಬ ಗೌರವಕ್ಕೆ ಪಾತ್ರರಾಗುತಿದ್ದರು. ಕೆಲವರು ವೇದಾಂತ, ತತ್ತ್ವಜ್ಞಾನ ಮುಂತಾದ ಗಹನ ವಿಷಯಗಳನ್ನು ಪರಿಶೋಧಿಸುತ್ತ ಆಮರಣ ಅವಿವಾಹಿತರಾಗಿ ಬಾಳುತಿದ್ದರು. ಇಂತಹರಿಗೆ ಬ್ರಹ್ಮವಾದಿನಿ ಎಂದು ಹೆಸರು. ಕೆಲವರು ವೇದ ಮಂತ್ರಗಳನ್ನು ರಚಿಸಿ ಪುರುಷರ ಜೊತೆಯಲ್ಲಿ ಮಂತ್ರದ್ರಷ್ಟಾರರು ಎಂದೆನಿಸುವ ಘನತೆಯನ್ನು ಪಡೆದಿದ್ದರು. ಹೀಗೆ ಯಜ್ಞ ವಿಧಾನದಲ್ಲಿ ಅರ್ಧಾಂಗಿಯ ಹೊಣೆಯು ಬಹಳ ಮಹತ್ತ್ವವುಳ್ಳುದು ಆಗಿತ್ತು. ಆಕೆಯು ವೇದ ಮಂತ್ರಗಳನ್ನು ಪಠಿಸುತ್ತ ಪ್ರತ್ಯಕ್ಷವಾಗಿ ಭಾಗವಹಿಸದೆ ಯಜ್ಞವೂ ಪೂರ್ತಿಯಾಗುತ್ತಿರಲಿಲ್ಲ. ಅವಿವಾಹಿತನಿಗೆ ಯಜ್ಞ ಮಾಡುವ ಅಧಿಕಾರವೆ ಇರಲಿಲ್ಲ. ಹೆಂಡತಿಯು ಗಂಡನ ನೆರವಿಲ್ಲದೆ ಸಾಯಂಕಾಲದಲ್ಲಿಯೂ ಒಮ್ಮೊಮ್ಮೆ ಪ್ರಾತಃಕಾಲದಲ್ಲಿಯೂ ಅಗ್ನಿಗೆ ಆಹುತಿಯನ್ನು ಅರ್ಪಿಸುತಿದ್ದಳು. ಸ್ತ್ರೀಯರು ಪುರುಷರ ಆವಶ್ಯಕತೆಯಿಲ್ಲದೆ ಸುಗ್ಗಿಯ ಕಾಲದಲ್ಲಿ ಸೀತಾಯಜ್ಞವನ್ನು ಮಾಡುತಿದ್ದರು. ಹೆಂಗಸರು ತಾವೆ ತಾವಾಗಿ ಎಷ್ಟೋ ವೈದಿಕ ಕರ್ಮಗಳನ್ನು ನೆರವೇರಿಸುತ್ತಿದ್ದರು. ಪ್ರಧಾನ ಧರ್ಮ ಕಾರ್ಯವಾದ ಯಾವ ಅತಿಥಿ ಸತ್ಕಾರವು ಬಾಲಿಕೆಯರ ಪ್ರಧಾನ ಕರ್ತವ್ಯ ಗಳಲ್ಲಿ ಒಂದಾಗಿತ್ತು. ತಂದೆಯ ಆಸ್ತಿಯಲ್ಲಿ ಮಗನಷ್ಟೇ ಮಗಳಿಗೂ ಅಧಿಕಾರವಿದ್ದಿತು. ವಿವಾಹಿತ ಕನ್ನೆಯರಂತೆ ಆಜನ್ಮ ಬ್ರಹ್ಮಚಾರಿಣಿಯರಾದ ಕುಮಾರಿಯರು ತಂದೆಯ ಸೊತ್ತಿನಲ್ಲಿ ಪಾಲುಗಾರರಾಗುತಿದ್ದರು.

ಉಚ್ಚವರ್ಣದವರೆನಿಸುವ ಬ್ರಾಹ್ಮಣ ಕ್ಷತ್ರಿಯ ವೈಶ್ಯರಲ್ಲಿ ಮಿಶ್ರವಿವಾಹಗಳು ಧಾರಾಳವಾಗಿ ನಡೆಯುತ್ತಿದ್ದುವು. ಆರ್ಯವಲ್ಲದ ಮತ್ತು ಶೂದ್ರಜಾತಿಯ ಹೆಣ್ಣನೊಡನೆ ಮದುವೆಯಾಗಲಿಕ್ಕೆ ವಿರೋಧ ವಿಲ್ಲದಿದ್ದರೂ ಇಂತಹ ಸಂಬಂಧಗಳು ಸ್ವಲ್ಪವಾಗುತ್ತಿದ್ದುವು. ಬೆಳೆದ ವಯಸ್ಸಿನಲ್ಲಿ ಲಗ್ನಗಳು ಆಗುತ್ತಿದ್ದುದರಿಂದ ವಿಧವೆಯರ ಸಂಖ್ಯೆಯು ಬಹಳ ಕಡಿಮೆಯಾಗಿತ್ತು. ನಿಯೋಗ ಪದ್ಧತಿಯಿಂದ ವಿಧವೆಯರು ಸಂತಾನ ಲಾಭವನ್ನು ಪಡೆಯಬಹುದಾಗಿತ್ತು. ಸನಾತನ ಸಂಸ್ಕತಿಯಲ್ಲಿ ಪ್ರತಿಯೊಂದು ಆಧ್ಯಾತ್ಮಿಕ ವಿಚಾರ ಅಮೂಲ್ಯವಾದದ್ದು ಸ್ನೇಹಿತರೇ....ನಮ್ಮ ಸನಾತನ ಸಂಸ್ಕೃತಿ ಮರೆಯಬೇಡಿ.

---

# ಗರ್ಭಿಣಿಯರು ಇನ್‌ಸ್ಟಂಟ್ ನೂಡಲ್ಸ್ ತಿನ್ನಬಹುದೇ

ಗರ್ಭಾವಸ್ಥೆಯಲ್ಲಿ ನೂಡಲ್ಸ್ ತಿನ್ನಬೇಕೆನ್ನುವ ಹಂಬಲವಾಗುವುದು ಸಾಮಾನ್ಯ. ಹಾಗಂತ ತ್ವರಿತವಾಗಿ ಸಿದ್ಧವಾಗುವ ಪ್ಯಾಕೇಟ್ ನೂಡಲ್ಸ್‌ನ್ನು ಬಳಸುವ ಮುನ್ನ ಎಚ್ಚರ. ಇದರಲ್ಲಿರುವ ಹೆಚ್ಚಿನ ಪೌಷ್ಟಿಕಾಂಶವಿರುವುದಿಲ್ಲ. ಪ್ರತಿದಿನ ಇದನ್ನು ತಿನ್ನುವುದು ಪೌಷ್ಟಿಕಾಂಶದ ಕೊರತೆಯನ್ನುಂಟು ಮಾಡಬಹುದು. ಗರ್ಭಿಣಿಯರಿಗೆ ನಾನಾ ರೀತಿಯ ಬಯಕೆಗಳಿರುತ್ತವೆ. ಗರ್ಭಾವಸ್ಥೆಯಲ್ಲಿ ತಮಗೆ ಮನಸ್ಸಿಗೆ ಬಂದದ್ದನ್ನು ತಿನ್ನಬೇಕೆನಿಸುವುದು ಸಹಜ. ಹಾಗಿರುವಾಗ ಬಹುತೇಕರಿಗೆ ಚಾಟ್ಸ್, ಚೈನೀಸ್ ಐಟಂ ತಿನ್ನುವ ಹಂಬಲವಾಗುತ್ತದೆ. ನೂಡಲ್ಸ್ ಏನೋ ಕೆಲವೇ ನಿಮಿಷಗಳಲ್ಲಿ ತಯಾರಾಗುತ್ತದೆ. ಗರ್ಭಿಣಿಯರು ನೂಡಲ್ಸ್ ತಿನ್ನಬಹುದೇ, ಅದರಲ್ಲಿ ಗರ್ಭಿಣಿಯರಿಗೆ ಬೇಕಾಗುವಂತಹ ಪೌಷ್ಟಿಕಾಂಶಗಳು ಇವೆಯೇ ಎನ್ನುವುದನ್ನು ನಾವಿಲ್ಲಿ ತಿಳಿಯೋಣ.

**ದಿನಾಲೂ ತಿನ್ನಲು ಯೋಗ್ಯವಲ್ಲ:** ನೂಡಲ್ಸ್ ತಯಾರಿಸೋದು ಸುಲಭ, ಇದನ್ನು ಪ್ರೊಸೆಸ್ಡ್ ಆಗಿಡಲಾಗುತ್ತದೆ, ಅಧಿಕ ಉಪ್ಪಿನಿಂದ ಕೂಡಿರುತ್ತದೆ. ಅದರಲ್ಲಿರುವ ಪೌಷ್ಟಿಕಾಂಶ ಮೌಲ್ಯವು ಗರ್ಭಾವಸ್ಥೆಯಲ್ಲಿ ದಿನಾಲು ತಿನ್ನಲು ಯೋಗ್ಯವಾಗಿಲ್ಲ. ಹಾಗಾಗಿ ಇದನ್ನು ತಿನ್ನಬೇಕೆಂಬ ಆಸೆಯಾದರೆ ನೀವು ಇದನ್ನು ಆರೋಗ್ಯಕರ ರೀತಿಯಲ್ಲಿ ತಯಾರಿಸಿ ತಿನ್ನಬಹುದು. ಸಾಮಾನ್ಯವಾಗಿ ಇನ್‌ಸ್ಟಂಟ್ ನೂಡಲ್ಸ್‌ನ್ನು ಮೈದಾ ಹಿಟ್ಟು, ಪಾಮ್ ಎಣ್ಣೆ, ಅಧಿಕ ಉಪ್ಪನ್ನು ಬಳಸಿ ತಯಾರಿಸಲಾಗುತ್ತದೆ. ಇವು ಆರೋಗ್ಯಕ್ಕೆ ಒಳ್ಳೆಯದಲ್ಲ. ಪ್ರೆಗಾಟಿಪ್ಸ್ ಪ್ರಕಾರ ಇದನ್ನು ಗರ್ಭಾವಸ್ಥೆಯಲ್ಲಿ ಇದನ್ನು ತಿನ್ನೋದ್ರಿಂದಾಗುವ ಹಾನಿಯನ್ನು ತಿಳಿಯೋಣ.

**ಗರ್ಭಾವಸ್ಥೆಯಲ್ಲಿ ನೂಡಲ್ಸ್ ಸೇವನೆ ಹೇಗೆ ಹಾನಿಕಾರಕ:** ಇನ್‌ಸ್ಟಂಟ್ ನೂಡಲ್ಸ್‌ನಲ್ಲಿ ಯಾವ ಫ್ಲೇವರ್ ಇದೆ ಎನ್ನುವುದನ್ನು ಮೊದಲು ನೂಡಲ್ಸ್ ಪ್ಯಾಕೇಟ್‌ನಲ್ಲಿ ಚೆಕ್ ಮಾಡಬೇಕು.

**ಕಡಿಮೆ ಪೌಷ್ಟಿಕಾಂಶದ ಮೌಲ್ಯ:** ಇನ್‌ಸ್ಟಂಟ್ ನೂಡಲ್ಸ್‌ನಲ್ಲಿ ಭ್ರೂಣದ ಬೆಳವಣಿಗೆ, ತಾಯಿಯ ಆರೋಗ್ಯಕ್ಕೆ ನಿರ್ಣಾಯಕವಾದ ಪ್ರೋಟೀನ್, ಫೈಬರ್, ಜೀವಸತ್ವಗಳು, ಖನಿಜಗಳಂತಹ ಪ್ರಮುಖ ಪೋಷಕಾಂಶಗಳ ಕೊರತೆಯಿದೆ. ಇದನ್ನು ಸೇವಿಸುವುದರಿಂದ ಪೌಷ್ಟಿಕಾಂಶದ ಕೊರತೆಗೆ ಕಾರಣವಾಗಬಹುದು. ಟ್ರಾನ್ಸ್ ಕೊಬ್ಬುಗಳು, ಸ್ಯಾಚುರೇಟೆಡ್ ಕೊಬ್ಬುಗಳು: ಇನ್‌ಸ್ಟಂಟ್ ನೂಡಲ್ಸ್ ಟ್ರಾನ್ಸ್ ಕೊಬ್ಬುಗಳು, ಹೆಚ್ಚಿನ ಮಟ್ಟದ ಸ್ಯಾಚುರೇಟೆಡ್ ಕೊಬ್ಬನ್ನು ಹೊಂದಿರುತ್ತದೆ. ಇವು ಗರ್ಭಾವಸ್ಥೆಯಲ್ಲಿ ಕೊಲೆಸ್ಟ್ರಾಲ್ ಮಟ್ಟವನ್ನು ಹೆಚ್ಚಿಸಬಹುದು ಮತ್ತು ಹೃದ್ರೋಗದ ಅಪಾಯವನ್ನು ಹೆಚ್ಚಿಸಬಹುದು.

**ಕೃತಕ ಸೇರ್ಪಡೆಗಳು:** ಇನ್‌ಸ್ಟಂಟ್ ನೂಡಲ್ಸ್‌ನಲ್ಲಿರುವ ಕೃತಕ ಬಣ್ಣಗಳು ಸುವಾಸನೆಗಳು ರುಚಿ, ಶೆಲ್ಫ್ ಜೀವಿತಾವಧಿಯನ್ನು ಹೆಚ್ಚಿಸುವ ಗುರಿಯನ್ನು ಹೊಂದಿವೆ. ಆದರೆ ಇದನ್ನು ಪ್ರತಿದಿನ ಸೇವಿಸಿದರೆ ಭ್ರೂಣದ ಬೆಳವಣಿಗೆಗೆ ಅಡ್ಡಿಯಾಗಬಹುದು. **ಅತಿಯಾಗಿ ಸೇವಿಸುವುದರಿಂದಾಗುವ ಅಪಾಯಗಳು:** ಗರ್ಭಾವಸ್ಥೆಯಲ್ಲಿ ತ್ವರಿತ ನೂಡಲ್ಸ್ ಅನ್ನು ಹೆಚ್ಚಾಗಿ ತಿನ್ನುವುದು ಹಲವಾರು ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗಬಹುದು.



**ಗರ್ಭಾವಸ್ಥೆಯ ಮಧುಮೇಹ:** ಅವುಗಳ ಹೆಚ್ಚಿನ ಕಾರ್ಬೋಹೈಡ್ರೇಟ್ ಅಂಶವು ಗರ್ಭಾವಸ್ಥೆಯ ಮಧು ಮೇಹದ ಅಪಾಯ ಹೆಚ್ಚಿಸಬಹುದು.

**ಬೊಜ್ಜು, ತೂಕ ಹೆಚ್ಚಾಗುವುದು:** ಅದರಲ್ಲಿರುವ ಹೆಚ್ಚಿನ ಕೊಬ್ಬು ಮತ್ತು ಕ್ಯಾಲೋರಿ ಅಂಶವು ಅನಾರೋಗ್ಯಕರ ತೂಕ ಹೆಚ್ಚಾಗಲು ಕಾರಣವಾಗಬಹುದು.

ಪ್ರಿಕ್ಲಾಂಪ್ಸಿಯಾ ಅಥವಾ ಸಿಸೇರಿಯನ್ ಹೆರಿಗೆ ಯಂತಹ ತೊಡಕುಗಳ ಅಪಾಯವನ್ನು ಹೆಚ್ಚಿಸುತ್ತದೆ.

---

# ಗೌರವಾನ್ವಿತ ಮುಖ್ಯಮಂತ್ರಿಗಳೇ ಅನರ್ಹ ವಾಹನಗಳು, ಬಳಸದೇ ಇರುವ ವಾಹನಗಳಿಗೆ ಗುಜರಿ ನೀತಿ ಶೀಘ್ರದಲ್ಲಿ ಘೋಷಿಸಿ

■ ಚನ್ನೇಗೌಡ ಉಜ್ಜನಿ ಚಲುವಯ್ಯ
• ಉದಯವಾಹಿನಿ ವಿಶೇಷ



ನಮಸ್ಕಾರ ಬಂಧುಗಳೇ ರಾಜ್ಯದಲ್ಲಿ ದಿನೇ ದಿನೇ ಒಂದಲ್ಲಾ ಒಂದು ಸಮಸ್ಯೆಯನ್ನು ನಾವು ನೋಡುತ್ತಲೇ ಜೀವನ ಸಾಗಿಸುತ್ತಿದ್ದೇವೆ. ವಾಯು ಮಾಲಿನ್ಯ, ಶಬ್ದ ಮಾಲಿನ್ಯ, ಪರಿಸರ ಮಾಲಿನ್ಯ ಹೀಗೆ ಇತಿ ಮಿತಿ ಇಲ್ಲದೇ ಹೆಚ್ಚುತ್ತಿರುವ ಜನಸಂಖ್ಯೆ ಒಂದೆಡೆಯಾದರೆ, ನಗರದ ಅದೇ ಎಂಜಿ ರಸ್ತೆ, ಅದೇ ಜೆಸಿ ರಸ್ತೆ, ಅದೇ ವಿಧಾನಸೌಧದ ರಸ್ತೆ, ಇಲ್ಲಿ ರಸ್ತೆಯನ್ನು ದೊಡ್ಡದು ಮಾಡಲು ಸದ್ಯದ ಸ್ಥಿತಿಯಲ್ಲಿ ಸಾಧ್ಯವೇ. ಕೆಲವೊಂದು ಬದಲಾವಣೆ ಮಾಡುವ ಮೂಲಕ ಸಾಮಾನ್ಯ ನಾಗರೀಕರು ನೆಮ್ಮದಿಯಾಗಿ ಬದುಕಬಹುದು.

ಬೆಂಗಳೂರು ನಗರದಲ್ಲಿ ಬಳಕೆಗೆ ಬಾರದ ಲಕ್ಷಾಂತರ ವಾಹನಗಳು ಇನ್ನೂ ಗುಜರಿ ಮುಖ ನೋಡದೆ ಸರ್ಕಾರದ ಚುರುಕು ಆದೇಶಕ್ಕಾಗಿ ಕಾಯುತ್ತಿವೆ.



ಮಾನ್ಯ ಮುಖ್ಯಮಂತ್ರಿಗಳು ಬೆಂಗಳೂರಿನಲ್ಲಿರುವ ಹಳೆಯ, ಬಳಕೆಗೆ ಬಾರದ ವಾಹನಗಳನ್ನು ನಗರದಿಂದ ಹೊರಗೆ ಸಾಗಿಸುವ ಗುಜರಿಗೆ ಸೇರಿಸುವ ವ್ಯವಸ್ಥೆ ಕೂಡಲೇ ಮಾಡಬೇಕು. ನಗರದ ಮುಖ್ಯ ರಸ್ತೆ ಬದಿಯಲ್ಲಿ ನಿಲ್ಲಿಸಿರುವ ಬಳಸದೇ ಇರುವ ವಾಹನಗಳನ್ನು ಸಂಬಂಧ ಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಳ್ಳುವ ಮೂಲಕ ಕೂಡಲೇ ತೆರವು ಮಾಡಿಸಬೇಕು. 20 ವರ್ಷಕ್ಕಿಂತ ಹಳೆಯ ವಾಹನಗಳನ್ನು ರಸ್ತೆಗಿಳಿಸುವುದನ್ನು ತಡೆಯಲು ರಾಜ್ಯ ಸರ್ಕಾರ ಗುಜರಿ ನೀತಿಯನ್ನು ಇಂದಿನಿಂದಲೇ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ಹಳೆಯ ಹಾಗೂ ಬಳಕೆಗೆ ಬಾರದ ವಾಹನಗಳನ್ನು ಕೊಟ್ಟು, ಹೊಸ ವಾಹನವನ್ನು ಖರೀದಿಸುವ ಮಾಲೀಕರಿಗೆ ಒಂದಷ್ಟು ರಿಯಾಯಿತಿ ನೀಡುವ ವ್ಯವಸ್ಥೆ ಕೂಡಲೇ ನಡೆಯಬೇಕು. ರಾಜ್ಯ ರೈತ ವರ್ಗ ಹಾಗೂ ಹಿಂದುಳಿದ ವರ್ಗದವರಿಗೆ ವಿಶೇಷ ರಿಯಾಯಿತಿ ಹಾಗೂ ಸರಳ ಮಾರ್ಗದ ಸಾಲದ ವ್ಯವಸ್ಥೆ ಮೂಲಕ ಹೊಸ ವಾಹನ ಖರೀದಿ ಮಾಡಲು ಅವಕಾಶ ಕಲ್ಪಿಸಿಕೊಡಬೇಕು.

20 ವರ್ಷಕ್ಕಿಂತ ಹಳೆಯ ವಾಹನಗಳನ್ನು ಸಂಬಂಧ ಪಟ್ಟ ಅಧಿಕಾರಿಗಳು ವಿಶೇಷ ತಂಡಗಳ ಮೂಲಕ ಇಂದಿನಿಂದಲೇ ರಸ್ತೆಗಿಳಿಸುವುದನ್ನು ನಿಲ್ಲಿಸಬೇಕು. ತುಂಬಾ ಹಳೆಯ ನೋಂದಾಯಿತ ವಾಹನಗಳನ್ನು ಗುಜರಿಯಲ್ಲಿ ಸೇರಿಸಲು ಸೂಕ್ತ ಜಾಗಗಳ ವ್ಯವಸ್ಥೆ ಕೂಡಲೇ ಆಗಬೇಕು.ತುಂಬಾ ಹಳೆಯ ವಾಹನಗಳಿಗೆ ಇಂಧನ ತುಂಬಲು ನಿಷೇಧ ಮಾಡಬೇಕು.

ಮಾನ್ಯ ಗೌರವಾನ್ವಿತ ಮುಖ್ಯ ಮಂತ್ರಿಗಳು, ಉಪಮುಖ್ಯಮಂತ್ರಿಗಳು, ಸಾರಿಗೆ ಸಚಿವರು ಕೂಡಲೇ ಮಾಲಿನ್ಯ ರಹಿತ ಸ್ವಚ್ಛ ಕರ್ನಾಟಕ ಮಾಡುವ ಮೂಲಕ ಸಾಮಾನ್ಯ ನಾಗರೀಕವರ್ಗ ನೆಮ್ಮದಿಯಾಗಿ ಬದುಕಲು ಒಂದಷ್ಟು ಉತ್ತಮ ವ್ಯವಸ್ಥೆ ನೀಡಬೇಕೆಂದು ಈ ಮೂಲಕ ತಮ್ಮಲ್ಲಿ ಗೌರವದ ಮನವಿ ಸಲ್ಲಿಸುತ್ತಿದ್ದೇವೆ.

---

# ಡಿಕೆ ಬ್ರದರ್ಸ್ ಬುಡಕ್ಕೆ ನ್ಯಾಷನಲ್ ಹೆರಾಲ್ಡ್ ಪ್ರಕರಣ

• ಉದಯವಾಹಿನಿ ಬೆಂಗಳೂರು



ನ್ಯಾಷನಲ್ ಹೆರಾಲ್ಡ್ ಪ್ರಕರಣ ಈಗ ಡಿಸಿಎಂ ಡಿಕೆಶಿ ಹಾಗೂ ಮಾಜಿ ಸಂಸದ ಡಿಕೆ ಸುರೇಶ್ ಬುಡಕ್ಕೆ ಬಂದಿದೆ. ಯಂಗ್ ಇಂಡಿಯಾಗೆ ಡಿಕೆಶಿ ಮತ್ತು ಡಿಕೆ ಸುರೇಶ್ 2.5 ಕೋಟಿ ರೂ. ದೇಣಿಗೆ ನೀಡಿದ್ದಾರೆ ಎಂದು ಜಾರಿ ನಿರ್ದೇಶನಾಲಯ ಚಾರ್ಜ್ ಶೀಟ್‌ನಲ್ಲಿ ಇಬ್ಬರ ಹೆಸರು ಉಲ್ಲೇಖಿಸಿದೆ ಎಂದು ತಿಳಿದುಬಂದಿದೆ. ಹೀಗಾಗಿ ಡಿಕೆ ಬ್ರದರ್ಸ್‌ಗೆ ಇಡಿ ಸಂಕಷ್ಟ ಎದುರಾಗಿದೆ. ಇನ್ನು ಈ ಬಗ್ಗೆ ಪ್ರತಿಕ್ರಿಯಿಸಿರುವ ಸಹೋದರರು, ನಾನು 25 ಲಕ್ಷ, ನನ್ನ ತಮ್ಮ ಡಿ.ಕೆ.ಸುರೇಶ್ 25 ಲಕ್ಷ ಕೊಟ್ಟಿದ್ದಾನೆ. ನಮ್ಮ ಪಕ್ಷ ನಡೆಸುತ್ತಿದ್ದ ಪತ್ರಿಕೆಗೆ ದೇಣಿಗೆ ಕೊಟ್ಟರೆ ತಪ್ಪೇನು ಎಂದು ಡಿಕೆ ಶಿವಕುಮಾರ್ ಪ್ರಶ್ನಿಸಿದ್ದಾರೆ.

**ಹಣ ಕೊಟ್ಟಿರುವುದನ್ನು ಒಪ್ಪಿಕೊಂಡ ಡಿಕೆ ಸುರೇಶ್:** ಇನ್ನು ಈ ಬಗ್ಗೆ ಮಾಜಿ ಸಂಸದ ಡಿಕೆ ಸುರೇಶ್ ಪ್ರತಿಕ್ರಿಯಿಸಿ, ಯಂಗ್ ಇಂಡಿಯಾ ಟ್ರಸ್ಟ್‌ಗೆ ಹಣ ಕೊಟ್ಟಿದ್ದೇವೆ. ಎರಡು, ಎರಡೂವರೆ ಕೋಟಿ ರೂ. ಹಣ ಕೊಟ್ಟಿದ್ದೇವೆ. ಈ ಸಂಬಂಧ ಅಧಿಕಾರಿಗಳು ಕೇಳಿದ ಪ್ರಶ್ನೆಗೆ ಉತ್ತರ ಕೊಟ್ಟಿದ್ದೇವೆ. ನಾವು ಕೊಟ್ಟಿಲ್ಲ ಅಂತ ಹೇಳುತ್ತಿಲ್ಲ.

> **ನ್ಯಾಷನಲ್ ಹೆರಾಲ್ಡ್ ಅಕ್ರಮ**

ದುರುದ್ದೇಶ ಪೂರ್ವಕವಾಗಿ ಆರೋಪ ಮಾಡುತ್ತಿದ್ದು, ನಮ್ಮ ಕಾಂಗ್ರೇಸ್ ನಾಯಕರ ಮೇಲೆ ಹೊರಿಸುವ ಪ್ರಯತ್ನ ಚಾರ್ಜ್‌ಶೀಟ್ ನಲ್ಲಿ ಮಾಡಿದ್ದಾರೆ. ನಾವು ಕಾನೂನಾತ್ಮಕವಾಗಿ ಹೋರಾಟ ಮಾಡುತ್ತೇವೆ. ಇದು ರಾಜಕೀಯ ಪೂರಿತವಾದ ಪ್ರಕರಣ. ಸೋನಿಯಾ ಗಾಂಧಿಯವರ ಟ್ರಸ್ಟ್ ಅಲ್ಲ. ಯಂಗ್ ಇಂಡಿಯಾ ಸಂಸ್ಥೆಗೆ ಕೊಟ್ಟಿರೋದು. ಅವರು ವೈಯುಕ್ತಿಕವಾಗಿ ಹಣ ಬಳಸಿಕೊಂಡಿಲ್ಲ. ಅದು ಟ್ರಸ್ಟ್‌ಗೆ ಬಳಕೆಯಾಗಿದೆ. ಇಡಿಯವರಿಗೂ ಎಲ್ಲಾ ಮಾಹಿತಿ ಕೊಟ್ಟಿದ್ದೇವೆ. ಇದರಲ್ಲಿ ಮುಚ್ಚಿಡುವ ಪ್ರಶ್ನೆಯೇ ಇಲ್ಲ ಎಂದು ಖಡಕ್ ಆಗಿ ಹೇಳಿದರು. ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ತನಿಖೆ ನಡೆಸಿದ್ದ ಇಡಿ ಅಧಿಕಾರಿಗಳು, ದೇಣಿಗೆ ನೀಡಿದ್ದ ಮೂಲವನ್ನು ಕೆದಕಿದ್ದು, ಈ ಸಂಬಂಧ 2022ರ ನವೆಂಬರ್‌ನಲ್ಲಿ ಡಿಕೆ ಸರೇಶ್ ಅವರನ್ನು ವಿಚಾರಣೆಗೊಳಪಡಿಸಿತ್ತು. ಎರಡು ದಿನಗಳ ವಿಚಾರಣೆ ವೇಳೆ ಡಿಕೆ ಸುರೇಶ್ ಸಹ ದೇಣಿಗೆ ನೀಡಿದ ಹಣದ ಮೂಲದ ದಾಖಲೆಗಳನ್ನು ಇಡಿ ಮುಂದಿಟ್ಟಿದ್ದರು. ಇದರ ಬೆನ್ನಲ್ಲೇ ಇದೀಗ ಈ ನ್ಯಾಷನಲ್ ಹೆರಾಲ್ಡ್ ಅಕ್ರಮ ಹಣ ವರ್ಗಾವಣೆ ಪ್ರಕರಣದ ಚಾರ್ಜ್‌ಶೀಟ್‌ನಲ್ಲಿ ಇಡಿ ಅಧಿಕಾರಿಗಳು, ಡಿಸಿಎಂ ಡಿಕೆಶಿ, ಡಿಕೆ ಸುರೇಶ್, ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಹೆಸರು ಉಲ್ಲೇಖ ಮಾಡಿದ್ದಾರೆ.

> **ಡಿಕೆಶಿ ಹೇಳಿದ್ದೇನು**
>
> ವಿಜಯಪುರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿರುವ ಡಿಕೆಶಿ, ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ನಾವು 50 ಲಕ್ಷ ರೂ. ಹಣ ಕೊಟ್ಟಿದ್ದೇವೆ. ನಾನು 25 ಲಕ್ಷ, ನನ್ನ ತಮ್ಮ ಡಿ.ಕೆ.ಸುರೇಶ್ 25 ಲಕ್ಷ ಕೊಟ್ಟಿದ್ದಾನೆ. ನಮ್ಮ ಪಕ್ಷ ನಡೆಸುತ್ತಿದ್ದ ಪತ್ರಿಕೆಗೆ ದೇಣಿಗೆ ಕೊಟ್ಟರೆ ತಪ್ಪೇನು ಟ್ರಸ್ಟ್ ವತಿಯಿಂದಲೂ ನ್ಯಾಷನಲ್ ಹೆರಾಲ್ಡ್‌ಗೆ ದೇಣಿಗೆ ನೀಡಿದ್ದೇವೆ. ನಾವೇನು ಕದ್ದು ದೇಣಿಗೆ ಕೊಟ್ಟಿದ್ದೀವಾ ಸಂಪಾದನೆ ಮಾಡಿದ ಆಸ್ತಿಯಿಂದ ರಾಜಾರೋಷವಾಗಿಯೇ ಕೊಟ್ಟಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.

---

# ಪಾಲಕ್ ಸೊಪ್ಪು ಆರೋಗ್ಯಕ್ಕೆ ಸಮಸ್ಯೆ

ಪಾಲಕ್ ಅನ್ನು ಸೂಪರ್‌ಫುಡ್ ಎಂದು ಕರೆಯಲಾಗುತ್ತದೆ, ಇದು ಕಬ್ಬಿಣ, ಕ್ಯಾಲ್ಸಿಯಂ ಮತ್ತು ವಿಟಮಿನ್ ಎ, ಕೆ ನಂತಹ ಅಗತ್ಯ ಪೋಷಕಾಂಶಗಳಿಂದ ತುಂಬಿರುತ್ತದೆ. ಇದನ್ನು ಅತಿಯಾಗಿ ಸೇವಿಸುವುದರಿಂದ ಹಲವಾರು ಕಡೆಗಣಿಸಲಾದ ಅಡ್ಡಪರಿಣಾಮಗಳಿಗೆ ಕಾರಣವಾಗಬಹುದು ಸೊಪ್ಪು ತರಕಾರಿಗಳ ಸೇವನೆ ಆರೋಗ್ಯಕ್ಕೆ ತುಂಬಾನೇ ಒಳ್ಳೆಯದು. ಅಂತಹ ಸೊಪ್ಪುಗಳ ಪಟ್ಟಿಗೆ ಪಾಲಕ್ ಸೊಪ್ಪು ಕೂಡಾ ಸೇರುತ್ತದೆ. ಪಾಲಕ್ ಒಂದು ಪೌಷ್ಟಿಕಾಂಶದಿಂದ ಸಮೃದ್ಧವಾಗಿರುವ ಆಹಾರವಾಗಿದ್ದು, ಇದರಲ್ಲಿ ಜೀವಸತ್ವಗಳು, ಖನಿಜಗಳು ಉತ್ಕರ್ಷಣ ನಿರೋಧಕಗಳು ಇರುವುದರಿಂದ ಹಲವಾರು ಆರೋಗ್ಯ ಪ್ರಯೋಜನಗಳನ್ನು ಹೊಂದಿದೆ. ಇದು ರೋಗನಿರೋಧಕ ಕಾರ್ಯವನ್ನು ಬೆಂಬಲಿಸುತ್ತದೆ, ಕಣ್ಣಿನ ಆರೋಗ್ಯವನ್ನು ಸುಧಾರಿಸುತ್ತದೆ, ರಕ್ತದೊತ್ತಡವನ್ನು ಕಡಿಮೆ ಮಾಡುತ್ತದೆ ಮತ್ತು ಹೃದ್ರೋಗ ಮತ್ತು ಕ್ಯಾನ್ಸರ್ ವಿರುದ್ಧ ರಕ್ಷಿಸುತ್ತದೆ. ಆದರೆ ಯಾವುದನ್ನೇ ಆದರೂ ಅತಿಯಾಗಿ ಸೇವಿಸಿದರೆ ಆರೋಗ್ಯ ಹಾನಿಯನ್ನುಂಟು ಮಾಡಬಲ್ಲದು. ಹಾಗೆಯೇ ಅತಿಯಾದ ಪಾಲಕ್ ಸೇವನೆಯು ನಾನಾ ರೀತಿಯ ಸಮಸ್ಯೆಯನ್ನುಂಟು ಮಾಡಬಲ್ಲದು.

**ಮೂತ್ರಪಿಂಡದ ಕಲ್ಲುಗಳು:** ಪಾಲಕ್ ಹೆಚ್ಚಿನ ಮಟ್ಟದ ಆಕ್ಸಲೇಟ್‌ಗಳನ್ನು ಹೊಂದಿರುತ್ತದೆ. ಇದು ಕ್ಯಾಲ್ಸಿಯಂನೊಂದಿಗೆ ಬಂಧಿಸಿ ಕ್ಯಾಲ್ಸಿಯಂ ಆಕ್ಸಲೇಟ್ ಹರಳುಗಳನ್ನು ರೂಪಿಸುವ ಸಂಯುಕ್ತಗಳಾಗುತ್ತವೆ. ಈ ಹರಳುಗಳು ಮೂತ್ರಪಿಂಡಗಳಲ್ಲಿ ಸಂಗ್ರಹವಾಗಿ ಮೂತ್ರಪಿಂಡದ ಕಲ್ಲುಗಳ ರಚನೆಗೆ ಕಾರಣವಾಗಬಹುದು. ಮೂತ್ರಪಿಂಡದ ಕಲ್ಲುಗಳ ಇತಿಹಾಸ ಹೊಂದಿರುವ ವ್ಯಕ್ತಿಗಳು ಅಥವಾ ಕಿಡ್ನಿಸ್ಟೋನ್ ಹೊಂದಿರುವವರು ಆದಷ್ಟು ಪಾಲಕ್ ಸೇವನೆಯನ್ನು ಕಡಿಮೆಮಾಡುವುದು ಉತ್ತಮ. **ಜೀರ್ಣಕಾರಿ ಅಸ್ವಸ್ಥತೆ :** ಪಾಲಕ್‌ನಲ್ಲಿ ಹೆಚ್ಚಿನ ಫೈಬರ್ ಇದ್ದು, ಇದು ಸಾಮಾನ್ಯವಾಗಿ ಜೀರ್ಣಕ್ರಿಯೆಗೆ ಪ್ರಯೋಜನಕಾರಿಯಾಗಿದೆ. ಇದನ್ನು ಹೆಚ್ಚಿನ ಪ್ರಮಾಣದಲ್ಲಿ ಸೇವಿಸುವುದರಿಂದ ಹೊಟ್ಟೆ ಉಬ್ಬುವುದು, ಅನಿಲ ರಚನೆ, ಹೊಟ್ಟೆಯಲ್ಲಿ ಸೆಳೆತದಂತಹ ಜಠರಗರುಳಿನ ಸಮಸ್ಯೆಗಳಿಗೆ ಕಾರಣವಾಗಬಹುದು. ವಿಶೇಷವಾಗಿ ಸೂಕ್ಷ್ಮ ಜೀರ್ಣಾಂಗ ವ್ಯವಸ್ಥೆಗಳು ಅಥವಾ ಕೆರಳಿಸುವ ಕರುಳಿನ ಸಿಂಡ್ರೋಮ್ ನಂತಹ ಪರಿಸ್ಥಿತಿಗಳನ್ನು ಹೊಂದಿರುವ ವ್ಯಕ್ತಿಗಳಲ್ಲಿ ಹೆಚ್ಚಿನ ಸಮಸ್ಯೆಯನ್ನುಂಟು ಮಾಡುತ್ತದೆ.

**ರಕ್ತ ತೆಳುಗೊಳಿಸುವ ಔಷಧಿ ತೆಗೆದುಕೊಳ್ಳುವವರಿಗೆ ಹಾನಿಕಾರಕ:** ವಿಟಮಿನ್‌ಕೆಯಲ್ಲಿ ಸಮೃದ್ಧವಾಗಿರುವ ಪಾಲಕ್ ರಕ್ತ ಹೆಪ್ಪುಗಟ್ಟುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.



> **ಪಾಲಕ್ ಅನ್ನು ಹಿಸ್ಟಮೈನ್-ಬಿಡುಗಡೆ ಮಾಡುವ ಆಹಾರವೆಂದು ಪರಿಗಣಿಸಲಾಗುತ್ತದೆ, ಅಂದರೆ ಇದು ದೇಹದಲ್ಲಿ ಹಿಸ್ಟಮೈನ್ ಬಿಡುಗಡೆಯನ್ನು ಪ್ರಚೋದಿಸುತ್ತದೆ. ಹಿಸ್ಟಮೈನ್ ಅಸಹಿಷ್ಣುತೆ ಇರುವ ವ್ಯಕ್ತಿಗಳಿಗೆ, ಇದು ತಲೆನೋವು, ಚರ್ಮದ ದದ್ದುಗಳು, ಕಟ್ಟಿದ ಮೂಗಿನ ಸಮಸ್ಯೆ ಅಥವಾ ಜೀರ್ಣಕಾರಿ ಸಮಸ್ಯೆಗಳಂತಹ ಲಕ್ಷಣಗಳಿಗೆ ಕಾರಣವಾಗಬಹುದು. ಹಿಸ್ಟಮೈನ್ ಅಸಹಿಷ್ಣುತೆ ಇರುವವರು ಪಾಲಕ್ ಮತ್ತು ಇತರ ಹಿಸ್ಟಮೈನ್ ಬಿಡುಗಡೆ ಮಾಡುವ ಆಹಾರಗಳ ಸೇವನೆಯನ್ನು ತಪ್ಪಿಸಬೇಕು**

ರಕ್ತ ತೆಳುಗೊಳಿಸುವ ಔಷಧಿಗಳನ್ನು ತೆಗೆದು ಕೊಳ್ಳುವ ವ್ಯಕ್ತಿಗಳು ಹೆಚ್ಚು ಪಾಲಕ್ ಸೇವಿಸಿದ್ರೆ, ಅದು ರಕ್ತದನವನ್ನು ತೆಳುಗಳಿಸಲು ಬಿಡೋದಿಲ್ಲ. ಅಂತಹ ವ್ಯಕ್ತಿಗಳಿಗೆ ವಿಟಮಿನ್ ಕೆ ಯಲ್ಲಿ ಸಮೃದ್ಧವಾಗಿರುವ ಆಹಾರಗಳ ಅತಿಯಾದ ಸೇವನೆಯು ಔಷಧಿಗಳ ಪರಿಣಾಮ ಕಾರಿತ್ವಕ್ಕೆ ಅಡ್ಡಿಯಾಗಬಹುದು. ಈ ಹಸ್ತಕ್ಷೇಪವು ರಕ್ತ ಹೆಪ್ಪುಗಟ್ಟುವಿಕೆಯ ಅಪಾಯವನ್ನು ಹೆಚ್ಚಿಸಬಹುದು. ಅಂತಹ ಔಷಧಿಗಳನ್ನು ತೆಗೆದುಕೊಳ್ಳುವ ವ್ಯಕ್ತಿಗಳು ವಿಟಮಿನ್ ಕೆ ಯ ಸ್ಥಿರ ಸೇವನೆಯನ್ನು ಕಾಯ್ದುಕೊಳ್ಳಬೇಕು, ಗಮನಾರ್ಹ ಆಹಾರ ಬದಲಾವಣೆಗಳನ್ನು ಮಾಡುವ ಮೊದಲು ವೈದ್ಯರನ್ನು ಸಂಪರ್ಕಿಸಬೇಕು.

**ಹಿಸ್ಟಮೈನ್ ಅಸಹಿಷ್ಣುತೆ ಲಕ್ಷಣಗಳು**

**ಕೊಬ್ಬಿನ ಹೀರಿಕೊಳ್ಳುವಿಕೆ ಕಡಿಮೆ ಮಾಡುತ್ತದೆ:** ಪಾಲಕ್‌ನಲ್ಲಿರುವ ಆಕ್ಸಲೇಟ್‌ಗಳು ಕ್ಯಾಲ್ಸಿಯಂ, ಕಬ್ಬಿಣ ಮೆಗ್ನೀಸಿಯಮ್‌ನಂತಹ ಅಗತ್ಯ ಖನಿಜಗಳಿಗೆ ಬಂಧಿಸ ಬಹುದ ದೇಹದಲ್ಲಿ ಅವುಗಳ ಹೀರಿಕೊಳ್ಳುವಿಕೆಯನ್ನು ಕಡಿಮೆ ಮಾಡುತ್ತದೆ. ಕಾಲಾನಂತರದಲ್ಲಿ, ಇದು ಕೊರತೆಗಳಿಗೆ ಕಾರಣವಾಗಬಹುದು, ವಿಶೇಷವಾಗಿ ಪ್ರಾಥಮಿಕ ಪೋಷಕಾಂಶದ ಮೂಲವಾಗಿ ಪಾಲಕ್ ಅನ್ನು ಹೆಚ್ಚು ಅವಲಂಬಿಸಿರುವ ವ್ಯಕ್ತಿಗಳಲ್ಲಿ. ಪಾಲಕ್ ಅನ್ನು ಬೇಯಿಸುವುದು ಅದರ ಆಕ್ಸಲೇಟ್ ಅಂಶವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

**ಅಲರ್ಜಿಯ ಪ್ರತಿಕ್ರಿಯೆಗಳು:** ಕೆಲವರಿಗೆ ಕೆಲವೊಂದು ಆಹಾರಗಳನ್ನು ತಿಂದ್ರೆ ಆಗೋದಿಲ್ಲ. ಹಾಗೆಯೇ ಕೆಲವರಿಗೆ ಪಾಲಕ್ ಸೇವನೆಯಿಂದ ಅಲರ್ಜಿ ಇರುತ್ತದೆ. ಅಂತಹವರು ಪಾಲಕ್ ಸೇವಿಸಿದ್ರೆ, ತುರಿಕೆ, ಊತ, ದದ್ದುಗಳಂತಹ ಸಮಸ್ಯೆ ಇರುವವರು ಪಾಲಕ್ ಸೇವನೆಯನ್ನು ತಪ್ಪಿಸಬೇಕು.

● ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮೂಲಕ ಗ್ರಾಮೀಣ ಪ್ರದೇಶಗಳಿಗೆ ನೀರು

# ಗ್ರಾಮಗಳಲ್ಲಿ ನೀರಿನ ತಾಪತ್ರಯವಿಲ್ಲ: ಬಳಕೆಗೆ ಬೇಕಿದೆ ಜಾಗೃತಿ

• ಉದಯವಾಹಿನಿ ತೇರದಾಳ

ಪಟ್ಟಣ ಸೇರಿದಂತೆ ತಾಲ್ಲೂಕು ವ್ಯಾಪ್ತಿಯ ಗ್ರಾಮಗಳಲ್ಲಿ ನೀರಿನ ತಾಪತ್ರಯವಿಲ್ಲ. ಆದರೆ ಜನರಲ್ಲಿ ಜಾಗೃತಿಯ ಕೊರತೆಯಿಂದ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ. ಬಹುಗ್ರಾಮ ಕುಡಿಯುವ ನೀರಿನ ಯೋಜನೆ ಮೂಲಕ ಗ್ರಾಮೀಣ ಪ್ರದೇಶಗಳಿಗೆ ನೀರು ಹರಿದರೆ, ಪಟ್ಟಣಕ್ಕೂ ಕೃಷ್ಣಾ ನದಿಯಿಂದ ಸಮರ್ಪಕ ನೀರು ಪೂರೈಕೆಯಾಗುತ್ತಿದೆ.

ಪಟ್ಟಣ ವ್ಯಾಪ್ತಿಯಲ್ಲಿ ಹೆಚ್ಚುತ್ತಿರುವ ಜನಸಂಖ್ಯೆ, ಮನೆಗಳಗಳಿಗನುಗುಣವಾಗಿ ನಿತ್ಯ ನೀರು ಪೂರೈಕೆ ಮಾಡಲಾಗುತ್ತಿಲ್ಲ. 24/7 ನೀರು ಪೂರೈಕೆಗೆಂದು ಸಿದ್ದವಾಗಿದ್ದ ಯೋಜನೆ ಸರ್ಕಾರದ ಮಟ್ಟದಲ್ಲೆ ರದ್ದಾಗುವ ಮೂಲಕ ಪೈಪ್ ಅಳವಡಿಸಲು ತೆಗೆದ ಗುಂಡಿಗಳನ್ನು ಜನತೆಗೆ ಕಾಣಿಕೆಯಾಗಿ ನೀಡಿದೆ. 2005ಕ್ಕೂ ಪೂರ್ವದಲ್ಲಿ ಪಟ್ಟಣಕ್ಕೆ ಎರಡು ಐತಿಹಾಸಿಕ ಕೆರೆಗಳು ನೀರಿನ ಮೂಲಗಳಾಗಿದ್ದವು. ಕೆಲವರು ಕೆರೆಯ ನೀರು ಕುಡಿದರೆ ಇನ್ನೂ ಕೆಲವರು ಸಮೀಪದ ಸಸಾಲಟ್ಟಿ, ಗೊಲಬಾವಿ ಹಾಗೂ ಕಾಲತಿಪ್ಪಿಯ ಖಾಸಗಿ ಕೊಳವೆ ಬಾವಿಗಳಿಂದ ಕುಡಿಯಲು ನೀರು ತರುತ್ತಿದ್ದರು.

2005ರಲ್ಲಿ ಇಲ್ಲಿನ ದೇವರಾಜ ನಗರದಲ್ಲಿ ಫಿಲ್ಟರ್ ಹೌಸ್ ಆರಂಭಿಸಿ ಅಲ್ಲಿಗೆ ಹಳಿಂಗಳಿಯ ಬಳಿ ಹರಿಯುವ ಕೃಷ್ಣಾನದಿಯ ನೀರನ್ನು ನಲ್ಲಿಗಳಿಂದ ಮನೆಮನೆಗೆ ಹರಿಸುವ ಮೂಲಕ ನೀರಿನ ಬವಣೆ ತಪ್ಪಿಸಲಾಯಿತು. ಆದರೆ 2019ರ ಉಂಟಾದ ಭೀಕರ ಬರಗಾಲದಲ್ಲಿ ನದಿಯಲ್ಲಿ ನೀರಿನ ಕೊರತೆಯಾಗಿ ಪಟ್ಟಣದ ಪ್ರಮುಖ ಜಾಗಗಳಲ್ಲಿ ಕೊಳವೆ ಬಾವಿ ಕೊರೆಸಲು ಆರಂಭಿಸಲಾಯಿತು. ಈಗ ಅವುಗಳ ಸಂಖ್ಯೆ 148ಕ್ಕೆರಿದೆ. ದೇವರಾಜ ನಗರ ವ್ಯಾಪ್ತಿಯು ಗುಡ್ಡದ ಪ್ರದೇಶದಲ್ಲಿದ್ದು ಇಲ್ಲಿ ಕೊರೆಸಿದ ಕೊಳವೆ ಬಾವಿಗಳು ವಿಫಲವಾಗಿದ್ದರಿಂದ ಆಗಾಗ ಇಲ್ಲಿ ನೀರಿನ ತೊಂದರೆ ಉಂಟಾಗುತ್ತದೆ.

ಕೊಳವೆ ಬಾವಿಯ ಸಂಪರ್ಕವನ್ನು ಈಗ ಮನೆ ಮನೆಗೂ ನೀಡಲಾಗಿದ್ದು, ಪುರಸಭೆಯ ನಲ್ಲಿಯ ನೀರಿನ ಕರ ತುಂಬಲು ಸಹ ಮುಂದೆ ಬರುತ್ತಿಲ್ಲ. ಹೀಗಾಗಿ ಪುರಸಭೆಯ ಪ್ರಮುಖ ಆದಾಯ ಸಂಗ್ರಹವಾಗುತ್ತಿಲ್ಲ. ಕೊಳವೆ ಬಾವಿಗಳ ನೀರು ಸ್ಥಗಿತಗೊಳಿಸಿ ನಲ್ಲಿ ನೀರು ಪೂರೈಕೆಗೆ ಆಯಾ ವಾರ್ಡ್ ಮುಖಂಡರು, ಜನಪ್ರತಿನಿಧಿಗಳು ಅಡ್ಡಿಪಡಿಸುತ್ತಿದ್ದಾರೆ. 1500ಕ್ಕೂ ಅನಧಿಕೃತ ನಲ್ಲಿಗಳ ಸಂಪರ್ಕವಿದ್ದು ಆದಾಯಕ್ಕೆ ಮತ್ತೊಂದು ಬರೆ ಎಳೆದಂತಾಗಿದೆ.

ಇನ್ನೂ ಶೇ 90ರಷ್ಟು ಜನತೆ ಪುರಸಭೆ ಸರಬರಾಜು ಮಾಡುವ ನೀರನ್ನು ಕುಡಿಯಲು ಬಳಸುವುದಿಲ್ಲ. ಬದಲಾಗಿ ಶುದ್ಧ ಕುಡಿಯುವ ನೀರಿನ ಘಟಕಗಳಿಂದ ನೀರನ್ನು ಬಳಸುತ್ತಾರೆ. ಇದಕ್ಕಾಗಿ ಪುರಸಭೆಯ ಮೂರು ನೀರಿನ ಘಟಕಗಳು ಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಒಂದು ಘಟಕ ದುರಸ್ತಿಗೊಳಿಸಬೇಕಿದೆ.

ಜನರೂ ನಲ್ಲಿಗೆ ಬಂದ ನೀರನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ. ತಮಗೆ ಅವಶ್ಯವಿರುವಷ್ಟನ್ನು ಸಂಗ್ರಹಿಸಿದ ನಂತರ ನಲ್ಲಿ ಬಂದ್ ಮಾಡದೆ ಚರಂಡಿಗೆ, ಶೌಚಾಲಯಕ್ಕೆ ಹರಿಸಿರುವುದರಿಂದ ಸಾಕಷ್ಟು ನೀರು ವ್ಯರ್ಥ ಮಾಡುತ್ತಿದ್ದಾರೆ ಎನ್ನುತ್ತಾರೆ ಸ್ಥಳೀಯ ಸುರೇಶ ಕೊಟಬಾಗಿ, ತಾಲ್ಲೂಕಿನ ಗೋಲಬಾವಿಯ ಗ್ರಾಮ ಪಂಚಾಯಿತಿಯ ಶುದ್ಧ ಕುಡಿಯುವ ನೀರಿನ ಘಟಕ ಬಂದ್ ಆಗಿ ಬಹಳ ವರ್ಷಗಳೇ ಕಳೆದಿದ್ದು, ಅದರ ಕಟ್ಟಡ ಖಾಸಗಿಯಾಗಿ ಬಳಕೆಯಾಗುತ್ತಿದೆ. ಪಟ್ಟಣದ ಅನೇಕರು ಈಗಲೂ ಸಸಾಲಟ್ಟಿಯ ಕೊಳವೆ ಬಾವಿಗಳಿಂದ ಕುಡಿಯಲು ನೀರು ತರುವುದು ಸಾಮಾನ್ಯವಾಗಿದೆ.

ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹುಣಸೆ ಗಿಡದ ಬಳಿಯ ಕೈಪಂಪು ಸುಮಾರು ವರ್ಷಗಳಿಂದ ಜನರ ದಾಹ ತಣಿಸಿದ್ದು ಅದಕ್ಕೆ ಸೂಕ್ತ ವ್ಯವಸ್ಥೆಯನ್ನು ಗ್ರಾಪಂ ಮಾಡಬೇಕಿದೆ.





ಉದಯವಾಹಿನಿ ಚಿತ್ರ

**ಕೃಷ್ಣಾ ನದಿಯಿಂದ ಸಮರ್ಪಕ ನೀರು**

**ಸರಬರಾಜಿನಲ್ಲಿ ವ್ಯತ್ಯಯ**

ನಲ್ಲಿಗಳ ಮೂಲಕ ನೀರು ಪೂರೈಕೆ ಮಾಡಲು 20 ವರ್ಷಗಳ ಹಿಂದೆ ಅಳವಡಿಸಲಾದ ಪೈಪ್‌ಲೈನ್ ಹಳೆಯದಾಗಿದ್ದು, ಆಗಾಗ ಅಲ್ಲಲ್ಲಿ ಒಡೆದು ನೀರು ಸರಬರಾಜಿನಲ್ಲಿ ವ್ಯತ್ಯಯವಾಗುತ್ತದೆ. ಸದ್ಯ ಪಟ್ಟಣದ ಜನಸಂಖ್ಯೆಗೆ ಅನುಗುಣವಾಗಿ ನಿತ್ಯ 30 ಲಕ್ಷ ಲೀಟರ್ ನೀರಿನ ಬೇಡಿಕೆಯಿದೆ. ಆದರೆ ಪ್ರತಿ ಮೂರು ದಿನಕ್ಕೊಮ್ಮೆ ನೀರು ಸರಬರಾಜು ಮಾಡಲಾಗುತ್ತಿದೆ ಎನ್ನುತ್ತಾರೆ ಪುರಸಭೆ ನೀರು ಸರಬರಾಜು ವಿಭಾಗದ ಪ್ರತಾಪ ಕೊಡಗೆ.

> ನೀರು ಸಮರ್ಪಕವಾಗಿ ಬಳಸಿ ಸಹಕರಿಸಿ ಪುರಸಭೆ ಸರಬರಾಜು ಮಾಡುವ ನೀರನ್ನು ಸಾರ್ವಜನಿಕರು ಸಮರ್ಪಕವಾಗಿ ಬಳಸಿಕೊಳ್ಳಬೇಕು. ಸಮಯಕ್ಕೆ ಸರಿಯಾಗಿ ನೀರಿನ ಕರ ಪಾವತಿಸಬೇಕು. ಅಧಿಕೃತ ನಲ್ಲಿ ಸಂಪರ್ಕ ಪಡೆದು ನೀರು ಪಡೆಯುವ ಮೂಲಕ ಪಟ್ಟಣದ ಅಭಿವೃದ್ಧಿಗೆ ಸಹಕರಿಸಬೇಕು. ನೀರು ಸರಬರಾಜಿಗಾಗಿ ಸಿಬ್ಬಂದಿ ನಿರಂತರ ಕಾರ್ಯನಿರ್ವಹಿಸುತ್ತಿದ್ದಾರೆ
> –ಮಲ್ಲಿಕಾರ್ಜುನ ಬಿರಾದಾರ ಪಾಟೀಲ್
> ಪುರಸಭೆ ಕಚೇರಿ ವ್ಯವಸ್ಥಾಪಕ

## ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಪ್ರತಿ ಮನೆಯ ಮಾತಾಗಬೇಕು

• ಉದಯವಾಹಿನಿ ಚಿತ್ರದುರ್ಗ

ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಲ್ಲಿ ಪಾಲ್ಗೊಂಡ ಗರ್ಭಿಣಿಯರು ಕಬ್ಬಿಣಾಂಶದ ಕೊರತೆ ನೀಗಿಸಿಕೊಂಡು ಸುರಕ್ಷಿತ ತಾಯ್ತತನ ಪಡೆಯಿರಿ. ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನ ಪ್ರತಿ ಮನೆಯ ಮಾತಾಗಬೇಕು ಎಂದು ಚಿತ್ರದುರ್ಗ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್ ಹೇಳಿದರು. ಚಿತ್ರದುರ್ಗ ತಾಲ್ಲೂಕಿನ ಗೊಡಬನಹಾಳ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗುರುವಾ ಇ-ಪಿ.ಎಮ್. ಎಸ್.ಎ. ಕಾರ್ಯಕ್ರಮದಡಿಯಲ್ಲಿ ಎಲ್ಲಾ ವರ್ಗದ ತೊಡಕಿನ ಗರ್ಭಿಣಿ ಮಹಿಳೆಯರಿಗೆ ವಿಶೇಷ ಸುರಕ್ಷಿತ ಮಾತೃತ್ವ ಅಭಿಯಾನದಡಿ ಆರೋಗ್ಯ ತಪಾಸಣಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕ್ಷೇತ್ರ ಮಟ್ಟದಲ್ಲಿ ಗರ್ಭಿಣಿ ಆರೈಕೆಯಲ್ಲಿ ಕಬ್ಬಿಣಾಂಶದ ಕೊರತೆಯಿಂದ ಹಿಮೋಗ್ಲೋಬಿನ್ ಪ್ರಮಾಣ ಕಡಿಮೆಯಾಗಿ ರಕ್ತ ಹೀನತೆ ಉಂಟಾಗುತ್ತದೆ.

ಹಿಮೋಗ್ಲೋಬಿನ್ 7 ಗ್ರಾಮ್‌ಗಿಂತ ಕಡಿಮೆ ಇರುವ ಗರ್ಭಿಣಿಯರಿಗೆ ರಕ್ತವನ್ನು ನೀಡಲಾಗುತ್ತದೆ. 7 ಗ್ರಾಮ್ ಮೇಲೆ 10 ಗ್ರಾಮ್ ಹಿಮೋಗ್ಲೋಬಿನ್ ಪ್ರಮಾಣವಿರುವ ಗರ್ಭಿಣಿಯರಿಗೆ ಕನಿಷ್ಠ 10 ಡೋಸ್ ಐರನ್ ಸುಕ್ರೋಸ್ ಇಂಜೆಕ್ಷನ್ ಮೂಲಕ ಕಬ್ಬಿಣದ ಕೊರತೆ ನೀಗಿಸಿ ಹಿಮೋಗ್ಲೋಬಿನ್ ಪ್ರಮಾಣ ಹೆಚ್ಚಿಸಲಾಗುತ್ತದೆ. ಸಾಮಾನ್ಯ ಗರ್ಭಿಣಿಯರಿಗೆ ಕಬ್ಬಿಣಾಂಶ ಮತ್ತು ಫೋಲಿಕ್ ಆಮ್ಲದ ಮಾತ್ರೆಗಳ ಪೂರೈಕೆ ಮಾಡಿ ಕನಿಷ್ಠ 12 ಗ್ರಾಮ್ ನಷ್ಟು ಹಿಮೋಗ್ಲೋಬಿನ್ ಇರುವಂತೆ ನಿರ್ವಹಣೆ ಮಾಡಲಾಗುತ್ತದೆ ಎಂದು ಹೇಳಿದರು.

ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಎನ್.ಎಸ್. ಮಂಜನಾಥ, ಗರ್ಭಿಣಿ ಆರೈಕೆ, ಬಾಣಂತಿ ಆರೈಕೆ, ಮಕ್ಕಳ ಆರೈಕೆಯಲ್ಲಿ ಸೇವಿಸಬೇಕಾದ ಪೌಷ್ಠಿಕ ಆಹಾರದ ಮತ್ತು ಮಕ್ಕಳ ಲಸಿಕಾ ವೇಳಾ ಪಟ್ಟಿಯ ಬಗ್ಗೆ, ಎದೆ ಹಾಲಿನ ಮಹತ್ವದ ಬಗ್ಗೆ ತಿಳಿಸಿದರು.

ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ, ಸುಖಿ ಕುಟುಂಬದ ಆದರ್ಶ ಪಾಲಿಸಲು ಇಲಾಖೆಯಲ್ಲಿರುವ ಕುಟುಂಬ ಯೋಜನೆಗಳ ಸೇವಾ ಮಾಹಿತಿ ತಿಳಿಸಿದರು. ಇದೇ ಸಂದರ್ಭದಲ್ಲಿ 16 ಗರ್ಭಿಣಿಯರ ತಪಾಸಣೆ ಚಿಕಿತ್ಸೆ ನೀಡಲಾಯಿತು. ಕಾರ್ಯಕ್ರಮದಲ್ಲಿ ಆರೋಗ್ಯ ನಿರೀಕ್ಷಣಾಧಿಕಾರಿ ಮಧು, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ತಾಲ್ಲೂಕು ಆಶಾ ಭೋಧಕಿ ತಬಿತಾ, ಆರೋಗ್ಯ ನಿರೀಕ್ಷಣಾಧಿಕಾರಿ ಪ್ರವೀಣ್ ಇದ್ದರು.



ಉದಯವಾಹಿನಿ ಚಿತ್ರ

> ಗರ್ಭಿಣಿಯರು ಮುಟ್ಟುನಿಂತ ಕೂಡಲೇ ಆಶಾ ಕಾರ್ಯಕರ್ತೆಯರಿಗೆ ಮಾಹಿತಿ ಒದಗಿಸಿ, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳಿಂದ ಗರ್ಭಧಾರಣೆ ಪರೀಕ್ಷೆ ನಡೆಸಿ ಗರ್ಭಧಾರಣೆಯ ಖಚಿತತೆ ಪಡೆದು ತಾಯಿ ಕಾರ್ಡ್ ಪಡೆದು ಪ್ರತಿ ತಿಂಗಳು 9ನೇ ತಾರೀಕು ಎಲ್ಲಾ ಸರ್ಕಾರಿ ಆಸ್ಪತ್ರೆಯಲ್ಲಿ ಜರುಗುವ ಪ್ರಧಾನಮಂತ್ರಿ ಸುರಕ್ಷಿತ ಮಾತೃತ್ವ ಅಭಿಯಾನದಲ್ಲಿ ತಪಾಸಣೆ ಮಾಡಿಸಿಕೊಳ್ಳಿ ಸುರಕ್ಷಿತ ತಾಯ್ತನ ಪಡೆಯಿರಿ ಎಂದು ಸಲಹೆ ನೀಡಿದ ಅವರು, ತಾಯಿ ಮರಣ ಶಿಶು ಮರಣ ನಿಯಂತ್ರಣ ಮಾಡಲು ಸಹಕರಿಸಿ
> –ಡಾ. ಜಿ.ಅನುಷಾ,
> ಗೊಡಬನಾಳ್ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ

## ಸಂಯುಕ್ತ ಗೊಬ್ಬರಗಳ ಬಳಕೆ ಮಾಡಿ: ನಾಗರಾಜ

• ಉದಯವಾಹಿನಿ ವಡಗೇರಾ

ಮುಂಗಾರು ಹಂಗಾಮ ಪ್ರಾರಂಭದ ಹಿನ್ನೆಲೆಯಲ್ಲಿ ತಾಲ್ಲೂಕಿನ ಹೈಯ್ಯಾಳ ಬಿ .ಕೃಷಿ ಕೇಂದ್ರದ ವತಿಯಿಂದ ರೈತರಿಗೆ ಕೃಷಿ ಚಟುವಟಿಕೆಗಳ ಜಾಗೃತಿ ಆಂದೋಲನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೈಯ್ಯಾಳ ಬಿ. ಕೃಷಿ ಅಧಿಕಾರಿ ನಾಗರಾಜ ಹೇಳಿದರು.

ತಾಲ್ಲೂಕಿನ ಕಾಡಂಗೇರಾ, ಹುಂಡೆಕಲ, ಗುಂಡಗುರ್ತಿ ಹಾಗೂ ಇನ್ನಿತರ ಗ್ರಾಮಗಳಿಗೆ ಭೇಟಿ ನೀಡಿ ರೈತರ ಜೊತೆ ಮಾತನಾಡಿದ ಅವರು ರೈತರು ಸಂಯುಕ್ತ ರಸ ಗೊಬ್ಬರಗಳ ಬಳಕೆಗೆ ಹೆಚ್ಚಿನ ಆದ್ಯತೆ ನೀಡಬೇಕು ಉತ್ತಮ ಗುಣಮಟ್ಟದ ಬೀಜ ರಸ ಗೊಬ್ಬರ ಬಳಕೆ ಮಾಡುವುದರ ಜೊತೆಗೆ ಅಧಿಕೃತ ಮಾರಾಟಗಾರರಿಂದ ಬೀಜ ರಸಗೊಬ್ಬರಗಳನ್ನು ಖರೀದಿಸಬೇಕು ಮುಂಗಾರು ಹಂಗಾಮಿಗೆ ತೊಗರಿ ಹಾಗೂ ಹೆಸರು ಬೀಜಗಳಿಗೆ ಬೀಜೋಪಚಾರ ಮಾಡುವ ಪದ್ಧತಿಯನ್ನು ಈ ಸಮಯದಲ್ಲಿ ತೋರಿಸಿಕೊಡಲಾಯಿತು.

ಹೊಲಗದ್ದೆಗಳಲ್ಲಿನ ಭತ್ತದ ಹುಲ್ಲು ಹಾಗೂ ಹತ್ತಿಯ ಕಟ್ಟಿಗೆಗಳನ್ನು ಸುಡುವದರಿಂದ ಭೂಮಿಯ ಫಲವತ್ತತೆ ಹಾಳಾಗುವುದರ ಜೊತೆಗೆ ಪರಿಸರಕ್ಕೆ ಹಾನಿಯಾಗುತ್ತದೆ ಆದ್ದರಿಂದ ರೈತರು ಭತ್ತದ ಹುಲ್ಲು ಹಾಗೂ ಇನ್ನಿತರ ಬೆಳೆಗಳ ಕಳೆಯನ್ನು ಸುಡದಂತೆ ಕೃಷಿ ಅಧಿಕಾರಿ ನಾಗರಾಜ ರೈತರಲ್ಲಿ ಕೋರಿದರು. ಈ ಸಂದರ್ಭದಲ್ಲಿ ರೈತರು ಹಾಗೂ ಇನ್ನಿತರರು ಉಪಸ್ಥಿತರಿದ್ದರು.



ಉದಯವಾಹಿನಿ ಚಿತ್ರ

> ಬೀಜೋಪಚಾರ ಮಾಡುವುದರಿಂದ ಮಣ್ಣಿನಿಂದ ಹರಡುವ ರೋಗಗಳನ್ನು ತಡೆಗಟ್ಟಬಹುದು ಬೆಳೆಗಳಲ್ಲಿ ರೋಗನಿರೋಧಕ ಶಕ್ತಿಗಳನ್ನು ಹೆಚ್ಚು ಮಾಡಲಿದೆ ರಸ ಗೊಬ್ಬರಗಳನ್ನು ಸಮರ್ಪಕವಾಗಿ ಬಳಕೆ ಮಾಡಬೇಕು ನ್ಯಾನೊ ಯೂರಿಯಾ,ಡಿಎಪಿ ಬಳಕೆಗಳ ಬಗ್ಗೆ ಮಾಹಿತಿ ನೀಡಿದರು. ನನ್ನ ಬೆಳೆ ನನ್ನ ಸಮೀಕ್ಷೆ ನನ್ನ ಹಕ್ಕು ಅಡಿಯಲ್ಲಿ ರೈತರು ತಾವು ಬೆಳೆದ ಬೆಳೆಗಳ ಸಮೀಕ್ಷೆಯನ್ನು ತಾವೇ ಖುದ್ದಾಗಿ ಮಾಡಿಕೊಳ್ಳಬಹುದು –ನಾಗರಾಜ

## ಸರ್ಕಾರಿ ಶಾಲೆಗಳು ಬಡವರ ಮಕ್ಕಳಿಗೆ ದಾರಿದೀಪ

• ಉದಯವಾಹಿನಿ ಹಗರಿಬೊಮ್ಮನಹಳ್ಳಿ

ಸರ್ಕಾರಿ ಶಾಲೆಗಳು ಬಡವರ ಮಕ್ಕಳ ಪಾಲಿಗೆ ದಾರಿದೀಪ ಎಂದು ಇಲ್ಲಿಯ ಪುರಸಭೆ ಅಧ್ಯಕ್ಷ ಮರಿರಾಮಪ್ಪ ಅಭಿಮತ ವ್ಯಕ್ತಪಡಿಸಿದರು.

ಪಟ್ಟಣದ ಗಂಗಾವತಿ ಭೀಮಪ್ಪನವರ ಸರ್ಕಾರಿ ಪ್ರೌಢಶಾಲಾ ಆವರಣದಲ್ಲಿ ಹಮ್ಮಿಕೊಂಡಿದ್ದ ನಮ್ಮ ಶಾಲೆ ನಮ್ಮ ಜವಬ್ದಾರಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲೂ ವಿಶೇಷ ತರಗತಿಗಳು ನಡೆದರೆ ನಮ್ಮ ಪುರಸಭೆಯಿಂದ ಏನು ಸೌಲಭ್ಯ ನೀಡಲಾಗುತ್ತೋ ಅದನ್ನು ನಾವು ವಹಿಸಿಕೊಳ್ಳುತ್ತೇವೆ. ಈಗಾಗಲೇ ಪಟ್ಟಣದ ರಾಮನಗರದ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡುತಿದ್ದೇವೆ. ಮುಂದೆ ಈ ವ್ಯಾಪ್ತಿಯ ಎಲ್ಲಾ ಶಾಲೆಗಳತ್ತ ಗಮನ ಹರಿಸುತ್ತೇವೆ ಎಂದರು. ಮಕ್ಕಳನ್ನು ಪ್ರೀತಿಯಿಂದ ಕಾಣಬೇಕು ಅದು ಕಲಿಕೆಗೆ ಪೂರಕ ಎಂದು ಶಿಕ್ಷಕರಿಗೆ ಕಿವಿಮಾತು ಹೇಳಿದರು. ಬಿಇಒ ಮೈಲೇಶ್ ಬೇವೂರ್ ಮಾತನಾಡಿ, ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ಉಚಿತ ಗುಣಾತ್ಮಕ ಖಚಿತ, ಇದಕ್ಕೆ ಸರ್ಕಾರಿ ಪ್ರಮುಖ ಹುದ್ದೆಗಳಲ್ಲಿರುವವರು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆದವರು. ಇಲ್ಲಿ ಶಿಕ್ಷಣದೊಂದಿಗೆ ಜೀವನ ನಿರ್ವಹಣೆಯನ್ನು ಕೂಡ ಕಲಿಸುತ್ತೆ ಅಂತಹ ಶಕ್ತಿ ಸರ್ಕಾರಿ ಶಾಲೆಯಲ್ಲಿದೆ ನಿಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸಿ ಉತ್ತಮ ಭವಿಷ್ಯ ನಿರೀಕ್ಷಿಸಿ ಎಂದರು.

ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ಹುಲುಗಪ್ಪ, ಉಪಾಧ್ಯಕ್ಷೆ ಪ್ರಿಯಾಂಕ, ಮಜ್ಗಿ ವೀರೇಶ, ಶಾಬುದ್ದೀನ್, ಪ್ರಮುಖರಾದ ಸೆರೆಗಾರ ಹುಚ್ಚಪ್ಪ, ಉಪ್ಪಾರ ಹನುಮಂತ, ಎಲ್ಲಾ ಸಿಆರ್‌ಪಿ ಅಧಿಕಾರಿಗಳಿದ್ದರು.



ಉದಯವಾಹಿನಿ ಚಿತ್ರ

## ಯಾವುದೇ ಕಾರಣಕ್ಕೂ ಕೃಷಿ ಭೂಮಿ ಕೆಐಡಿಬಿಗೆ ಬಿಟ್ಟುಕೊಡುವುದಿಲ್ಲ

• ಉದಯವಾಹಿನಿ ವಿಜಯಪುರ

ಸಮೀಪದ ತಿಡಗುಂದಿ ವ್ಯಾಪ್ತಿಯಲ್ಲಿ ಕರ್ನಾಟಕ ಮಹಾರಾಷ್ಟ್ರ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ 52ಕ್ಕೆ ಹೊಂದಿಕೊಂಡ 1203 ಎಕರೆ ರೈತರ ಕೃಷಿ ಭೂಮಿಯಲ್ಲಿ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ರಾಜ್ಯ ಸರ್ಕಾರ ಇಂಡಸ್ಟ್ರಿಯಲ್ ಹಬ್ ನಿರ್ಮಾಣಕ್ಕೆ ಭೂಮಿಗಳ ಸರ್ವೇ ಮಾಡಲು ಅಧಿಕಾರಿಗಳು ಬರುತ್ತಿದ್ದಾರೆ ಎಂದು ತಿಳಿದ 230 ಕ್ಕೂ ಅಧಿಕ ರೈತರು ಕಪ್ಪು ಬಟ್ಟೆ ಧರಿಸಿ ಯಾವುದೇ ಕಾರಣಕ್ಕೂ ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕೆಗಾಗಿ ಬಿಟ್ಟುಕೊಡುವುದಿಲ್ಲ ಎಂದು ಅಧಿಕಾರಿಗಳನ್ನು ಮರಳಿ ಕಳುಹಿಸಿದ ಪ್ರಸಂಗ ನಡೆದಿದೆ. ಅನೇಕ ಪದವೀಧರರು ಬೇರೆ ಕಡೆಗೆ ನೌಕರಿ ಮಾಡುವುದನ್ನು ಬಿಟ್ಟು ಕೃಷಿ ಮಾಡಲು ಸ್ವಗ್ರಾಮಕ್ಕೆ ಆಗಮಿಸಿರುವವರು ಇದ್ದಾರೆ. ಇದೇ ಕೈಗಾರಿಕಾ ಸಚಿವರು ನೀರಾವರಿ ಸಚಿವರಾಗಿದ್ದಾಗ ನಮ್ಮ ಭೂಮಿಗಳಿಗೆ ನೀರು ಮಾಡಿಕೊಟ್ಟಿದ್ದರು. ಅವರಿಗೆ ಇಡೀ ಸಂಪೂರ್ಣ ಗ್ರಾಮಸ್ತರೇ ಧನ್ಯವಾದ ತಿಳಿಸಿ ಸನ್ಮಾನಿಸಿದ್ದರು. ಆದರೆ ಈಗ ಅದೇ ನೀರನ್ನು ಎಲ್ಲಾ ರೈತರಿಗೂ ಬಿಟ್ಟು ಕೈಗಾರಿಕೆ ಮಾಡಲು ಹೊರಟ್ಟಿದ್ದಾರೆ. ರೈತರಿಗಿಂತ ಇವರಿಗೆ ಕೈಗಾರಿಕೆಯೇ ಮುಖ್ಯವಾಯಿತೇ? ಎಂದು ರೈತರು ಕೇಳುತ್ತಿದ್ದಾರೆ. ಫಲವತ್ತಾದ ಕೃಷಿ ಭೂಮಿಯಲ್ಲಿ ಕೈಗಾರಿಕೆ ಮಾಡಿದರೆ ಕುಟುಂಬ ಸಮೇತ ಗುಳೆ ಹೋಗಬೇಕಾಗುತ್ತದೆ ಎಂದು ಹಿರಿಯ ರೈತರಾದ ಈಶ್ವರಪ್ಪ ಬೆಳ್ಳುಂಡಗಿ ತೀವ್ರ ಅಸಮಾಧಾನವನ್ನು ಹೊರಹಾಕಿದರು. ಈ ಯೋಜನೆಯನ್ನು ಕೂಡಲೇ ಕೈಬಿಡಬೇಕು. ಇಲ್ಲದಿದ್ದರೆ ಮುಂದಿನ ಹೋರಾಟ ಉಗ್ರಸ್ವರೂಪ ತಾಳಿ ಮುಂದೆ ಆಗುವ ಎಲ್ಲದಕ್ಕೂ ಜಿಲ್ಲಾ ಉಸ್ತುವಾರಿ ಸಚಿವರೆ ನೇರ ಹೊಣೆಗಾರರಾಗುತ್ತಾರೆ ಎಂದು ಮಡಿವಾಳಪ್ಪ ತಿಲ್ಲಿಹಾಳ ಅವರು ಎಚ್ಚರಿಸಿದರು.



ಉದಯವಾಹಿನಿ ಚಿತ್ರ

> ಈಗಾಗಲೇ 230 ರೈತರ ಆಕ್ಷೇಪಣಾ ಪತ್ರವನ್ನು ರಾಜ್ಯ ಸರ್ಕಾರಕ್ಕೆ, ಬೃಹತ್ ಕೈಗಾರಿಕಾ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ. ಪಾಟೀಲರಿಗೆ ಹಾಗೂ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಸಲ್ಲಿಸಿ ಯಾವ ರೈತರು ಭೂಮಿಯನ್ನು ಬಿಟ್ಟಕೊಡುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿಸಲಾಗಿದೆ, ಆದರೂ ಕೂಡಾ ಸರ್ವೇ ಮಾಡಲು ಆಗಮಿಸುತ್ತಿರುವುದು ರೈತವಿರೋಧಿ ನೀತಿಯನ್ನು ಎತ್ತಿ ತೋರಿಸುತ್ತಿದೆ. ಜೀವ ಹೋದರೂ ಈ ಭೂಮಿ ಬಿಟ್ಟುಕೊಡುವ ಮಾತೆ ಇಲ್ಲ
> –ಗಿರೀಶ ತಾಳಿಕೋಟಿ, ಮುಖಂಡ

## ಅರೆಕಾಲಿಕ ಮಳೆಯಿಂದ ರಸ್ತೆ ಬೀದಿಗಳು ಅಸ್ವಚ್ಚತೆ

• ಉದಯವಾಹಿನಿ ಕಮಲನಗರ

ಸಂಗಮ, ಖೇಡ ,ಸಾವಳಿ, ಹೊಳೆಸಮುದ್ರ,ಕಳಗಾಪುರ, ಕೊಟಗ್ಯಾಳ, ಬಾಲೂರ, ಸೋನಾಳ, ಚಾಂಡೇಶ್ವರ, ಮದನೂರ, ಖತಗಾಂವ, ಡೋಣಗಾಂವ (ಎಂ), ಮುರ್ಕಿ, ಹಾಗೂ ಕಮಲನಗರ ಮತ್ತು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಸಂಜೆ 6ಗಂಟೆಯಿಂದ ರಾತ್ರಿ ಪೂರ್ಣ ಭಾರಿ ಮಳೆ ಸುರಿಯಿತು.ರಸ್ತೆ ಮೇಲೆ ಚರಂಡಿ ನೀರು ಹರಿಯುವ ದೃಶ್ಯ ಕಂಡು ಬಂತು.

ಸ್ವಚ್ಚತೆಗೆ ಮೊದಲು ಆದ್ಯತೆ ನೀಡದೆ ಪ್ರತಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸರಿಯಾಗಿ ಸಮಯಕ್ಕೆ ಕಸ ವಿಲೇಮಾರಿ ಮಾಡದ ಕಾರಣ ಪ್ರಮುಖ ರಸ್ತೆಗಳು ಸೇರಿದಂತೆ ವಿವಿಧ ಬಡಾವಣೆ ಗಳ ಚರಂಡಿಗಳಲ್ಲಿ ಕಸಸಂಗ್ರಹ ವಾಗಿದ್ದು ರಸ್ತೆ ಬೀದಿಗಳ ಮೇಲೆ ಹರಿವ ನೀರು ಕಣ್ಣಿಗೆ ಕಾಣಿತು.

ಇದರಿಂದ ಜನ ಮೂಗು ಮುಚ್ಚಿ ಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದಲ್ಲದೆ ರೋಗಕ್ಕೆ ಬಲಿ ಯಾಗುವ ಪರಿಸ್ಥಿತಿ ನಿರ್ಮಾಣವಾಗಿದೆ ಇಂತಹ ದುರ್ವಾಸನೆಯಿಂದ ಜನರು ರೋಗಕ್ಕೆ ಬಲಿಯಾಗುತ್ತಿದ್ದಾರೆ.

ಗ್ರಾಮೀಣ ಭಾಗದ ಹಳ್ಳಿಯು ಪ್ರಗತಿಯಾಗುವ ಗಾಂಧೀಜಿಯವರ ಕಂಡ ಕನಸು ನನಸಾಗಬಹುದೇ ವಿದ್ಯಾವಂತರಲ್ಲಿ ಮೂಡುತ್ತಿರುವ ಪ್ರಶ್ನೆ ಹುಟ್ಟಿಕೊಂಡಿದ್ದು ಈ ಸಾಕ್ಷಿಗೆ ಪ್ರತಿಯೊಂದು ಗ್ರಾಮ ಪಂಚಾಯತ್ ಉತ್ತರಿಸಬೇಕಾಗಿದೆ.



ಉದಯವಾಹಿನಿ ಚಿತ್ರ

**ರೋಗಕ್ಕೆ ಬಲಿ ಯಾಗುವ ಪರಿಸ್ಥಿತಿ**

## ಅಕ್ರಮ ಗಾಂಜಾ ಮಾರಾಟ: ಆರೋಪಿಯ ಬಂಧನ


• ಉದಯವಾಹಿನಿ ಉಡುಪಿ

ಅಕ್ರಮ ಗಾಂಜಾ ಸಾಗಾಟ ಮತ್ತು ಮಾರಾಟ ಮಾಡುತ್ತಿದ್ದ ಓರ್ವ ಆರೋಪಿಯನ್ನು ಉಡುಪಿ ಸೆನ್ ಪೊಲೀಸರು ಮಣಿಪಾಲ ರೈಲ್ವೆ ನಿಲ್ದಾಣ ರಸ್ತೆಯಲ್ಲಿನ ಡಯಾನಾ ಟಾಕೀಸ್ ರಸ್ತೆಯ ಕ್ರಾಸ್ ಬಳಿ ಬಂಧಿಸಿ, ಸೊತ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಬಿಹಾರ ರಾಜ್ಯದ ಬ್ರಹಂದೇವ್ ಯಾದವ್(37) ಬಂಧಿತ ಆರೋಪಿ. ಈತನಿಂದ 690 ಗ್ರಾಂ ಗಾಂಜಾ, ಮೊಬೈಲ್ ಫೋನ್, ನಗದು ರೂ. 680 ಮತ್ತು ಇತರೇ ಸೊತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

ಇವುಗಳ ಒಟ್ಟು ವೌಲ್ಯ 68,680 ಎಂದು ಅಂದಾಜಿಸಲಾಗಿದೆ. ಸೆನ್ ಪೊಲೀಸ್ ಠಾಣಾ ಪೊಲೀಸ್ ಉಪಾಧೀಕ್ಷಕ ಎ.ಸಿ ಲೋಕೇಶ್ ಮತ್ತು ಪೊಲೀಸ್ ನಿರೀಕ್ಷಕ ರಾಮಚಂದ್ರ ನಾಯಕ್, ಎ.ಎಸ್.ಐ. ಉಮೇಶ್, ಸಿಬ್ಬಂದಿ ಪ್ರವೀಣ್ ಕುಮಾರ್, ಪ್ರವೀಣ್, ರಾಜೇಶ್, ರಾಘವೇಂದ್ರ, ವೆಂಕಟೇಶ್, ಸಂತೋಷ, ಧರ್ಮಪ್ಪ, ಅರುಣ್ ಕುಮಾರ್, ದಿಕ್ಷೀತ್, ಪವನ್, ನಿಲೇಶ್, ಪರಶುರಾಮ್, ಮುತ್ತಪ್ಪ, ಮಾಯ್ಯಪ್ಪ ಮತ್ತು ಚರಣ್ ರವರ ತಂಡ ಈ ಕಾರ್ಯಾಚರಣೆ ನಡೆಸಿದೆ.

● 21 ದಿನಗಳ ಒಳಗಾಗಿ ಕಡ್ಡಾಯವಾಗಿ ಸೂಕ್ತ ಪ್ರಾಧಿಕಾರದ ಮುಂದೆ ಪ್ರತಿಯೊಬ್ಬರೂ ನೋಂದಾಯಿಸಬೇಕು

# ಜನನ, ಮರಣ ಕಡ್ಡಾಯ ನೋಂದಾಯಿಸಿ: ಜಿಲ್ಲಾಧಿಕಾರಿ ಡಾ. ವಿದ್ಯಾಕುಮಾರಿ



ಉದಯವಾಹಿನಿ ಚಿತ್ರ

• ಉದಯವಾಹಿನಿ ಉಡುಪಿ

ಜಿಲ್ಲೆಯಲ್ಲಿ ಘಟಿಸುವ ಪ್ರತಿಯೊಂದು ಜನನ, ಮರಣ ಹಾಗೂ ನಿರ್ಜೀವ ಜನನಗಳನ್ನು 21 ದಿನಗಳ ಒಳಗಾಗಿ ಕಡ್ಡಾಯವಾಗಿ ಸೂಕ್ತ ಪ್ರಾಧಿಕಾರದ ಮುಂದೆ ಪ್ರತಿಯೊಬ್ಬರೂ ನೋಂದಾಯಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಕೆ ವಿದ್ಯಾಕುಮಾರಿ ಹೇಳಿದ್ದಾರೆ.

ಅವರು ರಜತಾದ್ರಿಯ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಮಟ್ಟದ ಜನನ-ಮರಣ ಸಮನ್ವಯ ಸಮಿತಿಯ ತ್ರೈಮಾಸಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಜಿಲ್ಲೆಯಲ್ಲಿ ಆಗುವ ಪ್ರತಿಶತಃ ಜನನ, ಮರಣ ಮತ್ತು ನಿರ್ಜೀವ ಜನನಗಳ ಘಟನೆಗಳನ್ನು ವಿಳಂಬವಿಲ್ಲದೇ ನೋಂದಣಿ ಮಾಡುವುದು ಪ್ರತಿಯೊಬ್ಬ ನಾಗರಿಕರ ಕರ್ತವ್ಯವಾಗಿದೆ. ಜನನ ಮತ್ತು ಮರಣ ನೋಂದಣಿಯು ಭವಿಷ್ಯದ ಕೆಲಸ ಕಾರ್ಯಗಳಿಗೆ ಇವುಗಳ ಪ್ರಮಾಣಪತ್ರವು ಅವಶ್ಯವಿರುತ್ತದೆ. ಇದನ್ನು ಮನಗಂಡು ನೋಂದಣಿಯನ್ನು ಕಡ್ಡಾಯವಾಗಿ ಮಾಡಿಸಬೇಕು ಎಂದರು.

ಜನನ, ಮರಣ ಹಾಗೂ ನಿರ್ಜೀವ ಜನನಗಳ ನೋಂದಣಿಯು 21 ದಿನಗಳ ಒಳಗಾಗಿ ಯಾವುದೇ ಶುಲ್ಕವಿಲ್ಲದೇ ನೋಂದಾಯಿಸಲು ಅವಕಾಶವಿದೆ. ಘಟನೆ ಸಂಭವಿಸಿ 21 ರಿಂದ 30 ದಿನಗಳ ವರೆಗೆ 20 ರೂ.ಗಳು, ಘಟನೆ ಸಂಭವಿಸಿದ 30 ದಿನಗಳ ನಂತರ ಒಂದು ವರ್ಷದ ವರೆಗೆ 50 ರೂ. ಶುಲ್ಕ ಪಾವತಿಸಿ, ಘಟನೆ ಸಂಭವಿಸಿದ 1 ವರ್ಷದ ನಂತರ ನ್ಯಾಯಾಲಯದ ಆದೇಶದೊಂದಿಗೆ 10 ರೂ.ಗಳ ಶುಲ್ಕ ಪಾವತಿಸಿ, ನೋಂದಾಯಿಸಬಹುದಾಗಿದೆ ಎಂದರು.ಯಾವುದೇ ಮಗುವಿನ ಜನನವನ್ನು ಹೆಸರಿಲ್ಲದೇ ನೋಂದಣಿ ಮಾಡಲು ಅವಕಾಶವಿದ್ದು, ಹೆಸರಿಲ್ಲದೇ ನೋಂದಾಯಿಸಿದ್ದಲ್ಲಿ ಆ ದಿನದಿಂದ 12 ತಿಂಗಳ ಒಳಗಾಗಿ ಮಗುವಿನ ಹೆಸರನ್ನು ಯಾವುದೇ ಶುಲ್ಕವಿಲ್ಲದೇ ರಿಜಿಸ್ಟರ್‌ನಲ್ಲಿ ಸೇರ್ಪಡೆಗೆ ಅವಕಾಶ ಕಲ್ಪಿಸಲಾಗಿರುತ್ತದೆ ಎಂದ ಅವರು, ಜನನ, ಮರಣ ನೋಂದಣಿ ದಾಖಲಾತಿಗಳಲ್ಲಿ ಯಾವುದೇ ಬದಲಾವಣೆ, ತಿದ್ದುಪಡಿ ಮಾಡಲು ಅವಕಾಶವಿರುವುದಿಲ್ಲ ಎಂದರು.

ವಿದೇಶದಲ್ಲಿ ಜನಿಸಿದ ಮಗುವಿನ ಜನನವನ್ನು ವಿದೇಶದಲ್ಲಿ ನೋಂದಣಿ ಮಾಡಬಹುದು. ಆದರೆ ಶಿಶುವಿನ ಪೋಷಕರು ಭಾರತೀಯ ಪೌರರಾಗಿ ನಮ್ಮ ದೇಶದಲ್ಲಿ ನೆಲೆಸುವ ಉದ್ದೇಶ ಹೊಂದಿದ್ದಲ್ಲಿ ದೇಶಕ್ಕೆ ಹಿಂದಿರುಗಿದ 60 ದಿನಗಳ ಒಳಗಾಗಿ ನೋಂದಣಿ ಮಾಡಿಸಬಹುದಾಗಿದೆ ಎಂದರು. ಕಳೆದ ಸಾಲಿನಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 1185, ನಗರ ವ್ಯಾಪ್ತಿಯಲ್ಲಿ 9976 ಒಟ್ಟು 11161 ಜನನ ಘಟನೆಗಳು ನೋಂದಾವಣೆಯಾದರೆ, ಗ್ರಾಮೀಣ ಪ್ರದೇಶದಲ್ಲಿ 7269, ನಗರ ಪ್ರದೇಶದಲ್ಲಿ 5000 ಒಟ್ಟು 12,269 ಮರಣ ಘಟನೆಗಳು ನೋಂದಾವಣೆಯಾಗಿವೆ. ಜಿಲ್ಲೆಯಲ್ಲಿ ಒಟ್ಟು 61 ನಿರ್ಜೀವ ಜನನಗಳು ನೋಂದಣಿಯಾಗಿವೆ. ಜಿಲ್ಲೆಯಲ್ಲಿ ಹೆಣ್ಣು ಮತ್ತು ಗಂಡಿನ ಅನುಪಾತವು 976 ರಷ್ಟಿದೆ ಎಂದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಅಬೀದ್ ಗದ್ಯಾಳ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಎಮ್.ವಿ ದೊಡ್ಡಮನಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ಬಸವರಾಜ ಹುಬ್ಬಳ್ಳಿ, ವಿವಿಧ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

**ಭವಿಷ್ಯದ ಕೆಲಸಗಳಿಗೆ ಅವಶ್ಯ**

> ಗ್ರಾಮೀಣ ಪ್ರದೇಶದಲ್ಲಿ 30 ದಿನಗಳವರೆಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳು, ನಗರ ವ್ಯಾಪ್ತಿಗಳಲ್ಲಿ ಪ್ರಾಥಮಿಕ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಗಳಲ್ಲಿ ಸಂಬಂಧಪಟ್ಟ ವೈದ್ಯಾಧಿಕಾರಿಗಳು, ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಆರೋಗ್ಯ ಅಧಿಕಾರಿಗಳು ಹಾಗೂ ನಗರಸಭೆ, ಪುರಸಭೆ, ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿ ಆರೋಗ್ಯ ನಿರೀಕ್ಷಕರುಗಳು ಜನನ -ಮರಣ ನೋಂದಣಾಧಿಕಾರಿಗಳಾಗಿದ್ದು, ಜಿಲ್ಲೆಯಲ್ಲಿ ಗ್ರಾಮಾಂತರ ಪ್ರದೇಶದಲ್ಲಿ 313 ಹಾಗೂ ನಗರ ಪ್ರದೇಶದಲ್ಲಿ 13 ಸೇರಿದಂತೆ ಒಟ್ಟು 326 ನೋಂದಣಿ ಘಟಕಗಳು ಇವೆ
> –ಜಿಲ್ಲಾಧಿಕಾರಿ, ಡಾ. ವಿದ್ಯಾಕುಮಾರಿ

**ಸಕಾಲದಲ್ಲಿ ಜನನ ಮರಣ ಪ್ರಮಾಣಪತ್ರ**

ಜನನ-ಮರಣ ಘಟನೆಗಳನ್ನು ಇ-ಜನ್ಮ ತಂತ್ರಾಂಶದ ಮೂಲಕ ನೋಂದಣಿ ಮಾಡುವ ಕಾರ್ಯವನ್ನು 2015 ರಿಂದಲೇ ಪ್ರಾರಂಭಿಸಲಾಗಿದೆ. ಈ ಕಾರ್ಯವನ್ನು ಯಾವುದೇ ಲೋಪವಿಲ್ಲದಂತೆ ಮಾಡಬೇಕು ಎಂದ ಅವರು, ಎಲ್ಲಾ ನೋಂದಣಿ ಘಟಕಗಳು ನಿಯಮಾನುಸಾರ ನೋಂದಣಿ ಕಾರ್ಯಗಳು ನಡೆಯುತ್ತಿರುವ ಬಗ್ಗೆ ಹಾಗೂ ಶೇಕಡ ನೂರರಷ್ಟು ನೋಂದಾವಣೆ ಮಾಡುತ್ತಿರುವ ಬಗ್ಗೆ ಕಂದಾಯ, ನಗರಾಭಿವೃದ್ಧಿ, ಸಾಂಖ್ಯಿಕ ಇಲಾಖೆಯ ಅಧಿಕಾರಿಗಳು ಆಗಿಂದಾಗ್ಗೆ ಪರಿಶೀಲನೆ ನಡೆಸಬೇಕು. ಸಕಾಲದಲ್ಲಿ ಜನನ ಮರಣ ಪ್ರಮಾಣಪತ್ರವನ್ನು ವಿತರಿಸಬೇಕು ಎಂದರು.

## ಮಿನಿ ನ್ಯೂಸ್

### ಹಾಡು ಹಗಲೇ 3.60 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು

• ಉದಯವಾಹಿನಿ ಕಲಬುರಗಿ

ಹಾಡು ಹಗಲೇ 3.60 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಜಯನಗರದಲ್ಲಿ ನಡೆದಿದೆ. ಮಧ್ಯಾಹ್ನ 1.30ರ ಸುಮಾರಿಗೆ ಮನೆಯ ಬೆಡ್‌ರೂಮಿನ್ ಟೇಬಲ್ ಮೇಲೆ ಇಟ್ಟಿದ್ದ 3.60 ಲಕ್ಷ ರೂ.ಮೌಲ್ಯದ 40 ಗ್ರಾಂ.ಬಂಗಾರದ 2 ಬಳೆಗಳನ್ನು ಕಳ್ಳರು ಕಳವು ಮಾಡಿಕೊಂಡು ಹೋಗಿದ್ದಾರೆ ಎಂದು ಸೀಮಾ ಅಭಿಷೇಕ ಬಿರಾದಾರ ಅವರು ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದಾರೆ. ತನಿಖೆ ನಡೆದಿದೆ.

### ಪ್ರಮಾಣ ವಚನ ಸ್ವೀಕಾರ

• ಉದಯವಾಹಿನಿ ಬಾಗಲಕೋಟೆ

ಭಯೋತ್ಪಾದನಾ ವಿರೋಧಿ ದಿನ ಅಂಗವಾಗಿ ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳಾದ ಜಾನಕಿ ಕೆ.ಎಂ ಅವರ ನೇತೃತ್ವದಲ್ಲಿ ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ ಪ್ರಮಾಣ ವಚನ ಬೋಧಿಸಿದರು. ಅಹಿಂಸೆ ಹಾಗೂ ಸಹನೆಗೆ ಹೆಸರಾದ ನಮ್ಮ ರಾಷ್ಟ್ರದ ಭವ್ಯ ಪರಂಪರೆಯಲ್ಲಿ ದೃಢ ವಿಶ್ವಾಸವುಳ್ಳ, ಭಾರತದ ಪ್ರಜೆಗಳಾದ ನಾವು ಎಲ್ಲಾ ಬಗೆಯ ಭಯೋತ್ಪಾದನೆ ಮತ್ತು ಹಿಂಸೆಯನ್ನು ನಮ್ಮೆಲ್ಲ ಶಕ್ತಿ ಸಾಮರ್ಥ್ಯದಿಂದ ಎದುರಿಸುತ್ತೇವೆ ಎಂದು ಪ್ರತಿಜ್ಞೆ ಮಾಡಲಾಯಿತು. ನಮ್ಮ ಸಹಬಾಂಧವರಲ್ಲಿ ಶಾಂತಿ, ಸಾಮಾಜಿಕ ಸೌಹಾರ್ದತೆ ಮತ್ತು ಪರಸ್ಪರ ಅರಿವನ್ನು ಸಾಧಿಸಲು ಹಾಗೂ ಉತ್ತೇಜಿಸಲು ಮತ್ತು ಮಾನವ ಜೀವಕ್ಕೆ ಹಾಗೂ ಮೌಲ್ಯಗಳಿಗೆ ಬೆದರಿಕೆ ಒಡ್ಡುತ್ತಿರುವ ವಿಷಕಾರಿ ಶಕ್ತಿಗಳ ವಿರುದ್ಧ ಹೋರಾಡಲು ನಾವು ಪಣ ತೊಡುವುದಾಗಿ ಪ್ರತಿಜ್ಞೆ ಬೋಧಿಸಲಾಯಿತು.

### ವಿದ್ಯುತ್ ವ್ಯತ್ಯಯ: ಗ್ರಾಮಸ್ಥರಿಂದ ಹೆಸ್ಕಾಂ ಕಚೇರಿಗೆ ಮುತ್ತಿಗೆ

• ಉದಯವಾಹಿನಿ ಕಾರವಾರ

ತಾಲ್ಲೂಕಿನ ಕಡವಾಡ ಗ್ರಾಮದಲ್ಲಿ ನಾಲ್ಕು ದಿನಗಳಿಂದ ವಿದ್ಯುತ್ ಪೂರೈಕೆಯಲ್ಲಿ ನಿರಂತರವಾಗಿ ವ್ಯತ್ಯಯ ಆಗುತ್ತಿದೆ ಎಂದು ಆರೋಪಿಸಿ ಗ್ರಾಮಸ್ಥರು ಇಲ್ಲಿನ ಹೆಸ್ಕಾಂ ಕಚೇರಿಗೆ ಶುಕ್ರವಾರ ಮುತ್ತಿಗೆ ಹಾಕಿದರು.

ಕಚೇರಿಗೆ ದೂರು ನೀಡಲು ಬಂದರೂ ಅಧಿಕಾರಿಗಳು ಲಭ್ಯವಾಗದ ಹಿನ್ನೆಲೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿ, ಹೆಸ್ಕಾಂ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು.

ಮಳೆಗಾಲದ ಆರಂಭದಲ್ಲಿಯೇ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿದ್ದರೆ, ಮಳೆಗಾಲದಲ್ಲಿ ವಿದ್ಯುತ್ ಪೂರೈಕೆ ಬಗ್ಗೆ ಜನರು ವಿಶ್ವಾಸ ಹೇಗೆ ಇಡಬೇಕು ಎಂದು ಸಿಬ್ಬಂದಿಯನ್ನು ತರಾಟೆಗೆ ಪಡೆದರು. ವಿದ್ಯುತ್ ವ್ಯತ್ಯಯದ ಕುರಿತು ದೂರು ನೀಡಲು ಕರೆ ಮಾಡಿದರೆ ಅಧಿಕಾರಿಗಳಾಗಲಿ, ಹೆಸ್ಕಾಂ ಕಚೇರಿಯಲ್ಲಾಗಲಿ ಕರೆ ಸ್ವೀಕರಿಸುವುದಿಲ್ಲ. ದುರಸ್ತಿಗೆ ಅಗತ್ಯ ಸಿಬ್ಬಂದಿಯನ್ನೂ ನೀಡುತ್ತಿಲ್ಲ. ನಾಲ್ಕು ದಿನಗಳಿಂದ ಗ್ರಾಮ ಕತ್ತಲಲ್ಲಿದೆ. ರಾತ್ರಿ ವೇಳೆಯಲ್ಲಂತೂ ವಿದ್ಯುತ್ ಪೂರೈಕೆಯನ್ನೇ ಸ್ಥಗಿತಗೊಳಿಸಲಾಗುತ್ತಿದೆ’ ಎಂದು ಕಡವಾಡ ಗ್ರಾಮ ಪಂಚಾಯಿತಿ ಅಧ್ಯಕ್ಷ ಆನಂದ ನಾಯ್ಕ ಆಕ್ರೋಶ ವ್ಯಕ್ತಪಡಿಸಿದರು.

### ಪಂಚಾಯಿತಿ ಮಳಿಗೆಗಳ ಹರಾಜು

• ಉದಯವಾಹಿನಿ ಅಲ್ಲೂರು

ಪಂಚಾಯಿತಿ ವ್ಯಾಪ್ತಿಯ 15 ವ್ಯಾಪಾರ ಮಳಿಗೆಗಳ ಬಹಿರಂಗ ಹರಾಜು ಪ್ರಕ್ರಿಯೆ ಪಂಚಾಯಿತಿ ಸಭಾಂಗಣದಲ್ಲಿ ನಡೆಯಿತು. ಮುಂಗಡವಾಗಿ ಡಿಡಿ ಸಲ್ಲಿಸಿದ ಆಸಕ್ತ ಅಭ್ಯರ್ಥಿಗಳು ಹರಾಜಿನಲ್ಲಿ ಪಾಲ್ಗೊಂಡರು.

ಪಂಚಾಯಿತಿ ಅಧ್ಯಕ್ಷೆ ಶ್ರೀದೇವಿ ಕುಮಾರಸ್ವಾಮಿ, ಉಪಾಧ್ಯಕ್ಷ ಭರತ್ ಎ.ಬಿ, ಪಂಚಾಯಿತಿ ಸದಸ್ಯರ ಸಮ್ಮುಖದಲ್ಲಿ ಹರಾಜು ನಡೆಯಿತು. ಪಂಚಾಯಿತಿಗೆ ಸೇರಿದ 15 ಮಳಿಗೆಗಳಿದ್ದು ಶುಕ್ರವಾರ ನಡೆದ ಹರಾಜಿನಲ್ಲಿ 13 ಮಳಿಗೆಗಳನ್ನು ವ್ಯಾಪಾರಿಗಳು ಖರೀದಿಸಿದರು. ಹರಾಜಿನಿಂದ ಒಟ್ಟು 10 ಲಕ್ಷ ಸಂಗ್ರಹವಾಗಿದೆ. ಮಳಿಗೆ ಪಡೆದವರು ಅನುಸರಿಸಬೇಕಾದ ಮಾರ್ಗ ಸೂಚಿಗಳು ಮತ್ತು ನಿಬಂಧನೆಗಳನ್ನು ತಿಳಿಸಲಾಗಿದ್ದು, ನಿಯಮ ಉಲ್ಲಂಘಿಸಿದರೆ ಕ್ರಮ ಕೈಗೊಳ್ಳಲಾಗುವುದು ಎಂದು ಪಿಡಿಒ ಶಂಶೂನ್ ನಹರ್ ಮಾಹಿತಿ ನೀಡಿದರು.

### ಸರ್ಕಾರಿ ಜಮೀನಲ್ಲಿ ಮಣ್ಣು ಅಕ್ರಮ ಗಣಿಗಾರಿಕೆ: ಸಾರ್ವಜನಿಕರ ಆಕ್ರೋಶ

• ಉದಯವಾಹಿನಿ ಕುಷ್ಟಗಿ

ತಾಲ್ಲೂಕಿನ ಮ್ಯಾಗಳಡೊಕ್ಕಿ ಸರ್ಕಾರಿ ಜಮೀನಿನಲ್ಲಿ ಖಾಸಗಿ ವಿದ್ಯುತ್ ಕಂಪನಿಗಳು ಅಕ್ರಮವಾಗಿ ಗರಸುಮಣ್ಣು (ಮುರಂ) ಸಾಗಿಸುತ್ತಿದ್ದು ಅಧಿಕ ಭಾರಕ್ಕೆ ಈ ಭಾಗದ ರಸ್ತೆಗಳು ಹಾಳಾಗಿವೆ’ ಎಂದು ಸಾರ್ವಜನಿಕರು ದೂರಿದ್ದಾರೆ.

ಗ್ರಾಮದ ವ್ಯಾಪ್ತಿಯಲ್ಲಿ ಗೋಮಾಳ, ಪ್ರಾದೇಶಿಕ ವಲಯ ಅರಣ್ಯ ಇಲಾಖೆಗೆ ಸೇರಿದ ಜಮೀನಿನಲ್ಲಿ ಮಣ್ಣಿನ ದಿಬ್ಬಗಳು ಇದ್ದು, ಆ ಪ್ರದೇಶದಲ್ಲಿ ಹಗಲು ರಾತ್ರಿ ಎನ್ನದೆ ಹಿಟಾಚಿ ಯಂತ್ರಗಳ ಮೂಲಕ ನಿರಂತರವಾಗಿ ಗರಸು ಮಣ್ಣನ್ನು ಬಗೆಯಲಾಗುತ್ತಿದೆ. ನಿತ್ಯ ನೂರಾರು ಲಾರಿಗಳು ತಾವರಗೇರಾ, ಮುದೇನೂರು ರಸ್ತೆಗಳ ಮೂಲಕ ಸಂಚರಿಸುತ್ತಿವೆ. ಆದರೆ ನಿಗದಿಪಡಿಸಿದ್ದಕ್ಕಿಂತ ಅತ್ಯಧಿಕ ಪ್ರಮಾಣದಲ್ಲಿ ಮಣ್ಣು ಸಾಗಿಸಲಾಗುತ್ತಿದ್ದು ಅಧಿಕ ಭಾರಕ್ಕೆ ರಸ್ತೆಗಳು ನಲುಗಿಹೋಗಿವೆ. ಅನೇಕ ಕಡೆ ಗುಂಡಿಗಳು ಬಿದ್ದು ವಾಹನಗಳ ಸಂಚಾರಕ್ಕೆ ಅಡಚಣೆಯಾಗಿದೆ ಎಂದು ತಿಳಿಸಲಾಗಿದೆ. ಸರ್ಕಾರಿ ಜಮೀನಿನಲ್ಲಿ ಅಕ್ರಮವಾಗಿ ಮಣ್ಣು ತೆಗೆಯುತ್ತಿರುವುದನ್ನು ಕಂದಾಯ, ಅರಣ್ಯ ಇಲಾಖೆ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ. ರಸ್ತೆ ಹಾಳಾಗಿರುವುದಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಗೆ ದೂರು ಸಲ್ಲಿಸಲಾಗಿದೆ.

ಆದರೂ ನಿಯಮಗಳನ್ನು ಉಲ್ಲಂಘಿಸುತ್ತಿರುವ ವಿದ್ಯುತ್ ಕಂಪನಿಗಳ ಬಗ್ಗೆ ಸಂಬಂಧಿಸಿದ ಅಧಿಕಾರಿಗಳು ಚಕಾರ ಎತ್ತದೆ ಮೌನ ವಹಿಸಿದ್ದಾರೆ ಎಂದು ತಾಲ್ಲೂಕು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಉಮೇಶ ಯಾದವ, ಮುದ್ದಲಗುಂದಿ ಗ್ರಾಮದ ರಾಘವೇಂದ್ರ, ಭೋವಿ, ಹನುಮಂತ ಇತರರು ಆರೋಪಿಸಿದರು.

> ಸರ್ಕಾರಿ ಜಮೀನಲ್ಲಿ ಮಣ್ಣು ತೆಗೆಯುವುದಕ್ಕೆ ಯಾರಿಗೂ ಅನುಮತಿ ನೀಡಿಲ್ಲ. ಪಟ್ಟಾ ಜಮೀನಿನಲ್ಲಿ ತೆಗೆಯುತ್ತಿರಬಹುದು. ಆದರೂ ಪರಿಶೀಲಿಸಿ ಕ್ರಮ ಕೈಗೊಳ್ಳುತ್ತೇವೆ
> –ಅಶೋಕ ಶಿಗ್ಗಾವಿ
> ತಹಶೀಲ್ದಾರ್ ಕುಷ್ಟಗಿ



ಉದಯವಾಹಿನಿ ಚಿತ್ರ

## ದಿನ ಭವಿಷ್ಯ

| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
|---|---|---|
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ವಿವಾಹಿತರು ತಮ್ಮ ಮಕ್ಕಳ ಅಧ್ಯಯನದ ಮೇಲೆ ಹೆಚ್ಚು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ವೃಷಭ** ನೀವು ಇಂದು ಆರಾಮವಾಗಿ ವಿಶ್ರಾಂತಿ ಪಡೆಯಬೇಕು. ನೀವು ಆನಂದಿಸುವ ಮತ್ತು ಆಸಕ್ತಿಗಳು ಮತ್ತು ವಿಷಯಗಳಲ್ಲಿ ತೊಡಗಿಕೊಳ್ಳಿ. ದೀರ್ಘ ಕಾಲ ಬಾಕಿಯಿದ್ದ ಬಾಕಿಗಳು ಕೊನೆಗೂ ದೊರಕುತ್ತವೆ.

**ಮಿಥುನ** ಆರೋಗ್ಯ ಸಮಸ್ಯೆಯಿಂದಾಗಿ ಒಂದು ಪ್ರಮುಖ ಕೆಲಸಕ್ಕೆ ಹೋಗಲು ಸಾಧ್ಯವಾಗದಿರುವುದರಿಂದ ಕೆಲವು ಹಿನ್ನಡೆ ಎದುರಿಸುವ ಸಾಧ್ಯತೆಯಿದೆ. ಆದರೆ ನಿಮ್ಮನ್ನು ಮೇಲೆತ್ತಲು ನಿಮ್ಮ ತಾರ್ಕಿಕತೆಯನ್ನು ಬಳಸಿ.

**ಕರ್ಕಾಟಕ** ನಿಮ್ಮ ನೀಡುವ ವರ್ತನೆ ಪರೋಕ್ಷವಾಗಿ ನಿಮಗೆ ಆಶೀರ್ವಾದವೇ ಆಗುತ್ತದೆ, ಏಕೆಂದರೆ ನೀವು ಅನುಮಾನ, ನಿರಾಸೆ, ಅಸೂಯೆಯಂಥ ಅನೇಕ ದುರ್ಗುಣಗಳಿಂದ ಮುಕ್ತಿ ಹೊಂದುವ ಸಾಧ್ಯತೆಗಳಿವೆ.

**ಸಿಂಹ** ನಿಮ್ಮ ಆರೋಗ್ಯದ ಬಗ್ಗೆ ಎಚ್ಚರ ವಹಿಸಿ. ಇಂದು ಹಣದ ಆಗಮನವು ನಿಮ್ಮನ್ನು ಯಾವುದೇ ಸಮಸ್ಯೆಗಳಿಂದ ಮುಕ್ತಗೊಳಿಸಬಹುದು ಸಂಬಂಧಿಗಳು ನಿಮಗೆ ಸಹಾಯ ಹಸ್ತ ನೀಡಲು ಒಪ್ಪಿಕೊಳ್ಳುತ್ತಾರೆ.

**ಕನ್ಯಾ** ಬಹಳ ವಿಚಿತ್ರವಾದ ಪರಿಸ್ಥಿತಿಯಲ್ಲಿ ಸಿಲುಕಿದರೂ ಅದನ್ನು ಎದುರಿಸಲು ನಿಮ್ಮ ಇಚ್ಛಾಶಕ್ತಿ ಇಂದು ಸಹಾಯ ಮಾಡಬಹುದು. ಒಂದು ಅತ್ಯಂತ ಭಾವನಾತ್ಮಕ ನಿರ್ಧಾರ ಕೈಗೊಳ್ಳುವಾಗ ನೀವು ಸ್ತಿಮಿತ ಕಳೆದುಕೊಳ್ಳಬಾರದು.

**ತುಲಾ** ನಿಮ್ಮ ವ್ಯಕ್ತಿತ್ವವನ್ನು ಸುಧಾರಿಸಲು ಗಂಭೀರ ಪ್ರಯತ್ನಗಳನ್ನು ಮಾಡಿ. ಇಂದು ನೀವು ನಿಮ್ಮ ಮನೆಯ ಹಿರಿಯ ಜನರಿಂದ ಹಣವನ್ನು ಉಳಿಸುವ ಬಗ್ಗೆ ಯಾವುದೇ ಸಲಹೆಯನ್ನು ತೆಗೆದುಕೊಳ್ಳಬಹುದು.

**ವೃಶ್ಚಿಕ** ಇಂದು ನೀವು ನಿಮ್ಮ ಜೀವನ ಸಂಗಾತಿಯೊಂದಿಗೆ ಯಾವುದೇ ಅಮೂಲ್ಯ ವಸ್ತುವನ್ನು ಖರೀದಿಸಬಹುದು, ಇದರಿಂದ ಆರ್ಥಿಕ ಪರಿಸ್ಥಿತಿ ಸ್ವಲ್ಪ ತೊಂದರೆಗೊಳಗಾಗಬಹುದು.

**ಧನಸ್ಸು** ಇಂದು ನೀವು ಭೂಮಿ, ವಸತಿ, ಅಥವಾ ಸಾಂಸ್ಕೃತಿಕ ಯೋಜನೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಗಮನ ನೀಡಬೇಕು. ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ.

**ಮಕರ** ಆರೋಗ್ಯ ಪರಿಪೂರ್ಣವಾಗಿರುತ್ತದೆ. ಹಣದ ಲಾಭ ನಿಮ್ಮ ನಿರೀಕ್ಷೆಯಂತಿರುವುದಿಲ್ಲ. ಪೋಷಕರ ಆರೋಗ್ಯ ಸುಧಾರಿಸುತ್ತದೆ ಮತ್ತು ಅವರು ನಿಮ್ಮ ಮೇಲೆ ಪ್ರೀತಿಯ ಮಳೆಗೈಯುತ್ತಾರೆ.

**ಕುಂಭ** ನಿಮ್ಮ ಹಣವನ್ನು ಉಳಿಸಲು ಇಂದು ನಿಮ್ಮ ಮನೆಯ ಜನರೊಂದಿಗೆ ಮಾತನಾಡಬೇಕು. ಅವರ ಸಲಹೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಸಹಾಯಕವಾಗುತ್ತದೆ.

**ಮೀನ** ಕೆಲವರು ನಿಮಗೆ ಏನನ್ನಾದರೂ ಕಲಿಯಲು ಬಹಳ ವಯಸ್ಸಾಗಿದೆಯೆಂದು ಭಾವಿಸಬಹುದು ಆದರೆ ಅದು ನಿಜವಲ್ಲ – ನಿಮ್ಮ ಪ್ರಖರ ಮತ್ತು ಸಕ್ರಿಯ ಮನಸ್ಸಿನಿಂದ ಹೊಸ ವಿಷಯಗಳನ್ನು ಸುಲಭವಾಗಿ ಕಲಿಯುವಿರಿ.

---

**• ಬೇಡಿಕೆಗೆ ಅನುಸಾರವಾಗಿ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಅಗತ್ಯ ದಾಸ್ತಾನು ಶೇಖರಿಸಿಡಬೇಕು**

# ಬಿತ್ತನೆ ಬೀಜ, ರಸಗೊಬ್ಬರ ಕೊರತೆಯಾಗದಂತೆ ಕ್ರಮವಹಿಸಿ: ಅಪರ ಜಿಲ್ಲಾಧಿಕಾರಿ

**• ಉದಯವಾಹಿನಿ ಚಿತ್ರದುರ್ಗ**

ಮುಂಗಾರು ಪೂರ್ವದಲ್ಲಿಯೇ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿದೆ. ರೈತರು ಭೂಮಿಯನ್ನು ಹದ ಮಾಡಿಕೊಂಡು ಬಿತ್ತನೆಗೆ ಸಿದ್ಧತೆ ನಡೆಸಿದ್ದಾರೆ. ಕೃಷಿ ಅಧಿಕಾರಿಗಳು ಬಿತ್ತನೆ ಬೀಜ ಹಾಗೂ ಅಗತ್ಯ ರಸಗೊಬ್ಬರಗಳು ಕೊರತೆಯಾಗದಂತೆ ಕ್ರಮ ವಹಿಸಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ.ಟಿ. ಕುಮಾರಸ್ವಾಮಿ ಕೃಷಿ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ 2025–26ನೇ ಸಾಲಿನ ಮುಂಗಾರು ಹಂಗಾಮಿನ ಪೂರ್ವ ಸಿದ್ಧತೆ, ಬಿತ್ತನೆ ಬೀಜ ಮತ್ತು ರಸಗೊಬ್ಬರ ಇತ್ಯಾದಿ ಕೃಷಿ ಪರಿಕರಗಳ ಯೋಜನೆ ಮತ್ತು ಲಭ್ಯತೆ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಬಿತ್ತನೆ ಬೀಜ ಹಾಗೂ ರಸಗೊಬ್ಬರಕ್ಕೆ ರೈತರು ಸಾಲುಗಟ್ಟಿ ನಿಲ್ಲುವಂತಾಗಬಾರದು. ಕಾಳ ಸಂತೆಯಲ್ಲಿ ಹೆಚ್ಚಿನ ದರಕ್ಕೆ ಮಾರಾಟವಾಗುವುದನ್ನು ಅಧಿಕಾರಿಗಳು ತಡೆಗಟ್ಟಬೇಕು. ಬೇಡಿಕೆಗೆ ಅನುಸಾರವಾಗಿ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಅಗತ್ಯ ದಾಸ್ತಾನು ಶೇಖರಿಸಿಡಬೇಕು.

ಕೃಷಿ ಇಲಾಖೆಯ ಸಂಚಾರಿ ಮಣ್ಣು ಪರೀಕ್ಷಾ ಕೇಂದ್ರಗಳ ಸದುಪಯೋಗಪಡಿಸಿಕೊಂಡು ರೈತರ ಜಮೀನಿನ ಮಣ್ಣಿನ ಪರೀಕ್ಷೆ ನಡೆಸಬೇಕು. ರೈತರಿಗೆ ಮಣ್ಣಿನ ಫಲವತ್ತತೆಯ ವರದಿಯನ್ನು ನೀಡಬೇಕು. ಇದನ್ನು ಆಧರಿಸಿ ಬಿತ್ತನೆ ಬೀಜ ಹಾಗೂ ರಸಗೊಬ್ಬರ ಬಳಕೆ ಮಾಡಲು ರೈತರಿಗೆ ಅಧಿಕಾರಿಗಳು ಶಿಫಾರಸ್ಸು ಮಾಡಬೇಕು.


ಉದಯವಾಹಿನಿ ಚಿತ್ರ

**ರೈತರು ಬಿತ್ತನೆಗೆ ಸಿದ್ಧತೆ**

ಇದರಿಂದ ಅನಾವಶ್ಯಕವಾಗಿ ಮಣ್ಣಿಗೆ ರಾಸಾಯನಿಕ ಗೊಬ್ಬರಗಳನ್ನು ಸುರಿಯುವುದು ತಪ್ಪುತ್ತದೆ. ಮಣ್ಣಿನ ಫಲವತ್ತತೆ ಆಧರಿಸಿ ಬೆಳೆ ಬೆಳೆಯುವುದರಿಂದ ರೈತರಿಗೆ ಆರ್ಥಿಕವಾಗಿ ಹೆಚ್ಚಿನ ನಷ್ಟ ಉಂಟಾಗುವುದಿಲ್ಲ. ರೈತರು ಸಾಲದ ಸುಳಿಯಲ್ಲಿ ಸಿಲುಕುವುದಿಲ್ಲ. ರೈತರು ಕೃಷಿಯೊಂದಿಗೆ ಪಶು ಸಂಗೋಪನೆ ಕೈಗೊಂಡು ಸಮಗ್ರ ಬೇಸಾಯ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರೋತ್ಸಾಹ ನೀಡಬೇಕು. ಕೊಟ್ಟಿಗೆ ಹಾಗೂ ಸಾವಯವ ಗೊಬ್ಬರಗಳನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆ ಹಾಳಾಗುವುದಿಲ್ಲ. ಈ ಕುರಿತು ರೈತರಿಗೆ ಮನದಟ್ಟು ಮಾಡಿಕೊಡಬೇಕು.

ಡಿಎಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಇತರೆ ಸಂಯುಕ್ತ ರಸ ಗೊಬ್ಬರಗಳನ್ನು ಬಳಸಲು ರೈತರಿಗೆ ಸಲಹೆ ನೀಡಬೇಕು ಎಂದು ಅಪರ ಜಿಲ್ಲಾಧಿಕಾರಿ ಬಿ ಟಿ ಕುಮಾರಸ್ವಾಮಿ ಹೇಳಿದರು. ಜಿಲ್ಲೆಯಲ್ಲಿ ಏಪ್ರಿಲ್–25 ರಿಂದ ಮಾರ್ಚ್–26 ವರೆಗೆ ಒಟ್ಟು 94,546 ಮೆಟ್ರಿಕ್ ಟನ್ ರಸಗೊಬ್ಬರದ ಬೇಡಿಕೆ ನಿರೀಕ್ಷೆಯಿದೆ. ಇದುವರೆಗೂ ಒಟ್ಟು 32,045 ಮೆಟ್ರಿಕ್ ಟನ್ ಹೊಸ ಗೊಬ್ಬರ ದಾಸ್ತಾನು ಸಂಗ್ರಹಿಸಲಾಗಿದ್ದು, 12,567 ಮೆಟ್ರಿಕ್ ಟನ್ ಮಾರಾಟವಾಗಿದೆ. 19,477 ಮೆಟ್ರಿಕ್ ಟನ್ ಗೊಬ್ಬರ ಉಳಿಕೆಯಾಗಿದೆ. ಕೃಷಿ ಇಲಾಖೆಯ 22 ರೈತಸಂಪರ್ಕ ಕೇಂದ್ರ, ಹಾಗೂ 13 ಹೆಚ್ಚುವರಿ ವಿತರಣಾ ಕೇಂದ್ರಗಳಲ್ಲಿ ಸಹಾಯ ಧನದಡಿ ಬಿತ್ತನೆ ಬೀಜಗಳನ್ನು ವಿತರಣೆ ಮಾಡಲಾಗುವುದು.

ಇದನ್ನು ಹೊರತುಪಡಿಸಿ 59 ಕೃಷಿಪತ್ತಿನ ಸಹಕಾರ ಸಂಘಗಳು, 26 ರೈತ ಉತ್ಪಾದಕ ಸಂಸ್ಥೆಗಳು, 283 ಖಾಸಗಿ ಮಾರಾಟಗಾರರು ಬಿತ್ತನೆ ಬೀಜ ಮಾರಾಟ ಮಾಡಲಿದ್ದಾರೆ.

ಕಳಪೆ ಹಾಗೂ ಹೆಚ್ಚಿನ ದರಕ್ಕೆ ಬಿತ್ತನೆ ಬೀಜ ಹಾಗೂ ರಸ ಗೊಬ್ಬರ ಮಾರಾಟ ಮಾಡದಂತೆ ಈಗಾಗಲೇ ಸಂಬಂಧಪಟ್ಟವರಿಗೆ ಎಚ್ಚರಿಕೆ ನೀಡಲಾಗಿದೆ ಎಂದು ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಮಂಜುನಾಥ್ ತಿಳಿಸಿದರು. ಇದೇ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ ಅವರು ರೈತರ ಸಲಹೆ ಕರ ಪತ್ರಗಳನ್ನು ಬಿಡುಗಡೆ ಮಾಡಿ, ರಸಗೊಬ್ಬರ ಮಾರಾಟ ಮಾಡುವ ಪಿಓಎಸ್ ಯಂತ್ರಗಳಿಗೆ ಚಾಲನೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಮುಖ್ಯ ಯೋಜನಾಧಿಕಾರಿ ಗಾಯಿತ್ರಿ, ಕೃಷಿ ಉಪ ನಿರ್ದೇಶಕ ಕೆ.ಎಸ್.ಶಿವಕುಮಾರ್, ಕೃಷಿ ಇಲಾಖೆ ಜಾರಿದಳದ ಸಹಾಯಕ ನಿರ್ದೇಶಕರಾದ ಮಲ್ಲನ ಗೌಡ,ಜೆ, ಉಲ್ಫತ್ ಜೈಬ್, ಇಫ್ಕೋ ಸಂಸ್ಥೆಯ ಕ್ಷೇತ್ರಾಧಿಕಾರಿ ಚಿದಂಬರಮೂರ್ತಿ, ಜಿಲ್ಲಾ ರಸಗೊಬ್ಬರ ಮಾರಾಟಗಾರರ ಯೂನಿಯನ್ ಅಧ್ಯಕ್ಷ ಜಿ.ಪಿ.ರೇವಣ ಸಿದ್ದಪ್ಪ ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

### 12,924 ಕ್ವಿಂಟಾಲ್ ಬಿತ್ತನೆ ಬೀಜ ಸಂಗ್ರಹಣೆ

ಜನವರಿಯಿಂದ ಮೇ ತಿಂಗಳವರೆಗೆ ಜಿಲ್ಲೆಯಲ್ಲಿ 79.9 ಮಿ.ಮೀ. ವಾಡಿಕೆ ಮಳೆ ನಿರೀಕ್ಷೆ ಇತ್ತು. ಆದರೆ ಜಿಲ್ಲೆಯಲ್ಲಿ ಈವರೆಗೆ 135.8 ಮಿ.ಮೀ.ಮಳೆಯಾಗಿದೆ. ಇದರಿಂದಾಗಿ ಜಿಲ್ಲೆಯಲ್ಲಿ ಬಿತ್ತನೆ ಚಟುವಟಿಕೆಗಳು ಗರಿ ಗೆದರಿವೆ. ಶೇಂಗಾ, ಮೆಕ್ಕೆಜೋಳ, ರಾಗಿ, ತೊಗರಿ, ಸೂರ್ಯಕಾಂತಿ, ಹೆಸರು, ಹಲಸಂದಿ, ಸಿರಿಧಾನ್ಯ, ಹತ್ತಿ ಬೆಳೆಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಕೃಷಿ ಇಲಾಖೆಯಿಂದ ಒಟ್ಟು 31454 ಕ್ವಿಂಟಾಲ್ ಬಿತ್ತನೆ ಬೀಜದ ಗುರಿ ನಿಗದಿಪಡಿಸಿಕೊಂಡಿದ್ದು, ಈಗಾಗಲೇ 12,924 ಕ್ವಿಂಟಾಲ್ ಬಿತ್ತನೆ ಬೀಜದ ದಾಸ್ತಾನು ಸಂಗ್ರಹಣೆ ಮಾಡಲಾಗಿದೆ. ಜುಲೈ 2ನೇ ವಾರದವರೆಗೂ ಬಿತ್ತನೆ ಮಾಡಲು ಅವಕಾಶವಿದೆ ಎಂದು ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಮಂಜುನಾಥ್ ಸಭೆಯಲ್ಲಿ ಮಾಹಿತಿ ನೀಡಿದರು.

> ತೊಗರಿ, ಶೇಂಗಾ, ಸೂರ್ಯಕಾಂತಿ ಮುಸುಕಿನ ಜೋಳ, ರಾಗಿ ಮತ್ತು ಸಿರಿಧಾನ್ಯ ಬೆಳೆಗಳಲ್ಲಿ ಉತ್ತಮ ಇಳುವರಿ ಪಡೆಯಲು ಸುಧಾರಿತ ಬಿತ್ತನೆ ಬೀಜ ಹಾಗೂ ನವೀನ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ರೈತರಿಗೆ ಶಿಫಾರಸ್ಸು ಮಾಡಲಾಗುತ್ತಿದೆ. ರಾಷ್ಟ್ರೀಯ ಖಾದ್ಯ ತೈಲ ಅಭಿಯಾನದಡಿ ಎಣ್ಣೆಕಾಳುಗಳಾದ ಶೇಂಗಾ, ಸೂರ್ಯಕಾಂತಿ, ಹರಳೆ ಬಿತ್ತನೆ ಮಾಡಲು ಪ್ರೋತ್ಸಾಹ ನೀಡಲಾಗುತ್ತಿದೆ. ಯೂರಿಯಾ, ಡಿಎಪಿ, ಎಂಓಪಿ, ಕಾಂಪ್ಲೆಕ್ಸ್ ಹಾಗೂ ಎಸ್‌ಎಸ್‌ಪಿ ರಸಗೊಬ್ಬರಗಳ ಜೊತೆಗೆ ಲಘು ಪೋಷಕಾಂಶಗಳು, ಪೋಟಾಸಿಯಂ ಹಾಗೂ ಗಂಧಕ ಸಾರಗಳನ್ನು ಒದಗಿಸುವ ಹೊಸ ಗೊಬ್ಬರಗಳನ್ನು ಬಳಸಲು ರೈತರಿಗೆ ಸಲಹೆ ನೀಡಲಾಗುತ್ತಿದೆ
>
> –ಮಂಜುನಾಥ್, ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ

---

**ಛಲವಾದಿ ನಾರಾಯಣಸ್ವಾಮಿ ಹೇಳಿಕೆ ಖಂಡನೀಯ**

## ಪುರಸಭೆ ಅಧ್ಯಕ್ಷ ಆನಂದ ಟೈಗರ್

**• ಉದಯವಾಹಿನಿ, ಚಿಂಚೋಳಿ**

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐಟಿಬಿಟಿ ಖಾತೆ ಮತ್ತು ಕಲಬುರ್ಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆಯವರಿಗೆ



ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ನೀಡಿರುವ ಹೇಳಿಕೆ ಖಂಡನೀಯವಾಗಿದೆ ಎಂದು ಪುರಸಭೆ ಅಧ್ಯಕ್ಷ ಆನಂದಕುಮಾರ ಟೈಗರ್ ಆಕ್ರೋಶ ವ್ಯಕ್ತಪಡಿಸಿದರು. ಪಟ್ಟಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಿಯಾಂಕ್ ಖರ್ಗೆಯವರ ಏಳಿಗೆ ಸಹಿಸದ ಕೆಲ ಬಿಜೆಪಿಗರು, ಮನುವಾದಿಗಳು ಸಚಿವ ಖರ್ಗೆಯವರಿಗೆ ವ್ಯಯಕ್ತಿಕವಾಗಿ ನಿಂದನೆ ಮಾಡುವುದು, ಮನಸ್ಸಿಗೆ ಬಂದಂತೆ ಮಾತನಾಡುವುದು ರೂಢಿ ಮಾಡಿಕೊಂಡಿದ್ದಾರೆ. ಒಬ್ಬ ದಲಿತ ನಾಯಕ ಬೆಳೆಯುತ್ತಿರುವುದು ಬಿಜೆಪಿಗರಿಗೆ ಸಹಿಸಿಕೊಳ್ಳಲು ಆಗದೆ ವ್ಯಯಕ್ತಿಕವಾಗಿ ಟೀಕೆಗಳು ಮಾಡುವುದು ಮತ್ತು ಬಿಜೆಪಿಯಲ್ಲಿ ನಾರಾಯಣಸ್ವಾಮಿಯವರಿಗೆ ಇಟ್ಟುಕೊಂಡು ಬರೀ ಖರ್ಗೆ ವಿರುದ್ಧ ಹೇಳಿಕೆ ಕೊಡಲು ಬಿಜೆಪಿಯವರು ಇಟ್ಟುಕೊಂಡಿದ್ದಾರೆ.

ಹೀಗೆ ಮುಂದುವರೆದರೆ ಹಿಂದುಳಿದವರು, ದಲಿತರು, ಅಲ್ಪಸಂಖ್ಯಾತರು ಒಗ್ಗೂಡಿಕೊಂಡು ರಾಜ್ಯಾದ್ಯಂತ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

> ಮೊದಲು ಬಿಜೆಪಿಗರು ಮಾತನಾಡುವಾಗ ನಾಲಿಗೆ ಮೇಲೆ ಹಿಡಿತವಿಟ್ಟುಕೊಂಡು ರಾಜಕೀಯ ಸಂಬಂಧಪಟ್ಟಂತೆ ಮಾತನಾಡಲಿ ಅದನ್ನು ಬಿಟ್ಟು ವೈಯಕ್ತಿಕವಾಗಿ ಮಾತನಾಡಿ ಅವರ ಘನತೆಗೆ ಧಕ್ಕೆಯಾದಂತೆ ಮಾತನಾಡುವುದು ಬಿಡಲಿ ಹಾಗೂ ನಾರಾಯಣ ಸ್ವಾಮಿಯವರು ಹೇಳಿಕೆ ನೀಡಿದ ಶಬ್ದ ಹಿಂಪಡೆದು ಕ್ಷಮೆಯಾಚಿಸಬೇಕು –ಆನಂದ ಟೈಗರ್

---

## ಟ್ರ್ಯಾಕ್ಟರ್ ಕಳ್ಳರ ಬಂಧನ


ಉದಯವಾಹಿನಿ ಚಿತ್ರ

**• ಉದಯವಾಹಿನಿ ಕಲಬುರಗಿ**

ಫರತಾಬಾದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಟ್ರ್ಯಾಕ್ಟರ್ ಕಳ್ಳತನ ಪ್ರಕರಣಕ್ಕೆ ಸಂಬಂಧಿಸಿದಂತೆ 3 ಜನ ಆರೋಪಿತರನ್ನು ಬಂಧಿಸಿ, ಬಂಧಿತರಿಂದ 11,50,000/– ರೂಪಾಯಿ ಮೌಲ್ಯದ 3 ಟ್ರ್ಯಾಕ್ಟರ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಫಜಲಪುರ ತಾಲ್ಲೂಕಿನ ಹಸರಗುಂಡಗಿ ಗ್ರಾಮದ ರಿಯಾಜ್ ಪಟೇಲ್ ತಂದೆ ರಸೀದ್ ಪಟೇಲ್ ಗುಡನಾಲ (25), ಫರಹತಾಬಾದ ಗ್ರಾಮದ ರಾಜಶೇಖರ ತಂದೆ ನಾಗಪ್ಪ ಮಂದರವಾಡ (20), ಬಂದರವಾಡ ಗ್ರಾಮದ ನಾಗರಾಜ ತಂದೆ ಚಂದ್ರ ಕಾಂತ ಬಾಲಮಾರ್ (25) ಎಂಬುವವರನ್ನು ಬಂಧಿಸಿ 11.50 ಲಕ್ಷ ರೂ.ಮೌಲ್ಯದ 3 ಟ್ರ್ಯಾಕ್ಟರ್‌ಗಳನ್ನು ವಶ ಪಡಿಸಿಕೊಳ್ಳಲಾಗಿದೆ.

---

## ನಮ್ಮ ನೆಲವೇ ನಮಗೆ ಪ್ರೇರಣೆ: ಗುಂಡೇರಾವ

**• ಉದಯವಾಹಿನಿ ಕಲಬುರಗಿ**

ಕನ್ನಡ ಸಾರಸ್ವತ ಲೋಕಕ್ಕೆ ಪ್ರಥಮ ಕೃತಿ 'ಕವಿರಾಜ ಮಾರ್ಗ' ನೀಡಿದ ಹೆಗ್ಗಳಿಗೆ, ಕಾವೇರಿಯಿಂದ ಮಹಾ ಗೋದಾವರಿವರೆಗೆ ಕನ್ನಡ ಸಾಮ್ರಾಜ್ಯ ಕಟ್ಟಿದ ರಾಷ್ಟ್ರಕೂಟರ ರಾಜಧಾನಿ ಮಾನ್ಯಖೇಟ, ಹೀಗೆ ಹತ್ತು ಹಲವಾರು ಸಾಧನೆಗಳಿಗೆ ಮುನ್ನುಡಿ ಬರೆದವರು ಕಲಬುರಗಿ ನೆಲದವರು ಎಂಬ ಅಭಿಮಾನ ನಮಗಿದೆ. ನಮ್ಮ ನೆಲವೇ ನಮಗೆ ಪ್ರೇರಣೆಯಾಗಿದೆ ಎಂದು ಸಂಶೋಧಕ–ಸಾಹಿತಿ ಮುಡುಬಿ ಗುಂಡೇರಾವ ಅಭಿಮತ ವ್ಯಕ್ತಪಡಿಸಿದರು. ಕಾಳಗಿ ತಾಲ್ಲೂಕಿನ ಪೇಠ ಶಿರೂರ ಗ್ರಾಮದ ಮಲ್ಲಿಕಾರ್ಜುನ ದೇವಾಲಯದಲ್ಲಿ ಕಲಬುರಗಿಯ ಬಸವೇಶ್ವರ ಸಮಾಜ ಸೇವಾ ಬಳಗದ ವತಿಯಿಂದ ಜರುಗುತ್ತಿರುವ ಜಿಲ್ಲೆಯ ಐತಿಹಾಸಿಕ ಸ್ಥಳಗಳ ಪರಿಚಯಾತ್ಮಕ ಸರಣಿ ಕಾರ್ಯಕ್ರಮ –17ರಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡುತ್ತಾ, ಮಾತನಾಡುತ್ತಿದ್ದರು.

ನಮ್ಮ ಜಿಲ್ಲೆಯ ಸ್ಮಾರಕಗಳು ಕರುನಾಡಿನ ಭವ್ಯ ಪರಂಪರೆಯನ್ನು ಸಾರುತ್ತವೆ. ಪೇಠಶಿರೂರ ಗ್ರಾಮದಲ್ಲಿ ಹಲವಾರು ಪ್ರಾಚೀನ ಸ್ಮಾರಕಗಳು, ಗತಕಾಲದ ಮಹತ್ವದ ಸಂಗತಿಗಳು ದೊರೆಯುತ್ತವೆ.


ಉದಯವಾಹಿನಿ ಚಿತ್ರ

ಪ್ರಾಚೀನ ಮಲ್ಲಿಕಾರ್ಜುನ ದೇವಾಲಯವು ತುಂಬಾ ಕಲಾತ್ಮಕವಾಗಿದೆ. ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಅನಾವರಣಗೊಳಿಸುತ್ತದೆ.

ಗ್ರಾಮದಲ್ಲಿ ವಿವಿಧ ದೇವಾಲಯಗಳು, ವೀರಗಲ್ಲು, ದೇವರುಗಳ ಶಿಲ್ಪಗಳು. ಕಲ್ಯಾಣಿ, ಅಷ್ಟ ದಿಕ್ಪಾಲಕರು, ಅಲಂಕಾರಿಕ ಕಂಬಗಳು, ಬೌದ್ಧ ಸ್ಮಾರಕಗಳು, ಶಾಸನ, ಪಳುವಳಿಕೆಗಳು ಮುಂತಾದವರು ನಾಡು ಮತ್ತು ರಾಷ್ಟ್ರದ ಇತಿಹಾಸ ಸಾರುತ್ತವೆ ಎಂದರು.

ಗ್ರಾಮದಲ್ಲಿ ದೊರೆತ ಕ್ರಿಶ 1117 ಶಾಸನವು ಕಲ್ಯಾಣ ಚಾಲುಕ್ಯ ದೊರೆ 6ನೇಯ ವಿಕ್ರಮಾದಿತ್ಯನು ದೇವಾಲಯಕ್ಕೆ ಭೂದತ್ತಿ ದಾನ ಮಾಡಿದ ಉಲ್ಲೇಖ ಬರುತ್ತದೆ. ಇದರಿಂದ ನಾಡ ದೊರೆಗಳ ಪರೋಪ ಕಾರತೆ, ಉದಾರತೆಯು ಇತಿಹಾಸದಿಂದ ತಿಳಿದು ಬರುತ್ತದೆ ಎಂದರು.

---

## ಎಐ ಮಾದರಿಗಳನ್ನು ರೂಪಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು

**• ಉದಯವಾಹಿನಿ ಬಳ್ಳಾರಿ**

ಬಳ್ಳಾರಿಯ ಪ್ರತಿಷ್ಠಿತ ಬಳ್ಳಾರಿ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮ್ಯಾನೇಜ್ಮೆಂಟ್, ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ನೇತೃತ್ವದಲ್ಲಿ 2025ರ ರಾಷ್ಟ್ರೀಯ ತಂತ್ರಜ್ಞಾನ ದಿನಾಚರಣೆ ನಡೆಯಿತು.

ವಿಪ್ರೋ ಎಂಜಿನಿಯರಿಂಗ್ ಎಡ್ಜ್ ಡಿವಿ ಪ್ರಾಕ್ಟೀಸ್ ಹೆಡ್ ಡಾ. ಬಿ. ಶೈಲೇಂದ್ರ, ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ, ವಿದ್ಯಾರ್ಥಿಗಳನ್ನು ಸಂಶೋಧನೆ, ಉದ್ಯಮ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮುನ್ನಡೆಸುವಂತೆ ಪ್ರೇರೇಪಿಸಿದರು. ಈ ವರ್ಷದ ಥೀಮ್ ''ಯಂತ್ರ ಯುಗಾಂತರ್ ಫಾರ್ ಅಡ್ವಾನ್ಸಿಂಗ್ ನ್ಯೂ ಟೆಕ್ನಾಲಜಿ, ರಿಸರ್ಚ್ ಅಕ್ಸೆಲರೇಶನ್'' ಅನ್ನು ಆಧರಿಸಿ ಮಾತನಾಡಿದ ಅವರು, ಎಐ, ಪೇಟೆಂಟ್, ಸಂಶೋಧನಾ ಅನುದಾನಗಳ ಮಹತ್ವ, ಎಐ ಮಾದರಿಗಳನ್ನು ರೂಪಿಸುವ ಸಾಮರ್ಥ್ಯವನ್ನು ವಿದ್ಯಾರ್ಥಿಗಳು ಬೆಳೆಸಿಕೊಳ್ಳಬೇಕು ಎಂಬ ಸಂದೇಶವನ್ನು ಅವರು ನೀಡಿದರು. ಭಾರತೀಯ ವಿಜ್ಞಾನಿಗಳ ಸಂಶೋಧನಾ ಪರಂಪರೆಯ ಮೇಲೆ ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ಕಟ್ಟಿಕೊಳ್ಳಬೇಕು, ವಿಪ್ರೋ ಸಂಸ್ಥೆಯ ಪರಂಪರೆ, ಎಐ ಆಧಾರಿತ ನೇಮಕಾತಿ ಪ್ರಕ್ರಿಯೆ, ಮತ್ತು ಶಿಕ್ಷಣ–ಸಂಶೋಧನೆಗೆ ನೀಡುತ್ತಿರುವ ಬೆಂಬಲ, ಎಐ ಕ್ಷೇತ್ರದಲ್ಲಿ ವಿದ್ಯಾರ್ಥಿಗಳು ಸ್ವಂತವಾಗಿ ಮಾದರಿಗಳನ್ನು ರೂಪಿಸಬೇಕು, ಕೇವಲ ತಯಾರಾದ ಮಾದರಿಗಳನ್ನು ಬಳಸದೆ, ಎಂದು ಸಲಹೆ ನೀಡಿದರು. ಭಾರತದ ಡಿಜಿಟಲ್ ವಸತಿ ಅಭಿವೃದ್ಧಿ ಮತ್ತು ಬಾಹ್ಯಾಕಾಶ ಸಾಧನೆಗಳನ್ನೂ, ವಿದ್ಯಾರ್ಥಿಗಳು ಸಂಶೋಧನೆ ಹಾಗೂ ತಂತ್ರಜ್ಞಾನದ ಮುಂದಾಳುಗಳಾಗಬೇಕು ಎಂದು ಕರೆ ನೀಡಿದರು. ವಿಪ್ರೋನ ಎಐ ಆಧಾರಿತ ನೇಮಕಾತಿ, ಉದ್ಯೋಗಾವಕಾಶಗಳು, ಮತ್ತು ಉನ್ನತ ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಕೊಡುಗೆಗಳ ಬಗ್ಗೆ ಮಾಹಿತಿ ನೀಡಿದರು.



ಉದಯವಾಹಿನಿ ಚಿತ್ರ

**ಎಐ ಆಧಾರಿತ ನೇಮಕಾತಿ ಪ್ರಕ್ರಿಯೆ**

---

## ಸರ್ಕಾರ ಗ್ಯಾರಂಟಿಗಳಿಗೆ ಮಾತ್ರ ಸೀಮಿತ: ಕುಲಕರ್ಣಿ


ಉದಯವಾಹಿನಿ ಚಿತ್ರ

**• ಉದಯವಾಹಿನಿ ಚನ್ನಮ್ಮನ ಕಿತ್ತೂರು**

ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯಾ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರ ಚುಕ್ಕಾಣೆ ಹಿಡಿದು ಎರಡು ವರ್ಷ ಕಳೆದಿವೆ. ಈ ಎರಡು ವರ್ಷದ ಸಾಧನೆಯಲ್ಲಿ ಯಾವುದೇ ಜನಪರ ಯೋಜನೆ ಜಾರಿಗೆ ಬಂದಿಲ್ಲವೆಂದು ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ಮಂಡಳಾಧ್ಯಕ್ಷ ಶ್ರೀಕರ ಕುಲಕರ್ಣಿ ಹರಿಹಾಯ್ದಿದ್ದಾರೆ. ಈ ಸರ್ಕಾರ ಕೇವಲ ಗ್ಯಾರಂಟಿಗಳಿಗೆ ಮಾತ್ರ ಸೀಮಿತವಾಗಿದ್ದು ಸಾಧನೆ ಶೂನ್ಯ. ಈ ಕಾಂಗ್ರೆಸ್ ಸರ್ಕಾರದಲ್ಲಿ ಶೇ. 95ರಷ್ಟು ಶಾಸಕರು ಸರ್ಕಾರದ ವಿರುದ್ಧವೇ ಇದ್ದಾರೆ. ಇಂದೊಂದು ಬೂಟಾಟಿಕೆ ಸರ್ಕಾರ. ಸಿದ್ದರಾಮಯ್ಯ ಎರಡನೇ ಅವಧಿಗೆ ಮುಖ್ಯಮಂತ್ರಿಯಾದ ಮೇಲೆ ಸುಮಾರು 10 ಕೋಟಿ ಲಕ್ಷ ಸಾಲ ಮಾಡಿದ್ದಾರೆ.

ಸಮಾವೇಶ ಮಾಡುವ ನೆಪದಲ್ಲಿ ಅಧಿಕಾರ ಸರಿಯಾಗಿ ಮಾಡುತ್ತಿಲ್ಲ. ಇದನ್ನು ಬಿಟ್ಟು ಜನಪರ ಕಾಳಜಿವಹಿಸಲೆಂದು ಒತ್ತಾಯಿಸಿದರು.

4 ಕೋಟಿ ಬಜೆಟ್ ಮಂಡಿಸಿ ಅದರಲ್ಲಿ ಗ್ಯಾರಂಟಿ ಯೋಜನೆಗಳಿಗೆ ಹೆಚ್ಚು ಹಣ ಇಟ್ಟಿದ್ದಾರೆ. ಜಾಹೀರಾತು ಬಿಟ್ಟಿ ಭಾಗ್ಯದ ಸರ್ಕಾರವಿದು. ಜನಪರ ಸರ್ಕಾರವಲ್ಲ ಎಂದು ಅವರು ಹೇಳಿದರು.

**95ರಷ್ಟು ಶಾಸಕರು ಸರ್ಕಾರದ ವಿರುದ್ಧ**

---

## ಬಾಣಾವರದಲ್ಲಿ ಭಾವಸಾರ ಸೌಹಾರ್ದ ಬ್ಯಾಂಕ್ ಪ್ರಾರಂಭ


ಉದಯವಾಹಿನಿ ಚಿತ್ರ

**• ಉದಯವಾಹಿನಿ ಅರಸೀಕೆರೆ**

ಅರಸೀಕೆರೆ ತಾಲ್ಲೂಕಿನ ಬಾಣಾವರ ಪಟ್ಟಣದಲ್ಲಿ ಭಾವಸಾರ ಕ್ಷತ್ರಿಯ ಸಮಾಜದ ವತಿಯಿಂದ ಇತ್ತೀಚೆಗೆ ಭಾವಸಾರ ಸೌಹಾರ್ದ ಬ್ಯಾಂಕ್ ಪ್ರಾರಂಭವಾಗಿದೆ ಎಂದು ಸಂಘದ ಅಧ್ಯಕ್ಷ ಜೆ ವಿ ಗುರು. ಹಾಗೂ ನಿರ್ದೇಶಕರಾದ ಚಂದನ್ ಬೇಂದ್ರೆ, ತಿಳಿಸಿದರು. ಸುಮಾರು ವರ್ಷಗಳಿಂದಲೂ ಸಹ ನಮ್ಮ ಸಮುದಾಯದ ವತಿಯಿಂದ ಸಹಕಾರಿ ಬ್ಯಾಂಕ್ ತೆರೆಯಬೇಕೆಂದು ಗುರಿಯನ್ನು ಹೊಂದಿದ್ದೆವು ಇದರಿಂದ ಸಮುದಾಯದ ಸಣ್ಣಪುಟ್ಟ ವ್ಯಾಪಾರ ಮಾಡಿ ಜೀವನ ನಡೆಸುವಂತಹ ಕುಟುಂಬಗಳಿಗೆ ಆರ್ಥಿಕ ಸಹಕಾರಿಯಾಗಲಿದೆ ಎಂದರು.

ಉಪಾಧ್ಯಕ್ಷರಾದ ಪಶುಪತಿ ರಾವ್. ನಿರ್ದೇಶಕರುಗಳಾದ ಹೇಮಂತ್ ಕುಮಾರ್. ನವೀನ್. ಪ್ರವೀಣ್ ಎಂಡಿ. ಮೋಹನ್ ಕುಮಾರ್. ಮಂಜುನಾಥ್. ಪ್ರಕಾಶ್ ರಾಘವೇಂದ್ರ. ನಿರ್ದೇಶಕರುಗಳಾಗಿದ್ದು ಕಾರ್ಯದರ್ಶಿಯಾಗಿ ರಘು ಆಯ್ಕೆಯಾಗಿದ್ದಾರೆಂದು ಅಧ್ಯಕ್ಷರಾದ ಜೆ ವಿ ಗುರು ಮತ್ತು ನಿರ್ದೇಶಕ ಚಂದನ್ ಬೇಂದ್ರೆ, ತಿಳಿಸಿದರು.

---

## ಉಡುಪಿ ಜಿಲ್ಲಾದ್ಯಂತ ಉತ್ತಮ ಮಳೆ: 10 ಮನೆಗಳಿಗೆ ಹಾನಿ

**• ಉದಯವಾಹಿನಿ ಉಡುಪಿ**

ಅರಬ್ಬಿ ಸಮುದ್ರದಲ್ಲಿ ತೂಫಾನಿನ ಕಾರಣದಿಂದ ನಿರಂತರ 3ನೇ ದಿನ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ. ಕಳೆದ 24 ಗಂಟೆಗಳಲ್ಲಿ ಜಿಲ್ಲೆಯಲ್ಲಿ 23.70 ಮಿಮೀ ಮಳೆಯಾಗಿದೆ. ಗಾಳಿ, ಮಳೆಯಿಂದ 10 ಮನೆಗಳಿಗೆ, 1 ಶಾಲೆಗೆ 3 ತೋಟಗಳಿಗೆ ಸೇರಿ ಸುಮಾರು 3 ಲಕ್ಷ ರೂ.ಗಳಷ್ಟು ನಷ್ಟ ಉಂಟಾಗಿದೆ.

ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದೆ. ಆದರೆ, ಹಗಲಿನಲ್ಲಿ ಬಿಸಿಲು ಕಾಣಿಸಿ ಕೊಂಡಿತಾದರೂ, ಸಂಜೆಯಾಗುತ್ತಲೇ ಭಾರೀ ಗಾಳಿ ಮಳೆಯಾಗಿದೆ. ಭಾರತೀಯ ಹವಾಮಾನ ಇಲಾಖೆ ಶುಕ್ರವಾರ ಕೂಡ ಕರಾವಳಿಯಲ್ಲಿ ಉತ್ತಮ ಮಳೆಯಾಗುವ ಬಗ್ಗೆ ಮುನ್ಸೂಚನೆ ನೀಡಿದೆ. ಜೊತೆಗೆ ಸಮುದ್ರ ತೀರದಲ್ಲಿ 35–40 ಕಿಮಿ ವೇಗದಲ್ಲಿ ಗಾಳಿ ಬೀಸುವ ಬಗ್ಗೆ ಮುನ್ನೆಚ್ಚರಿಕೆ ನೀಡಿದೆ. ರಾತ್ರಿ ಜಿಲ್ಲೆಯ ವಿವಿಧೆಡೆ ಗಾಳಿ, ಮಳೆಗೆ ಅನೇಕ ಮನೆಗಳ ಮೇಲೆ ಮರುಗಳು ಬಿದ್ದು ಸಾಕಷ್ಟು ಹಾನಿಯಾಗಿದೆ. ಕುಂದಾಪುರ ತಾಲ್ಲೂಕಿನ ಗಂಗೊಳ್ಳಿಯಲ್ಲಿ ಶೋಭಾ ಅವರ ಮನೆಯ ಮೇಲೆ ಮರ ಬಿದ್ದು 5,000 ರೂ. ಬ್ರಹ್ಮಾವರ ತಾಲ್ಲೂಕಿನ ಬನ್ನಾಡಿ ಗ್ರಾಮದ ಪಲ್ಲವಿ ಪೂಜಾರ್ತಿ ಅವರ ಮನೆಯ ಮೇಲೆ ಮರ ಬಿದ್ದು 20,000 ರೂ. ಬೈಕಾಡಿ ಗ್ರಾಮದ ಲೂಕಾಸ್ ಲೂವಿಸ್ ಅವರ ಮನೆಯ ಮೇಲೆ ಮರ ಬಿದ್ದು 25,000 ರೂ. ಆರೂರು ಗ್ರಾಮದ ಭಾಸ್ಕರ ಪೂಜಾರಿ ಅವರ ಮನೆಯ ಮೇಲೆ ಮರಬಿದ್ದು 30,000 ರೂ. ಜಯಂತಿ ಹಾಂಡ್ತಿ ಅವರ ಮನೆಯ ಮೇಲೆ ಮರಬಿದ್ದು 20,000 ರೂ. ಉಡುಪಿ ತಾಲ್ಲೂಕಿನ ಕುಕ್ಕೆಹಳ್ಳಿ ನಾಗರಾಜ ತಂತ್ರಿ ಅವರ ಮನೆಯ ಮೇಲೆ ಮರಬಿದ್ದು 10,000 ರೂ. ಗಳಷ್ಟು ಹಾನಿಯಾಗಿದೆ. ಬ್ರಹ್ಮಾವರ ತಾಲ್ಲೂಕಿನ ಆರೂರು ಗ್ರಾಮದ ಸಂತಾನ ಮಸ್ಕರೇನ್ಹಸ್ ಅವರ ಮನೆಗೆ ಗಾಳಿ, ಮಳೆಯಿಂದ 10,000 ರೂ. ನೀಲಾವರ ಗ್ರಾಮದ ಗಿರಿಜ ಬಾಯಿ ಅವರ ಮನೆಗೆ 50,000 ರೂ. ಉಡುಪಿ ತಾಲ್ಲೂಕಿನ ಶಿವಳ್ಳಿ ಗ್ರಾಮದ ವಿನೋದ ಪೂಜಾರಿ ಅವರ ಮನೆಯ ಶೀಟ್ ಹಾರಿ 10,000 ರೂ. ಕುಕ್ಕೆಹಳ್ಳಿ ಗ್ರಾಮದ ಲಕ್ಷ್ಮಿ ಆಚಾರ್ತಿ ಅವರ ಮನೆಗೆ 25,000 ರೂ. ನಷ್ಟ ಸಂಭವಿಸಿದೆ. ಕುಂದಾಪುರ ತಾಲ್ಲೂಕಿನ ಉಳ್ಳೂರು ಗ್ರಾಮದ ಸುಮನಾ ಅವರಿಗೆ 20,000 ರೂ. ಸರೋಜ ಅವರಿಗೆ 15,000 ರೂ. ಜಯಕರ ಶೆಟ್ಟಿ ಅವರಿಗೆ 15,000 ರೂ.ಗಳಷ್ಟು ಗಾಳಿಯಿಂದ ಅಡಕೆ ತೋಟಗಳಿಗೆ ಹಾನಿಯಾಗಿದೆ.

---

## ಬಮೂಲ್ ನಿರ್ದೇಶಕರಾಗಿ ಆಯ್ಕೆಯಾದ ಡಿಕೆ ಸುರೇಶಗೆ ಸನ್ಮಾನ


ಉದಯವಾಹಿನಿ ಚಿತ್ರ

**• ಉದಯವಾಹಿನಿ ವಡಗೇರಾ**

ಮಾಜಿ ಸಂಸದರಾದ ಡಿಕೆ ಸುರೇಶ ರವರು ಕನಕಪುರ ತಾಲ್ಲೂಕಿನ ಬಮೂಲ್ ಹಾಲು ಒಕ್ಕೂಟದ ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿ ಅವಿರೋಧವಾಗಿ ಆಯ್ಕೆಯಾಗಿರುವ ಡಿಕೆ ಸುರೇಶ ರವರಿಗೆ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥರೆಡ್ಡಿ ಚೆನ್ನೂರು ಜೆ. ನೇತೃತ್ವದಲ್ಲಿ ಬೆಂಗಳೂರು ನಗರದ ಸದಾಶಿವನಗರದ ಅವರ ನಿವಾಸದಲ್ಲಿ ಸನ್ಮಾನಿಸಿ ಅಭಿನಂದಿಸಿ ಮಾತನಾಡಿದ ಅವರು ತಾವುಗಳು ರೈತರ ಹೈನುಗಾರಿಕೆಯ ಪರವಾಗಿ ಅವರ ಸಮಸ್ಯೆಗಳ ವಿರುದ್ಧ ಧ್ವನಿಯೆತ್ತಿ ಹೈನುಗಾರಿಕೆಯ ರೈತರ ಸಮಸ್ಯೆಗಳಿಗೆ ಸ್ಪಂದಿಸಿ ಅವರ ಪರವಾಗಿ ಬೆಂಬಲಕ್ಕೆ ನಿಲ್ಲುವಂತೆ ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಂಜುನಾಥ ರೆಡ್ಡಿ ಚೆನ್ನೂರು ಜೆ ರವರು ಮನವಿ ಮಾಡಿಕೊಂಡರು.

ಅವರ ಮನವಿಗೆ ಸ್ಪಂದಿಸಿದ ನೂತನ ನಿರ್ದೇಶಕರಾದ ಡಿಕೆ ಸುರೇಶ್ ರವರು ಮಾತನಾಡಿ ನಾನು ರೈತರ ಪರವಾಗಿದ್ದು ಹೈನುಗಾರಿಕೆ ರೈತರ ಪರವಾಗಿ ಇದ್ದು ರೈತರ ಅಭಿವೃದ್ಧಿಗೆ ಶ್ರಮಿಸುವುದಾಗಿ ಅವರು ತಿಳಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸ್ ಯುವ ಮುಖಂಡ ಭೀಮಶಂಕರ್ ಹೊಸಮನಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

---

**ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಸಮೀಕ್ಷೆ ನಡೆಸಿ ರೈತರಿಗೆ ಪರಿಹಾರ ಕೊಡಿಸಲು ಎನ್‌ಡಿಆರ್‌ಎಫ್ ಮಾರ್ಗಸೂಚಿ ಅಡ್ಡಿ**

# ಮಳೆಗೆ ಬೆಳೆ ಹಾನಿ: ರೈತರಿಗೆ ಎನ್‌ಡಿಆರ್‌ಎಫ್ 'ಮಾರ್ಗಸೂಚಿ' ಕಂಟಕ


**• ಉದಯವಾಹಿನಿ ದಾವಣಗೆರೆ**

ರಾಜ್ಯದಾದ್ಯಂತ ಏಪ್ರಿಲ್‌ನಿಂದಲೇ ಆರಂಭವಾಗಿರುವ ವರುಣನ ಅರ್ಭಟಕ್ಕೆ ಸಾವಿರಾರು ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳಿಗೆ ಹಾನಿಯಾಗಿದೆ. ಆದರೆ, ಕೃಷಿ ಹಾಗೂ ತೋಟಗಾರಿಕೆ ಇಲಾಖೆ ಸಮೀಕ್ಷೆ ನಡೆಸಿ ರೈತರಿಗೆ ಪರಿಹಾರ ಕೊಡಿಸಲು ನೈಸರ್ಗಿಕ ವಿಕೋಪ ಪರಿಹಾರ ನಿಧಿ (ಎನ್‌ಡಿಆರ್‌ಎಫ್) ಮಾರ್ಗಸೂಚಿ ಅಡ್ಡಿಯಾಗಿದೆ.

ದಾವಣಗೆರೆ ಜಿಲ್ಲೆಯಲ್ಲೇ ಮಳೆಗೆ ಅಪಾರ ಪ್ರಮಾಣದ ಬೆಳೆ ಹಾನಿಗೀಡಾಗಿದೆ. ಆದರೆ, ಸರ್ಕಾರದ ಸಮೀಕ್ಷೆಯಲ್ಲಿ, 55 ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ಬೆಳೆ ನಷ್ಟವಾಗಿದೆ' ಎಂದು ದಾಖಲಿಸಲಾಗಿದೆ.

ಎನ್‌ಡಿಆರ್‌ಎಫ್ ಮಾರ್ಗಸೂಚಿ ಅನ್ವಯ ಬಿತ್ತನೆ ಮಾಡಲಾದ ಸಂಪೂರ್ಣ ಭೂಪ್ರದೇಶದಲ್ಲಿ ಶೇ 33ಕ್ಕಿಂತ ಅಧಿಕ ಪ್ರಮಾಣದಲ್ಲಿ ಬೆಳೆ ಹಾನಿಗೀಡಾಗಿದ್ದರೆ ಮಾತ್ರ ಪರಿಹಾರ ವಿತರಣೆಗೆ ಅವಕಾಶ ಇದೆ. ಈ ನಿಯಮದಿಂದ ಶೇ 33ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಬೆಳೆ ಹಾನಿಯಾದ ರೈತರಿಗೆ ಸರ್ಕಾರದಿಂದ ಪರಿಹಾರ ಪಡೆಯಲು ಅವಕಾಶವಿಲ್ಲ. ಇದರಿಂದಾಗಿ ಅನ್ನದಾತರು ಪರಿಹಾರದಿಂದ ವಂಚಿತರಾಗುತ್ತಿದ್ದಾರೆ.

ಜಿಲ್ಲೆಯಲ್ಲಿ ಅಡಿಕೆ, ಬಾಳೆ, ತೆಂಗು, ಮಾವು, ಪಪ್ಪಾಯ, ದಾಳಿಂಬೆ ಬೆಳೆಗಳ ಪೈಕಿ ಬಾಳೆ, ಅಡಿಕೆ ಹಾಗೂ ಪಪ್ಪಾಯ ಬೆಳೆಗೆ ಗಾಳಿ ಮತ್ತು ಮಳೆಯಿಂದ ಹೆಚ್ಚಿನ ಪ್ರಮಾಣದ ಹಾನಿಯಾಗಿದೆ. ಆಲಿಕಲ್ಲು ಮಳೆಯಿಂದ ಮಾವಿನ ಫಸಲಿಗೆ ಧಕ್ಕೆಯಾಗಿದೆ.


ಉದಯವಾಹಿನಿ ಚಿತ್ರ

**ಕಟಾವಿನ ನಂತರವೂ ಸಮಸ್ಯೆ**

ಮಳೆಯಿಂದಾಗಿ ಕಟಾವು ಮಾಡಿದ ಭತ್ತವನ್ನು ಉಳಿಸಿಕೊಳ್ಳುವುದೇ ರೈತರಿಗೆ ದೊಡ್ಡ ಸವಾಲಾಗಿದೆ. ಭತ್ತವು ತೇವಾಂಶ ಹೊಂದಿರುವ ಕಾರಣಕ್ಕೆ ಮಾರಾಟ ಮಾಡಲೂ ಆಗುತ್ತಿಲ್ಲ. ಬಿಸಿಲಿಗೆ ಒಣಗಿಸಲು ವರುಣ ಬಿಡುತ್ತಿಲ್ಲ. ಹೀಗಾಗಿ ಎಲ್ಲೆಂದರಲ್ಲಿ ಭತ್ತವನ್ನು ರಾಶಿ ಮಾಡಿ ಮೇಲೆ ತಾಡಪಲ್ ಹೊದಿಸುವುದು ರೈತರಿಗೆ ಅನಿವಾರ್ಯವಾಗಿದೆ. ಕೆಲವೆಡೆ ರಾಶಿ ಮಾಡಿದ ಭತ್ತವು ತೀವ್ರ ತೇವಾಂಶದಿಂದಾಗಿ ಮೊಳಕೆಯೊಡೆದು ಹಾಳಾಗುತ್ತಿದೆ. ಇದರಿಂದಲೂ ರೈತರಿಗೆ ಆರ್ಥಿಕವಾಗಿ ನಷ್ಟ ಉಂಟಾಗುತ್ತಿದೆ. ಭತ್ತದ ಕಟಾವು ಮುಗಿಸಿರುವ ರೈತರು ಹಾಳಾಗುತ್ತಿರುವ ಮೇವನ್ನು ಉಳಿಸಿಕೊಳ್ಳುವ ಸವಾಲನ್ನೂ ಎದುರಿಸುತ್ತಿದ್ದಾರೆ. ಕಟಾವಿನ ನಂತರದ ಹಾನಿಯನ್ನೂ ಪರಿಹಾರಕ್ಕೆ ಪರಿಗಣಿಸಬೇಕು ಎಂಬುದೂ ರೈತರ ಕೋರಿಕೆಯಾಗಿದೆ.

> ಕನಿಷ್ಠ ಶೇ 33ರಷ್ಟು ಹಾನಿಯಾದರೆ ಮಾತ್ರ ಪರಿಹಾರ ನೀಡಬೇಕೆಂಬ ಮಾನದಂಡದಿಂದ ರೈತರಿಗೆ ಅನ್ಯಾಯವಾಗುತ್ತಿದೆ. ಎನ್‌ಡಿಆರ್ ಎಫ್ ಎಸ್‌ಡಿಆರ್‌ಎಫ್ ಮಾನದಂಡ ಬದಲಾವಣೆಗೆ ಸರ್ಕಾರದ ಗಮನಕ್ಕೆ ತಂದರೂ ಪ್ರಯೋಜನವಾಗಿಲ್ಲ.
>
> – ತೇಜಸ್ವಿ ಪಟೇಲ್, ರೈತ ಮುಖಂಡ

**ರೈತರು ಬಿತ್ತನೆಗೆ ಸಿದ್ಧತೆ**

ಮೇಲ್ನೋಟಕ್ಕೆ ಹಾನಿಯು ಶೇ. 33ಕ್ಕಿಂತ ಕಡಿಮೆ ಪ್ರಮಾಣದಲ್ಲಿ ಕಂಡರೂ ದಿನಗಳು ಕಳೆದಂತೆ ಮಳೆಯ ಪ್ರಭಾವ ಸಂಪೂರ್ಣ ಫಸಲನ್ನೇ ಅಪೋಷನ ತೆಗೆದುಕೊಳ್ಳುತ್ತದೆ. ಆದರೆ, ಸಮೀಕ್ಷೆ ವೇಳೆ ಕಡಿಮೆ ಪ್ರಮಾಣದ ಹಾನಿ ಕಂಡುಬರುವುದರಿಂದ ಪರಿಹಾರ ನೀಡಲಾಗದು ಎಂಬುದು ತೋಟಗಾರಿಕೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳ ಹೇಳಿಕೆ.

ಎನ್‌ಡಿಆರ್‌ಎಫ್‌ನ ಮಾರ್ಗಸೂಚಿಯೇ ಅವೈಜ್ಞಾನಿಕವಾಗಿದೆ. ಪ್ರಮಾಣ ಎಷ್ಟೇ ಆದರೂ ಹಾನಿ ಹಾನಿಯೇ. ಮಾನದಂಡವನ್ನು ಬದಲಿಸಿ ಕಡಿಮೆ ಪ್ರಮಾಣದಲ್ಲಿ ಬೆಳೆ ಹಾನಿಯಾದರೂ ಪರಿಹಾರ ವಿತರಿಸಬೇಕು ಎಂದು ರೈತ ಬಿ.ಎಂ.ಸತೀಶ್ ಆಗ್ರಹಿಸಿದ್ದಾರೆ.

ಜೋರು ಮಳೆಯಿಂದಾಗಿ ಕಟಾವಿನ ಹಂತಕ್ಕೆ ಬಂದಿರುವ ಭತ್ತದ ಬೆಳೆ ನೆಲಕಚ್ಚಿದೆ. ಜಿಲ್ಲೆಯಲ್ಲಿ ಅಂದಾಜು 15 ಸಾವಿರದಿಂದ 20 ಸಾವಿರ ಹೆಕ್ಟೇರ್‌ಗೂ ಅಧಿಕ ಪ್ರಮಾಣದಲ್ಲಿ ಭತ್ತದ ಬೆಳೆ ಹಾನಿಗೀಡಾಗಿದೆ. ಕೃಷಿ ಇಲಾಖೆ ಸಿಬ್ಬಂದಿ ಸಮೀಕ್ಷೆ ಕೈಗೊಂಡಿಲ್ಲ. ನಷ್ಟದ ನಿಖರ ಅಂಕಿ–ಅಂಶ ದಾಖಲಿಸುತ್ತಿಲ್ಲ ಎಂದು ಅವರು ದೂರಿದರು.

8 ಎಕರೆಯಲ್ಲಿ ಬೆಳೆದ ಭತ್ತದ ಪೈಕಿ 1 ಎಕರೆಯಷ್ಟು ಬೆಳೆ ಮಳೆಯಿಂದ ಹಾನಿಗೀಡಾಗಿದೆ. ಆದರೆ, ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಪರಿಹಾರ ನೀಡಲು ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳುತ್ತಾರೆ.

ಒಂದೆಡೆ ಭತ್ತದ ದರ ತೀವ್ರ ಪ್ರಮಾಣದಲ್ಲಿ ಕುಸಿದಿದೆ. ಹೀಗಿರುವಾಗ ಪರಿಹಾರವೂ ದೊರೆಯುವುದಿಲ್ಲ ಎಂದಾದರೆ ಮತ್ತಷ್ಟು ನಷ್ಟವಾಗಲಿದೆ' ಎಂದು ದಾವಣಗೆರೆ ತಾಲ್ಲೂಕಿನ ಕೋಳೇನಹಳ್ಳಿ ಗ್ರಾಮದ ಹಾಲಸಿದ್ದಪ್ಪ, ನಾಗರಸನಹಳ್ಳಿಯ ವೆಂಕಟಸುಬ್ಬರಾವ್ ತಿಳಿಸಿದರು.

# ಕಾಂತಾರ ಚಾಪ್ಟರ್ 1 ಬಿಡುಗಡೆ ಫಿಕ್ಸ್



ರಿಷಬ್ ಶೆಟ್ಟಿ ನಟನೆಯ 'ಕಾಂತಾರ ಚಾಪ್ಟರ್ 1' ರಿಲೀಸ್ ಬಗ್ಗೆ ಮತ್ತೊಮ್ಮೆ ಸ್ಪಷ್ಟವಾಗಿ ಹೊಂಬಾಳೆ ಫಿಲಂಸ್ ತಿಳಿಸಿದೆ. ಈ ಚಿತ್ರದ ರಿಲೀಸ್ ಬಗ್ಗೆ ಕೆಲವು ಊಹಾಪೋಹಗಳು ಹರಿದಾಡಿದ ಬೆನ್ನಲ್ಲೇ ಹೊಸ ಪೋಸ್ಟ್ರೊಂದನ್ನು ನಿರ್ಮಾಣ ಸಂಸ್ಥೆ ಹಂಚಿಕೊಂಡಿದೆ.

ಅಕ್ಟೋಬರ್ 2ರಂದು ಕಾಂತಾರ ಚಾಪ್ಟರ್ 1 ರಿಲೀಸ್ ಆಗಲಿದೆ. ಇದರಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ನಿರ್ಮಾಣ ಸಂಸ್ಥೆ ಸ್ಪಷ್ಟನೆ ನೀಡಿದೆ. ಹೊಂಬಾಳೆ ಸಂಸ್ಥೆ ಹಂಚಿಕೊಂಡ ಪೋಸ್ಟ್‌ನಲ್ಲಿ ಕಾಂತಾರ ಚಾಪ್ಟರ್ 1 ಚಿತ್ರದ ಬಿಡುಗಡೆ ದಿನಾಂಕವನ್ನು ಅಕ್ಟೋಬರ್ 2, 2025ಕ್ಕೆ ನಿಗದಿಪಡಿಸಲಾಗಿದೆ ಎಂದು ಹೊಂಬಾಳೆ ಫಿಲಂಸ್ ಈಗಾಗಲೇ ಘೋಷಿಸಿತ್ತು. ಆದರೆ, ಇತ್ತೀಚೆಗೆ ಈ ದಿನಾಂಕದ ಬಗ್ಗೆ ಕೆಲವು ಊಹಾಪೋಹಗಳು ಹರಡಿದ್ದವು. ಈ ಎಲ್ಲಾ ಗೊಂದಲಗಳಿಗೆ ತೆರೆ ಎಳೆದಿರುವ ಹೊಂಬಾಳೆ ಫಿಲಂಸ್, ಬಿಡುಗಡೆ ದಿನಾಂಕದಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಅಧಿಕೃತವಾಗಿ ಸ್ಪಷ್ಟಪಡಿಸಿದೆ.



# ಯೂಟ್ಯೂಬ್ ಸಂದರ್ಶನ ನೀಡಿ ತಗಲಾಕಿಕೊಂಡ ದಾಸ



**ದರ್ಶನ್ ವಿಜಯಲಕ್ಷ್ಮಿಗೆ ಕೋರ್ಟ್ ಸಮನ್ಸ್**

ಕಾನೂನು ಬಾಹಿರವಾಗಿ ವಿದೇಶಿ ಬಾತುಕೋಳಿಗಳನ್ನು ಸಾಕಿದ್ದಕ್ಕೆ ನಟ ದರ್ಶನ್, ವಿಜಯಲಕ್ಷ್ಮಿ ವಿರುದ್ಧ ದೂರು ದಾಖಲಾಗಿದ್ದು ಕೋರ್ಟ್ ಸಮನ್ಸ್ ಜಾರಿ ಮಾಡಿದೆ. ನಿಷೇಧಿತ ಬಾತುಕೋಳಿಗಳನ್ನ ಕೂಡಿಹಾಕಿದ ಆರೋಪದ ಆಡಿ ಅರಣ್ಯ ಇಲಾಖೆ ಅಧಿಕಾರಿ ಗಳು ದರ್ಶನ್, ವಿಜಯಲಕ್ಷ್ಮಿ, ನಾಗರಾಜ್ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯ್ದೆಯ ಅಡಿ ಟಿ.ನರಸೀಪುರದ ಸಿವಿಲ್ ನ್ಯಾಯಾಲಯಕ್ಕೆ ಖಾಸಗಿ ದೂರನ್ನು ನೀಡಿದ್ದರು. ಟಿ.ನರಸೀಪುರ ತಾಲ್ಲೂಕಿನ ಕೆಂಪಯ್ಯನ ಹುಂಡಿಯ ವಿಜಯಲಕ್ಷ್ಮೀ ಮಾಲೀಕತ್ವದ ಜಾಗದಲ್ಲಿರುವ ತೂಗುದೀಪ ಫಾರಂ ಹೌಸ್‌ನಲ್ಲಿ ಅಕ್ರಮವಾಗಿ ವಿದೇಶಿ ಬಾತುಕೋಳಿಗಳನ್ನು ಸಾಕಲಾಗುತ್ತದೆ ಎಂಬ ಆರೋಪ ಕೇಳಿಬಂದಿದೆ. ಬೆಳಕಿಗೆ ಬಂದಿದ್ದು ಹೇಗೆ ದರ್ಶನ್ ಅವರು ಯೂಟ್ಯೂಬ್ ವಾಹಿನಿಯೊಂದಕ್ಕೆ ಸಂದರ್ಶನ ನೀಡಿದ್ದರು. ಈ ಸಂದರ್ಶನದಲ್ಲಿ ಫಾರಂ ಹೌಸ್‌ನಲ್ಲಿರುವ ಪ್ರಾಣಿ, ಪಕ್ಷಿಗಳ ಬಗ್ಗೆ ವಿವರಿಸಿದ್ದರು. ಮಂಗೋಲಿಯಾ, ರಷ್ಯಾ, ಚೀನಾದಲ್ಲಿ ಕಾಣಿಸಿಕೊಳ್ಳುವ ಬಾತುಕೋಳಿಯ ಬಗ್ಗೆ ದರ್ಶನ್ ಮಾತನಾಡಿದ್ದರು.

ಸಂದರ್ಶನ ಪ್ರಕಟವಾಗುತ್ತಿದ್ದಂತೆ ಸಾಮಾಜಿಕ ಜಾಲತಾಣದಲ್ಲಿ ಇದು ಚರ್ಚೆಗೆ ಕಾರಣವಾಗಿತ್ತು. ನಂತರ ಅರಣ್ಯ ಇಲಾಖೆ ಅಧಿಕಾರಿಗಳು ಫಾರಂ ಹೌಸ್ ಮೇಲೆ ದಾಳಿ ನಡೆಸಿದ್ದರು. ಪ್ರಾಥಮಿಕ ತನಿಖೆ ನಡೆಸಿದ ಬಳಿಕ ವರದಿ ಸಮೇತ ಖಾಸಗಿ ದೂರು ನೀಡಿದ್ದರು. ಅರಣ್ಯ ಇಲಾಖೆ ಅಧಿಕಾರಿಗಳ ತನಿಖೆಯಲ್ಲಿ ಮೇಲ್ನೋಟಕ್ಕೆ ಆರೋಪ ಸಾಬೀತಾಗಿರುವ ಕಾರಣ ಕೋರ್ಟ್ ಸಮನ್ಸ್ ಜಾರಿ ಮಾಡಿ ಜುಲೈ 4 ರಂದು ದರ್ಶನ್, ವಿಜಯಲಕ್ಷ್ಮಿ ಮತ್ತು ನಾಗರಾಜ್‌ಗೆ ಖುದ್ದು ಹಾಜರಾಗುವಂತೆ ಸಮನ್ಸ್ ಜಾರಿ ಮಾಡಿದೆ. ದಾಳಿ ವೇಳೆ ಬಾರ್ ಹೆಡೆಡ್ ಗೂಸ್ ಹೆಚ್ಚಾಗಿ ಮಧ್ಯ ಏಷ್ಯಾ ಪ್ರದೇಶದ್ದಾಗಿದ್ದು ವಲಸೆ ಬಂದಿದ್ದವು. ಇವುಗಳನ್ನು ಸಾಕುವುದು ವನ್ಯಜೀವಿ ಸಂರಕ್ಷಣೆಯ ಕಾಯ್ದೆಯಡಿ ಅಪರಾಧವಾಗಿದೆ. ಅರಣ್ಯ ಅಧಿಕಾರಿಗಳು ಪ್ರಶ್ನಿಸಿದಾಗ ಈ ಬಾತುಕೋಳಿಗಳನ್ನು ಸ್ನೇಹಿತರು ನೀಡಿದ್ದರು ಎಂಬ ಉತ್ತರ ದರ್ಶನ್ ಕಡೆಯಿಂದ ಬಂದಿತ್ತು.

# ನಿರ್ದೇಶಕರಿಗೆ ದುಬಾರಿ ವಾಚ್ ಗಿಫ್ಟ್



ಮೆಗಾಸ್ಟಾರ್ ಚಿರಂಜೀವಿಯವರ ಸ್ವಭಾವದ ಬಗ್ಗೆ ವಿಶೇಷವಾಗಿ ಹೇಳಬೇಕಾಗಿಲ್ಲ. ಅವರಿಗೆ ಒಮ್ಮೆ ಒಬ್ಬ ವ್ಯಕ್ತಿ ಇಷ್ಟವಾದರೆ, ಆ ಸ್ನೇಹವನ್ನು ತಮ್ಮ ಜೀವನದುದ್ದಕ್ಕೂ ಹೃದಯದಲ್ಲಿಟ್ಟುಕೊಂಡು ಕಾಪಾಡುತ್ತಾರೆ. ಅದಕ್ಕೆ ಉದಾಹರಣೆ ಎಂಬಂತೆ ಬ್ಲಾಕ್ ಬಸ್ಟರ್ ಸಿನಿಮಾ ನೀಡಿದ ಟಾಲಿವುಡ್ ನಿರ್ದೇಶಕರಿಗೆ ಅಚ್ಚರಿಯ ಗಿಫ್ಟ್ ಕೊಟ್ಟಿದ್ದಾರೆ. ಚಿರಂಜೀವಿ ನಿರ್ದೇಶಕ ಬಾಬಿಯವರಿಗೆ ವಿಶೇಷ ಗಿಫ್ಟ್ ನೀಡಿದ್ದಾರೆ. ಈ ವಾಚಿನ ಬೆಲೆ ಸುಮಾರು 6-10 ಲಕ್ಷ ರೂ. ಮೌಲ್ಯದ್ದು ಎನ್ನಲಾಗಿದೆ. ಒಮೆಗಾ ಸೀಮಾಸ್ಟರ್ ವಾಚ್ ಇದಾಗಿದ್ದು, ಈ ವಿಚಾರವನ್ನು ನಿರ್ದೇಶಕ ಬಾಬಿಯವರೇ ಸೋಶಿಯಲ್ ಮೀಡಿಯಾದಲ್ಲಿ ಹಂಚಿಕೊಂಡಿದ್ದಾರೆ. ಪೋಸ್ಟ್‌ನಲ್ಲಿ, ಚಿರಂಜೀವಿ ಗಾರು ಅವರಿಂದ ಒಂದು ಅಚ್ಚರಿಯ ಉಡುಗೊರೆ ಸಿಕ್ಕಿದೆ. ಈ ಉಡುಗೊರೆಗೆ ನಾನು ಬೆಲೆ ಕಟ್ಟಲು ಸಾಧ್ಯವಿಲ್ಲ. ಧನ್ಯವಾದಗಳು ಸಹೋದರ ಈ ಕ್ಷಣವನ್ನು ನಾನು ಸದಾ ನೆನಪಲ್ಲಿಟ್ಟುಕೊಳ್ಳುತ್ತೇನೆ ಎಂದು ಬರೆದುಕೊಂಡಿದ್ದಾರೆ. ಕೈಯಲ್ಲಿ ವಾಚ್ ಧರಿಸಿರುವ ಫೋಟೋಗಳನ್ನು ಸಹ ಬಾಬಿ ಹಂಚಿಕೊಂಡಿದ್ದಾರೆ. ಈ ಪೋಸ್ಟ್ ಈಗ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಅದನ್ನು ನೋಡಿದವರೆಲ್ಲರೂ, ಚಿರಂಜೀವಿಯ ಸ್ನೇಹಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ. ಚಿರಂಜೀವಿ ಪ್ರಸ್ತುತ ವಿಶ್ವಂಭರ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಬಿಂಬಿಸಾರ ಖ್ಯಾತಿಯ ವಶಿಷ್ಠ ನಿರ್ದೇಶನ ಮಾಡುತ್ತಿರುವ ಈ ಚಿತ್ರದಲ್ಲಿ ತ್ರಿಷಾ ನಾಯಕಿಯಾಗಿ ನಟಿಸುತ್ತಿದ್ದಾರೆ. ಈ ಚಿತ್ರ ಶೀಘ್ರದಲ್ಲೇ ಬಿಡುಗಡೆಯಾಗಲಿದೆ. ಇದರ ಜೊತೆಗೆ ಚಿರಂಜೀವಿ ಬ್ಲಾಕ್‌ಬಸ್ಟರ್ ನಿರ್ದೇಶಕ ಅನಿಲ್ ರವಿಪುಡಿ ನಿರ್ದೇಶನದಲ್ಲಿ ಒಂದು ಸಿನಿಮಾ ಕೂಡ ಮಾಡುತ್ತಿದ್ದಾರೆ. ಈ ಚಿತ್ರದ ಚಿತ್ರೀಕರಣ ಶೀಘ್ರದಲ್ಲೇ ಪ್ರಾರಂಭವಾಗಲಿದೆ. ಈ ಚಿತ್ರದಲ್ಲಿ ಲೇಡಿ ಸೂಪರ್ ಸ್ಟಾರ್ ನಯನತಾರಾ ನಾಯಕಿಯಾಗಿ ನಟಿಸುತ್ತಿದ್ದಾರೆ.

# ಸೊಸೆ ಸಮಂತಾ ಮಾತಿಗೆ ಅಮಲಾ ಚಪ್ಪಾಳೆ

ನಟಿ ಸಮಂತಾ ಮತ್ತು ಮಾಜಿ ಅತ್ತೆ ಅಮಲಾ ಒಂದೇ ಕಾರ್ಯಕ್ರಮದಲ್ಲಿ ಕಾಣಿಸಿಕೊಂಡಿರೋದು ಅಭಿಮಾನಿಗಳಿಗೆ ಕುತೂಹಲ ಮೂಡಿಸಿದೆ. ಸಮಂತಾ ಭಾಷಣಕ್ಕೆ ಅಮಲಾ ಚಪ್ಪಾಳೆ ಹೊಡೆದಿರುವ ವಿಡಿಯೋ ವೈರಲ್ ಆಗಿದೆ. ಸಮಂತಾ ಚಿತ್ರರಂಗಕ್ಕೆ ಎಂಟ್ರಿ ಕೊಟ್ಟು 15 ವರ್ಷಗಳಾಗಿವೆ. ಇಂದಿಗೂ ನಟಿಗೆ ಫ್ಯಾನ್ಸ್ ಕ್ರೇಜ್ ಇದೆ. ಹೀಗಾಗಿ ನಟಿಯ ಸಾಧನೆಗೆ ಜೀ ತೆಲುಗು ಅವಾರ್ಡ್ಸ್ ಕಾರ್ಯಕ್ರಮದಲ್ಲಿ 'ಕ್ವೀನ್ ಆಫ್ ಸಿಲ್ವರ್ ಸ್ಕ್ರೀನ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಕಾರ್ಯಕ್ರಮದಲ್ಲಿ ಅವರ ಮಾಜಿ ಅತ್ತೆ ಅಮಲಾ ಕೂಡ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಮಂತಾ ಮಾತನಾಡಿ, ತೆಲುಗು ಚಿತ್ರರಂಗ ನನಗೆ ಎಲ್ಲಾವನ್ನೂ ನೀಡಿದೆ. ಇದೇ ನನ್ನ ಕರ್ಮ ಭೂಮಿ. ತೆಲುಗು ಪ್ರೇಕ್ಷಕರಿಗೆ ಯಾವಾಗಲೂ ನಾನು ಮೊದಲ ಸ್ಥಾನ ಕೊಡುತ್ತೇನೆ ಎಂದು ಭಾವುಕವಾಗಿ ಸಮಂತಾ ಮಾತನಾಡಿದರು. ಈ ವೇಳೆ ಸ್ಯಾಮ್ ಮಾತಿಗೆ, ಅಮಲಾ ನಗು ನಗುತ್ತಾ ಚಪ್ಪಾಳೆ ತಟ್ಟಿದ್ದಾರೆ. ಅಂದಹಾಗೆ, 2010ರಲ್ಲಿ 'ಯೇ ಮಾಯಾ ಚೇಸಾವೆ' ಚಿತ್ರದ ಮೂಲಕ ನಾಗಚೈತನ್ಯಗೆ ನಾಯಕಿ ಸಮಂತಾ ನಟಿಸಿದರು. ಇಲ್ಲಿಯೇ ನಾಗಚೈತನ್ಯರನ್ನು ನಟಿ ಮೊದಲು ಭೇಟಿಯಾದರು. ಈ ಪರಿಚಯ ಪ್ರೀತಿಗೆ ತಿರುಗಿ ಮದುವೆಗೆ ಮುನ್ನಡಿ ಬರೆದಿತ್ತು. 2017ರಲ್ಲಿ ಇಬ್ಬರೂ ಮದುವೆಯಾದರು. ಕೆಲ ಮನಸ್ತಾಪಗಳಿಂದ 2021ರಲ್ಲಿ ಡಿವೋರ್ಸ್ ಪಡೆದರು.

# ಬಿಗ್ ಆಫರ್ ಗಿಟ್ಟಿಸಿಕೊಂಡ ಕನ್ನಡತಿ





**ಪ್ರಭಾಸ್‌ಗೆ ರುಕ್ಮಿಣಿ ವಸಂತ್ ನಾಯಕಿ**

ಕನ್ನಡದ ನಟಿ ರುಕ್ಮಿಣಿ ವಸಂತ್ ಅವರಿಗೆ ಸೌತ್‌ನಲ್ಲಿ ಬೇಡಿಕೆ ಹೆಚ್ಚಾಗಿದೆ. ಪ್ರಭಾಸ್ ನಟನೆಯ 'ಸ್ಪಿರಿಟ್' ಚಿತ್ರಕ್ಕೆ ರುಕ್ಮಿಣಿ ವಸಂತ್ ನಾಯಕಿಯಾಗಿ ಆಯ್ಕೆಯಾಗಿದ್ದಾರೆ ಎನ್ನಲಾದ ಸುದ್ದಿಯೊಂದು ಹರಿದಾಡುತ್ತಿದೆ. 'ಭೈರತಿ ರಣಗಲ್, ಭಘೀರ' ಸಿನಿಮಾದ ಬಳಿಕ ರುಕ್ಮಿಣಿ ವಸಂತ್‌ಗೆ ತೆಲುಗು, ತಮಿಳಿನಿಂದ ಭರ್ಜರಿ ಆಫರ್ಸ್ ಅರಸಿ ಬರುತ್ತಿವೆ. ಪ್ರಭಾಸ್ ಜೊತೆ ನಟಿಸುವ ಆಫರ್ ರುಕ್ಮಿಣಿಗೆ ಸಿಕ್ಕಿದೆಯಂತೆ. ಮೊದಲಿಗೆ ಸ್ಪಿರಿಟ್ ಸಿನಿಮಾಗೆ ದೀಪಿಕಾ ಪಡುಕೋಣೆ ಆಯ್ಕೆ ಆಗಿದ್ದರು. ಆದರೆ ಅವರು ಹೆಚ್ಚಿನ ಸಂಭಾವನೆ ಕೇಳಿದ್ದಕ್ಕೆ ರುಕ್ಮಿಣಿ ಅವರನ್ನು ನಟಿಸಲು ಕೇಳಲಾಗಿದೆ ಎಂಬ ಸುದ್ದಿ ಹರಿದಾಡುತ್ತಿದೆ. ಒಟ್ನಲ್ಲಿ ಕನ್ನಡದ ನಟಿಯನ್ನ ಪ್ರಭಾಸ್ ಜೊತೆಗೆ ನೋಡಲು ಫ್ಯಾನ್ಸ್ ಕಾಯ್ತಿದ್ದಾರೆ. ವಿಜಯ್ ಸೇತುಪತಿ, ರುಕ್ಮಿಣಿ ನಟನೆಯ 'ಏಸ್' ಚಿತ್ರ ಶುಕ್ರವಾರ ರಿಲೀಸ್ ಆಗಿದೆ. ಅಮರನ್ ನಟ ಶಿವಕಾರ್ತಿಕೇಯನ್ ಜೊತೆಗಿನ 'ಮದರಾಸಿ' ಚಿತ್ರದಲ್ಲಿ ನಟಿಸುತ್ತಿದ್ದಾರೆ. ರಾಮ್ ಚರಣ್ ಜೊತೆಗೆ ನಟಿಸಲು ಕೂಡ ನಟಿಯ ಜೊತೆ ಮಾತುಕತೆ ಆಗಿದೆ ಎನ್ನಲಾಗಿದೆ.

ಕರ್ನಾಟಕದಿಂದ ರಶ್ಮಿಕಾ ಮಂದಣ್ಣ, ಶ್ರೀಲೀಲಾ ಅವರಂತೆಯೇ ರುಕ್ಮಿಣಿ ವಸಂತ್ ಕೂಡ ಸಕ್ಸಸ್‌ಗಾಗಿ ಸಿನಿಮಾ ಆಯ್ಕೆಯಲ್ಲಿ ಚ್ಯುಸಿಯಾಗಿದ್ದಾರೆ. ಹೀಗೆ ಸೌತ್‌ನಿಂದ ಸಾಕಷ್ಟು ಸಿನಿಮಾ ಅವಕಾಶಗಳು ನಟಿಯನ್ನು ಅರಸಿ ಬರುತ್ತಿವೆ.

# ಸೋತರೂ ತನ್ನ ನಿರ್ಧಾರ ಸಮರ್ಥಿಸಿಕೊಂಡ ಗಿಲ್

ಇಂಡಿಯನ್ ಪ್ರೀಮಿಯರ್ ಲೀಗ್ 2025 ರ 64 ನೇ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವು ಲಕ್ನೋ ಸೂಪರ್‌ಜೈಂಟ್ಸ್ ವಿರುದ್ಧ 33 ರನ್‌ಗಳ ಹೀನಾಯ ಸೋಲು ಅನುಭವಿಸಿತು. ಎರಡೂ ತಂಡಗಳ ನಡುವಿನ ಈ ಪಂದ್ಯ ಅಹಮದಾಬಾದ್‌ನ ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದಿತ್ತು. ಪಂದ್ಯದಲ್ಲಿ, ಗುಜರಾತ್ ನಾಯಕ ಶುಭ್‌ಮನ್ ಗಿಲ್ ಟಾಸ್ ಗೆದ್ದ ನಂತರ ಮೊದಲು ಬೌಲಿಂಗ್ ಮಾಡಲು ನಿರ್ಧರಿಸಿದರು, ಆದರೆ ಅದು ಅಂದುಕೊಂಡಂತೆ ಸಾಗಲಿಲ್ಲ. ಹೀಗಿದ್ದರೂ ನಾಯಕ ಗಿಲ್ ಪಂದ್ಯದ ನಂತರ ತಮ್ಮ ನಿರ್ಧಾರವನ್ನು ಸಮರ್ಥಿಸಿಕೊಳ್ಳುತ್ತಿರುವುದು ಕಂಡುಬಂತು.



**ಬೌಲಿಂಗ್ ಮಾಡುವ ನಿರ್ಧಾರ ತಪ್ಪಿಲ್ಲ**

ಲಕ್ನೋ ವಿರುದ್ಧದ ಸೋಲಿನ ನಂತರ ಶುಭ್‌ಮನ್ ಗಿಲ್ ತುಂಬಾ ನಿರಾಶೆಗೊಂಡಿದ್ದರು, ಆದರೆ ಮೊದಲು ಬೌಲಿಂಗ್ ಮಾಡುವ ನಿರ್ಧಾರದ ಬಗ್ಗೆ ಮಾತನಾಡಿದ ಅವರು, ಈ ನಿರ್ಧಾರ ತಪ್ಪಲ್ಲ ಎಂದು ಹೇಳಿದರು. ನಾವು ಬೌಲಿಂಗ್‌ನಲ್ಲಿ 15-20 ಹೆಚ್ಚುವರಿ ರನ್‌ಗಳನ್ನು ನೀಡಿದ್ದೇವೆ. ಅವರು 215-220 ರನ್‌ಗಳನ್ನು ಗಳಿಸುತ್ತಾರೆಂದು ನಾವು ನಿರೀಕ್ಷಿಸಿದ್ದೆವು. ಮೊದಲು ಬೌಲಿಂಗ್ ಮಾಡುವ ನಿರ್ಧಾರ ತಪ್ಪಾಗಿರಲಿಲ್ಲ ಮತ್ತು ನಾವು ಪವರ್‌ಪ್ಲೇನಲ್ಲಿ ಚೆನ್ನಾಗಿ ಬೌಲಿಂಗ್ ಮಾಡಿದೆವು. ಈ ಪಂದ್ಯದಲ್ಲಿ ಶಾರುಖ್ ಮತ್ತು ರುದರ್ಫೋರ್ಡ್ ಬ್ಯಾಟಿಂಗ್ ಮಾಡಿದ ರೀತಿ ನಮಗೆ ಸಕಾರಾತ್ಮಕವಾಗಿತ್ತು. ಮುಂದಿನ ಪಂದ್ಯದಲ್ಲಿ ನಾವು ಮತ್ತೆ ಹಳೆ ವೇಗ ಪಡೆಯಲು ಪ್ರಯತ್ನಿಸುತ್ತೇವೆ'' ಎಂದು ಗಿಲ್ ಪೋಸ್ಟ್ ಮ್ಯಾಚ್ ಪ್ರೆಸೆಂಟೇಷನ್ ವೇಳೆ ಹೇಳಿದ್ದಾರೆ.

ಗುಜರಾತ್ ವಿರುದ್ಧದ ಈ ಪಂದ್ಯದಲ್ಲಿ, ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ತಂಡವು ಉತ್ತಮ ಆರಂಭವನ್ನು ಪಡೆಯಿತು. ಲಕ್ನೋ ಪರ, ಮಿಚೆಲ್ ಮಾರ್ಷ್ ಮತ್ತು ಐಡೆನ್ ಮಾರ್ಕ್ರಾಮ್ ಮೊದಲ ವಿಕೆಟ್‌ಗೆ 91 ರನ್‌ಗಳ ಜೊತೆಯಾಟ ಆಡಿದರು. ಮಾರ್ಕ್ರಾಮ್ 24 ಎಸೆತಗಳಲ್ಲಿ 36 ರನ್ ಗಳಿಸಿ ಔಟಾದರು, ಆದರೆ ಮಾರ್ಷ್ ಏಕಾಂಗಿಯಾಗಿ ತಂಡದ ಕೋಟೆಯನ್ನು ಹಿಡಿದು 56 ಎಸೆತಗಳಲ್ಲಿ ಶತಕ ಗಳಿಸಿದರು.

# ಆರ್‌ಸಿಬಿಗೆ ಸೋಲಿನ ಶಾಕ್ ನೀಡಿದ ಹೈದರಾಬಾದ್



**94 ರನ್‌ಗಳ ಕಾಣಿಕೆ**

ಜಿದ್ದಾಜಿದ್ದಿಯಲ್ಲಿ ಲಕ್ನೋದ ಏಕಾನಾ ಸ್ಟೇಡಿಯಂ ಮತ್ತೊಂದು ರೋಚಕ ಪಂದ್ಯಕ್ಕೆ ಸಾಕ್ಷಿಯಾಗಿದೆ. ಬೆಂಗಳೂರು ರಾಯಲ್ ಚಾಲೆಂಜರ್ಸ್ ವಿರುದ್ಧ ಸನ್‌ರೈಸರ್ಸ್ ಹೈದರಾಬಾದ್ 42 ರನ್‌ಗಳಿಂದ ಗೆದ್ದು ಬೀಗಿದೆ. ಎಸ್‌ಆರ್‌ಎಚ್ ಬಿಗ್ ಟಾರ್ಗೆಟ್ ಬೆನ್ನು ಹತ್ತಿದ್ದ ಆರ್‌ಸಿಬಿ ಮತ್ತೆ ಟೇಬಲ್ ಟಾಪರ್ ಆಗುವ ಅವಕಾಶವನ್ನು ಮಿಸ್ ಮಾಡಿಕೊಂಡಿದೆ. ಟಾಸ್ ಗೆದ್ದ ಎಸ್‌ಆರ್‌ಎಚ್ ಇವತ್ತು ಬೌಲಿಂಗ್ ಆಯ್ಕೆ ಮಾಡಿಕೊಂಡು ಸನ್ ರೈಸರ್ಸ್ ಹೈದರಾಬಾದ್‌ಗೆ ಮೊದಲು ಬ್ಯಾಟಿಂಗ್ ಮಾಡುವ ಅವಕಾಶ ನೀಡಿತು. ಆರಂಭದಲ್ಲಿ ಆರ್‌ಸಿಬಿ ಬೌಲರ್ಸ್ ಹೈದರಾಬಾದ್ ಆಟಗಾರರನ್ನ ಕಟ್ಟಿ ಹಾಕಲು ಸರ್ವ ಪ್ರಯತ್ನ ಮಾಡಿದರು.

ಅಭಿಷೇಕ್ ಶರ್ಮಾ 34, ಟ್ರಾವಿಸ್ ಹೆಡ್ 17 ರನ್‌ಗಳಿಗೆ ಔಟ್ ಆದರು. ಸನ್ ರೈಸರ್ಸ್ ಹೈದರಾಬಾದ್ ಸಂಕಷ್ಟದಲ್ಲಿದ್ದಾಗ ಇಶಾನ್ ಕಿಶನ್ ಅವರು ತಂಡಕ್ಕೆ ನೆರವಾದರು. ಇಶಾನ್ ಕಿಶನ್ ಅವರು ಭರ್ಜರಿ ಅರ್ಧ ಶತಕದೊಂದಿಗೆ 5 ಸಿಕ್ಸರ್, 7 ಬೌಂಡರಿಗಳನ್ನ ಸಿಡಿಸಿದರು. ಕೊನೇ ಓವರ್‌ವರೆಗೂ ಕ್ರೀಸ್‌ನಲ್ಲಿ ಉಳಿದ ಇಶಾನ್ ಕಿಶನ್ ಅವರು 94 ರನ್‌ಗಳ ಕಾಣಿಕೆ ನೀಡಿದರು.ಇಶಾನ್ ಕಿಶನ್ ಅವರ ಅಮೋಘ ಬ್ಯಾಟಿಂಗ್‌ನಿಂದ ಸನ್ ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 231 ರನ್ ಗಳಿಸಿತು. ಆರ್‌ಸಿಬಿಗೆ 232 ರನ್‌ಗಳ ಬೃಹತ್ ಟಾರ್ಗೆಟ್ ನೀಡಲಾಗಿತ್ತು.

223 ರನ್‌ಗಳ ಟಾರ್ಗೆಟ್ ಬೆನ್ನತ್ತಿದ್ದ ಬೆಂಗಳೂರು ರಾಯಲ್ ಚಾಲೆಂಜರ್ಸ್‌ಗೆ ವಿರಾಟ್ ಕೊಹ್ಲಿ ಭರ್ಜರಿ ಓಪನಿಂಗ್ ನೀಡಿದರು. 7 ಬೌಂಡರಿ 1 ಸಿಕ್ಸರ್ ಸಿಡಿಸಿದ ವಿರಾಟ್ ಕೊಹ್ಲಿ ಅಭಿಮಾನಿಗಳನ್ನ ರಂಜಿಸಿದರು. 43 ರನ್‌ಗಳಿಗೆ ಕೊಹ್ಲಿ ಔಟ್ ಆಗುತ್ತಿದ್ದಂತೆ ಫಿಲ್ ಸಾಲ್ಟ್ ಅವರು ಆರ್‌ಸಿಬಿಗೆ ಆಸರೆಯಾದರು. 5 ಸಿಕ್ಸರ್ 4 ಬೌಂಡರಿಯನ್ನು ಸಿಡಿಸಿದ ಫಿಲ್ ಸಾಲ್ಟ್ ಭರ್ಜರಿ ಅರ್ಧಶತಕವನ್ನು ಪೂರೈಸಿದರು. ಇದಾದ ಮೇಲೆ ಮಯಾಂಕ್ ಅಗರ್ವಾಲ್ ಅವರು 11, ರಜತ್ ಪಾಟೀದಾರ್ 18 ರನ್‌ಗಳಿಗೆ ಔಟ್ ಆದರು. ರೋಮರಿಯೋ ಶೆಪರ್ಡ್ ಅವರು ಶೂನ್ಯ, ಹಾಗೂ ಆರ್‌ಸಿಬಿ ನಾಯಕ ಜಿತೇಶ್ ಶರ್ಮಾ ಅವರು ಕೂಡ 24 ರನ್‌ಗೆ ತನ್ನ ವಿಕೆಟ್ ಒಪ್ಪಿಸಿದರು. ಸನ್‌ರೈಸರ್ಸ್ ಹೈದರಾಬಾದ್ ಪರ ಇಶಾನ್ ಕಿಶನ್ ಅದ್ಭುತ ಬ್ಯಾಟಿಂಗ್ ಪ್ರದರ್ಶನ ಮಾಡಿ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿದರು. ಬೆಂಗಳೂರು ರಾಯಲ್ ಚಾಲೆಂಜರ್ಸ್ ತಂಡಕ್ಕೆ ಬ್ಯಾಟಿಂಗ್ ಹಾಗೂ ಗಾಯದ ಸಮಸ್ಯೆ ದೊಡ್ಡ ಸವಾಲಾಗಿದೆ.

# ರಾಜಸ್ಥಾನ್ ತೊರೆದು ಸಿಎಸ್‌ಕೆ ಸೇರ್ತಾರಾ ಸಂಜು



ಐಪಿಎಲ್ 2025ರಲ್ಲಿ ರಾಜಸ್ಥಾನ್ ರಾಯಲ್ಸ್ ತಂಡದ ಪ್ರದರ್ಶನ ವಿಶೇಷವೇನು ಆಗಿರಲಿಲ್ಲ. ಸತತ ಸೋಲುಗಳ ಫಲವಾಗಿ ತಂಡಕ್ಕೆ ಪ್ಲೇಆಫ್ ತಲುಪಲು ಕೂಡ ಸಾಧ್ಯವಾಗಲಿಲ್ಲ. ಅಂತಹ ಪರಿಸ್ಥಿತಿಯಲ್ಲಿ, ರಾಜಸ್ಥಾನ ರಾಯಲ್ಸ್ ತಂಡವು ಮುಂದಿನ ಸೀಸನ್‌ನಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಂಡು ಅಖಾಡಕ್ಕಿಳಿಯಲು ಚಿಂತಿಸಿದೆ ಎಂದು ವರದಿಯಾಗಿದೆ. ಇದರ ನಡುವೆ ರಾಜಸ್ಥಾನ್ ರಾಯಲ್ಸ್ ತಂಡದ ಪ್ರಸ್ತುತ ನಾಯಕ ಸಂಜು ಸ್ಯಾಮ್ಸನ್ ಬಗ್ಗೆ ಒಂದು ಸುದ್ದಿ ಹರಿದಾಡುತ್ತಿದ್ದು, ಕೆಲವು ಸೋಶಿಯಲ್ ಮೀಡಿಯಾ ಪೋಸ್ಟ್‌ಗಳು ಮತ್ತು ವರದಿಗಳ ಪ್ರಕಾರ ಸಂಜು ಸ್ಯಾಮ್ಸನ್ ಅವರ ಚೆನ್ನೈ ಸೂಪರ್ ಕಿಂಗ್ಸ್ ಜೊತೆಗಿನ ಒಪ್ಪಂದ ಬಹುತೇಕ ದೃಢಪಟ್ಟಿದ್ದು, ಮುಂದಿನ ಸೀಸನ್‌ನಿಂದ ಅವರು ಸಿಎಸ್‌ಕೆ ಹಳದಿ ಜೆರ್ಸಿಯಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆ ಇದೆ ಎಂದು ಹೇಳುತ್ತಿವೆ. ಆದರೆ ಈ ವರದಿಯಲ್ಲಿ ಎಷ್ಟು ನಿಜಾಂಶವಿದೆ ಎಂಬುದು ಇನ್ನಷ್ಟೇ ಹೊರಬರಬೇಕಿದೆ.

> **ಗಾಯಕ್ಕೆ ತುತ್ತಾಗಿದ್ದ ಸಂಜು**
>
> **ಈ ಸೀಸನ್‌ನಲ್ಲಿ ರಾಜಸ್ಥಾನ್ ರಾಯಲ್ಸ್ ಕೇವಲ 4 ಪಂದ್ಯಗಳನ್ನು ಮಾತ್ರ ಗೆದ್ದಿದ್ದು, 10 ಪಂದ್ಯಗಳಲ್ಲಿ ಸೋಲನ್ನು ಎದುರಿಸಬೇಕಾಯಿತು. ಇದರ ಜೊತೆಗೆ ನಾಯಕ ಸಂಜು ಸ್ಯಾಮ್ಸನ್ ಗಾಯದಿಂದಾಗಿ ಕೇವಲ 9 ಪಂದ್ಯಗಳನ್ನು ಮಾತ್ರ ಆಡಿದ್ದರು. ಆಡಿದ ಕೆಲವು ಪಂದ್ಯಗಳಲ್ಲಿ ಅವರು ಕೇವಲ ಬ್ಯಾಟಿಂಗ್ ಮಾತ್ರ ಮಾಡಿದ್ದರು. ಇದು ರಾಜಸ್ಥಾನದ ಆಟದ ಮೇಲೂ ಪರಿಣಾಮ ಬೀರಿತು. ಆದಾಗ್ಯೂ, ಆರ್‌ಆರ್ ತಂಡವು ಈಗ ಈ ಸೀಸನ್‌ನ ಸೋಲನ್ನು ಮರೆತು ಬಲವಾದ ಪುನರಾಗಮನ ಮಾಡಲು ಬಯಸುತ್ತಿದೆ.**

ವಾಸ್ತವವಾಗಿ, ಐಪಿಎಲ್‌ನಲ್ಲಿ ಟ್ರೇಡ್ ವಿಂಡೋ ಪ್ರಸ್ತುತ ಸೀಸನ್ ಅಂತ್ಯವಾದ 7 ದಿನಗಳ ನಂತರದಿಂದ ಮುಂದಿನ ಸೀಸನ್‌ನ ಹರಾಜಿಗೆ 7 ದಿನಗಳ ಬಾಕಿ ಇರುವವರೆಗೆ ತೆರೆದಿರುತ್ತದೆ. ಈ ಅವಧಿಯಲ್ಲಿ, ಎಲ್ಲಾ ತಂಡಗಳು ತಮ್ಮ ಆಟಗಾರರನ್ನು ವಿನಿಮಯ ಮಾಡಿಕೊಳ್ಳಬಹುದು.

ಆ ಪ್ರಕಾರ, ಸಂಜು ಸ್ಯಾಮ್ಸನ್ ಅವರನ್ನು ಸಿಎಸ್‌ಕೆಗೆ ಕರೆತರಲು ಮಾತುಕತೆ ನಡೆಯುತ್ತಿದೆ. ಎಲ್ಲಾವೂ ಸರಿಯಾಗಿ ನಡೆದರೆ, ಮುಂದಿನ ಸೀಸನ್‌ನಲ್ಲಿ ಅವರು ಸಿಎಸ್‌ಕೆ ತಂಡದ ಭಾಗವಾಗುತ್ತಾರೆ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಲಾಗುತ್ತಿದೆ. ಇದರ ಜೊತೆಗೆ ಕೆಲವು ನೆಟ್ಟಿಗರು, ರಾಜಸ್ಥಾನ್ ರಾಯಲ್ಸ್‌ನ ಡ್ರೆಸ್ಸಿಂಗ್ ಕೋಣೆಯಲ್ಲಿ ಎಲ್ಲಾವೂ ಸರಿಯಾಗಿಲ್ಲ, ಇದರಿಂದಾಗಿ ಸಂಜು ತಂಡವನ್ನು ತೊರೆಯಬೇಕಾಗಬಹುದು ಎಂದು ಹೇಳಿಕೊಂಡಿದ್ದಾರೆ.

**ವರ್ಷಗಳಿಂದ ರಾಜಸ್ಥಾನ್ ಜೊತೆಗೆ ನಂಟು:** ಸಂಜು ಸ್ಯಾಮ್ಸನ್ 2013ರಲ್ಲಿ ರಾಜಸ್ಥಾನ್ ರಾಯಲ್ಸ್ ಜೊತೆ ತಮ್ಮ ಐಪಿಎಲ್ ವೃತ್ತಿಜೀವನವನ್ನು ಪ್ರಾರಂಭಿಸಿದರು. ಆ ನಂತರ ಇತರ ತಂಡಗಳ ಪರ ಆಡಿದ್ದ ಸಂಜು, 2018ರಲ್ಲಿ ಮತ್ತೆ ರಾಜಸ್ಥಾನ್ ತಂಡವನ್ನು ಸೇರಿಕೊಂಡರು. ಆ ಬಳಿಕ ಅವರನ್ನು 2021ರಲ್ಲಿ ಈ ತಂಡದ ನಾಯಕರನ್ನಾಗಿ ನೇಮಿಸಲಾಯಿತು. ಅವರ ನಾಯಕತ್ವದಲ್ಲೇ 2022ರಲ್ಲಿ ತಂಡ ಫೈನಲ್‌ಗೇರಿತ್ತು. ಹೀಗಾಗಿ ಸಂಜುರನ್ನು ತಂಡದಿಂದ ಕೈಬಿಡುವ ಸಾಧ್ಯತೆಗಳಿಲ್ಲ. ಆದಾಗ್ಯೂ, ಈಗ ಹರಿದಾಡುತ್ತಿರುವ ಸುದ್ದಿಗಳನ್ನು ಸಹ ತಳ್ಳಿ ಹಾಕುವಂತಿಲ್ಲ.

# ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳಿದ ಲೆಜೆಂಡರಿ ಕ್ರಿಕೆಟಿಗ

ಇತ್ತೀಚೆಗಷ್ಟೇ ಟೀಂ ಇಂಡಿಯಾ ನಾಯಕ ರೋಹಿತ್ ಶರ್ಮಾ ಮತ್ತು ಸ್ಟಾರ್ ಬ್ಯಾಟ್ಸ್‌ಮನ್ ವಿರಾಟ್ ಕೊಹ್ಲಿ ಟೆಸ್ಟ್ ಮಾದರಿಗೆ ನಿವೃತ್ತಿ ಘೋಷಿಸಿದ್ದರು. ಈಗ ಮತ್ತೊಬ್ಬ ಶ್ರೇಷ್ಠ ಆಟಗಾರ ಟೆಸ್ಟ್ ಸ್ವರೂಪಕ್ಕೆ ವಿದಾಯ ಹೇಳಿದ್ದಾರೆ. ಶ್ರೀಲಂಕಾದ ಆಲ್‌ರೌಂಡರ್ ಏಂಜೆಲೊ ಮ್ಯಾಥ್ಯೂಸ್ ಟೆಸ್ಟ್ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದ್ದಾರೆ. ತಮ್ಮ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಪೋಸ್ಟ್ ಹಂಚಿಕೊಳ್ಳುವ ಮೂಲಕ ಮ್ಯಾಥ್ಯೂಸ್ ತಮ್ಮ ಅಭಿಮಾನಿಗಳಿಗೆ ಈ ಮಾಹಿತಿಯನ್ನು ನೀಡಿದ್ದಾರೆ. 2009 ರಿಂದ ಈ ಸ್ವರೂಪದ ಭಾಗವಾಗಿದ್ದ ಮ್ಯಾಥ್ಯೂಸ್ ಅವರ ಈ ನಿರ್ಧಾರ ಶ್ರೀಲಂಕಾ ಕ್ರಿಕೆಟ್‌ಗೆ ದೊಡ್ಡ ಹೊಡೆತವಾಗಿದೆ.

**ನಿವೃತ್ತಿ ಘೋಷಿಸಿದ ಏಂಜೆಲೊ ಮ್ಯಾಥ್ಯೂಸ್:** ಏಂಜೆಲೊ ಮ್ಯಾಥ್ಯೂಸ್ 2009 ರಲ್ಲಿ ಗಾಲೆಯಲ್ಲಿ ನಡೆದಿದ್ದ ಪಾಕಿಸ್ತಾನ ವಿರುದ್ಧದ ಪಂದ್ಯದೊಂದಿಗೆ ಟೆಸ್ಟ್ ಕ್ರಿಕೆಟ್‌ಗೆ ಪಾದಾರ್ಪಣೆ ಮಾಡಿದ್ದರು. ತಮ್ಮ 16 ವರ್ಷಗಳ ಟೆಸ್ಟ್ ವೃತ್ತಿಜೀವನದಲ್ಲಿ ಮ್ಯಾಥ್ಯೂಸ್ 118 ಟೆಸ್ಟ್ ಪಂದ್ಯಗಳನ್ನು ಆಡಿದ್ದು, 44.63 ಸರಾಸರಿಯಲ್ಲಿ 8,167 ರನ್ ಗಳಿಸಿದ್ದಾರೆ. ಈ ಅವಧಿಯಲ್ಲಿ, ಅವರು 16 ಶತಕಗಳು ಮತ್ತು 45 ಅರ್ಧಶತಕಗಳನ್ನು ಬಾರಿಸಿದ್ದಾರೆ. ಇದರಲ್ಲಿ ಅವರ ಅತ್ಯುತ್ತಮ ಸ್ಕೋರ್ 200 ರನ್. ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ಕೊಡುಗೆ ನೀಡಿರುವ ಮ್ಯಾಥ್ಯೂಸ್, ತಮ್ಮ ವೃತ್ತಿಜೀವನದಲ್ಲಿ 33 ಟೆಸ್ಟ್ ವಿಕೆಟ್‌ಗಳನ್ನು ಕಬಳಿಸಿದ್ದರು. ಅಲ್ಲದೆ ಶ್ರೀಲಂಕಾ ಪರ ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದ ಮೂರನೇ ಆಟಗಾರರಾಗಿದ್ದು, ಕುಮಾರ್ ಸಂಗಕ್ಕಾರ ಮತ್ತು ಮಹೇಲ ಜಯವರ್ಧನೆ ನಂತರದ ಸ್ಥಾನದಲ್ಲಿದ್ದಾರೆ.

**2009ರಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪಾದಾರ್ಪಣೆ**



ತಮ್ಮ ನಿವೃತ್ತಿ ನಿರ್ಧಾರದ ಬಗ್ಗೆ ಸುದೀರ್ಘವಾಗಿ ಬರೆದುಕೊಂಡಿರುವ ಏಂಜೆಲೊ ಮ್ಯಾಥ್ಯೂಸ್, 'ನನ್ನ ಪ್ರೀತಿಯ ಸ್ನೇಹಿತರೇ ಮತ್ತು ಕುಟುಂಬವೇ, ಈಗ ನಾನು ಆಟದ ಅತ್ಯಂತ ಪ್ರೀತಿಯ ಸ್ವರೂಪವಾದ ಟೆಸ್ಟ್ ಕ್ರಿಕೆಟ್‌ಗೆ ವಿದಾಯ ಹೇಳುವ ಸಮಯ ಬಂದಿದೆ. ಕಳೆದ 17 ವರ್ಷಗಳಿಂದ ಶ್ರೀಲಂಕಾ ಪರ ಕ್ರಿಕೆಟ್ ಆಡುವುದು ನನಗೆ ಸಿಕ್ಕ ಅತ್ಯಂತ ದೊಡ್ಡ ಗೌರವ ಮತ್ತು ಹೆಮ್ಮೆ. ರಾಷ್ಟ್ರೀಯ ಜೆರ್ಸಿ ಧರಿಸಿದಾಗ ಮೂಡುವ ದೇಶಭಕ್ತಿ ಭಾವನೆಯನ್ನು ಯಾರೂ ಸರಿಗಟ್ಟಲು ಸಾಧ್ಯವಿಲ್ಲ. ನಾನು ನನ್ನ ಎಲ್ಲಾವನ್ನೂ ಕ್ರಿಕೆಟ್‌ಗೆ ನೀಡಿದ್ದೇನೆ ಮತ್ತು ಪ್ರತಿಯಾಗಿ ಕ್ರಿಕೆಟ್ ನನಗೆ ಎಲ್ಲಾವನ್ನೂ ನೀಡಿದೆ. ಜೂನ್‌ನಲ್ಲಿ ಬಾಂಗ್ಲಾದೇಶ ವಿರುದ್ಧದ ಮೊದಲ ಟೆಸ್ಟ್ ನನ್ನ ದೇಶಕ್ಕಾಗಿ ನನ್ನ ಕೊನೆಯ ರೆಡ್-ಬಾಲ್ ಪಂದ್ಯವಾಗಿರುತ್ತದೆ.

**ವೈಟ್ ಬಾಲ್ ಮಾದರಿಗೆ ಲಭ್ಯ:** ನಾನು ಟೆಸ್ಟ್ ಸ್ವರೂಪಕ್ಕೆ ವಿದಾಯ ಹೇಳುವುದರ ಬಗ್ಗೆ ಆಯ್ಕೆದಾರರೊಂದಿಗೆ ಚರ್ಚಿಸಲಾಗಿದೆ. ಅಲ್ಲದೆ ನನ್ನ ದೇಶಕ್ಕೆ ನನ್ನ ಅಗತ್ಯವಿದ್ದಾಗಲೆಲ್ಲಾ ನಾನು ಬಿಳಿ ಚೆಂಡಿನ ಸ್ವರೂಪಕ್ಕೆ ಆಯ್ಕೆಗೆ ಲಭ್ಯವಿರುತ್ತೇನೆ. ಲಂಕಾ ಟೆಸ್ಟ್ ತಂಡವು ಪ್ರತಿಭಾನ್ವಿತ ತಂಡವಾಗಿದ್ದು, ಭವಿಷ್ಯದ, ಪ್ರಸ್ತುತದ ಅನೇಕ ಶ್ರೇಷ್ಠ ಆಟಗಾರರು ಆಡುತ್ತಿದ್ದಾರೆ. ನಮ್ಮ ದೇಶಕ್ಕಾಗಿ ಯುವ ಆಟಗಾರನೊಬ್ಬ ಮಿಂಚಲು ಈಗ ದಾರಿ ಮಾಡಿಕೊಡಲು ಇದು ಅತ್ಯುತ್ತಮ ಸಮಯವೆಂದು ತೋರುತ್ತದೆ. ಒಂದು ಅಧ್ಯಾಯ ಮುಗಿದಿದೆ, ಆದರೆ ಆಟದ ಮೇಲಿನ ಪ್ರೀತಿ ಶಾಶ್ವತವಾಗಿ ಉಳಿಯುತ್ತದೆ ಎಂದು ಏಂಜೆಲೊ ಮ್ಯಾಥ್ಯೂಸ್ ಬರೆದುಕೊಂಡಿದ್ದಾರೆ.


**Printed by : A. BALACHANDRA, Printed at : RAJHANS ENTERPRISES** No. 134, 4th Main Road, Industrial Town, Rajajinagar, Bengaluru - 560044, Karnataka. **Owned By, Published By, Editor :T. HOMBE GOWDA,** No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news

**ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966**